ಕನ್ನಡ ವಿಶ್ವವಿದ್ಯಾಲಯ
ಹಂಪಿ

"ಕೊಡಗಿನ ಗೌರಮ್ಮನವರ ಕಥೆಗಳಲ್ಲಿ ಮಹಿಳಾ ಸಂವೇದನೆ"

ಎಂ.ಫಿಲ್. ಪದವಿಗಾಗಿ ಸಾದರಪಡಿಸಿದ ನಿಬಂಧ

ನಿಬಂಧಕಾರರು
ಡಿ.ಕೆ. ಸ್ಮೃತಿ
ಎಂ.ಫಿಲ್. ಪದವಿ
ಕುವೆಂಪು ವಿದ್ಯಾವರ್ಧಕ ಟ್ರಸ್ಟ್
ಜಯಲಕ್ಷ್ಮೀಪುರಂ, ಮೈಸೂರು

ಮಾರ್ಗದರ್ಶಕರು
ಪ್ರೊ. ಕಾಳೇಗೌಡ ನಾಗವಾರ
ನಿವೃತ್ತ ಪ್ರಾಧ್ಯಾಪಕರು

2006-07

"[illegible] [illegible]

[illegible]

ಕನ್ನಡ ವಿಶ್ವವಿದ್ಯಾಲಯ

ಹಂಪಿ

"ಕೊಡಗಿನ ಗೌರಮ್ಮನವರ ಕಥೆಗಳಲ್ಲಿ ಮಹಿಳಾ ಸಂವೇದನೆ"

ಎಂ.ಫಿಲ್. ಪದವಿಗಾಗಿ ಸಾದರಪಡಿಸಿದ ನಿಬಂಧ

ನಿಬಂಧಕಾರರು

ಡಿ.ಕೆ. ಸ್ಮೃತಿ

ಎಂ.ಫಿಲ್. ಪದವಿ

ಕುವೆಂಪು ವಿದ್ಯಾವರ್ಧಕ ಟ್ರಸ್ಟ್

ಜಯಲಕ್ಷ್ಮೀಪುರಂ, ಮೈಸೂರು

ಮಾರ್ಗದರ್ಶಕರು

ಪ್ರೊ. ಕಾಳೇಗೌಡ ನಾಗವಾರ

ನಿವೃತ್ತ ಪ್ರಾಧ್ಯಾಪಕರು

2006-07

ಘೋಷಣಾ ಪತ್ರ

ಕನ್ನಡ ವಿಶ್ವವಿದ್ಯಾನಿಲಯದಲ್ಲಿ ಎಂ.ಫಿಲ್. ಪದವಿ ವಿದ್ಯಾರ್ಥಿನಿಯಾಗಿ ಅಧ್ಯಯನ ಮಾಡುತ್ತಿರುವ ನಾನು ಎಂ.ಫಿಲ್. ಪದವಿಯ ಒಂದು ಭಾಗವಾದ ನಿಬಂಧ ರಚನೆಗೆ ಸಂಬಂಧಿಸಿದಂತೆ **"ಕೊಡಗಿನ ಗೌರಮ್ಮನವರ ಕಥೆಗಳಲ್ಲಿ ಮಹಿಳಾ ಸಂವೇದನೆ"** ಎಂಬ ಈ ವಿಷಯವನ್ನು ಆಯ್ಕೆ ಮಾಡಿಕೊಂಡು ಸಂಶೋಧನಾ ನಿಬಂಧವನ್ನು ಸಿದ್ಧಪಡಿಸಿರುತ್ತೇನೆ. ಈ ಸಂಶೋಧನಾ ನಿಬಂಧವನ್ನು ಈ ಮೊದಲು ಭಾಗಶಃ ವಾಗಲಿ, ಪೂರ್ಣವಾಗಿಯಾಗಲಿ ಬೇರಾವುದೇ ಪದವಿ ಅಥವಾ ಡಿಪ್ಲೋಮೋಗಳಿಗಾಗಲಿ ಒಪ್ಪಿಸಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ನಿಬಂಧಕರ ಸಹಿ

ಸ್ಥಳ : ಮೈಸೂರು.
ದಿನಾಂಕ: 28-7-2007

(ಡಿ.ಕೆ. ಸ್ಮೃತಿ)

ಮಾರ್ಗದರ್ಶಕರ ಪ್ರಮಾಣ ಪತ್ರ

ನಿಬಂಧಕರು, **ಡಿ.ಕೆ. ಸ್ಮೃತಿ**, ಎಂ.ಫಿಲ್. ಪದವಿ ವಿದ್ಯಾರ್ಥಿನಿ, ನನ್ನ ಮಾರ್ಗದರ್ಶನದಲ್ಲಿ ಎಂ.ಫಿಲ್. ಪದವಿಯ ಒಂದು ಭಾಗವಾದ ನಿಬಂಧ ರಚನೆಗೆ ಸಂಬಂಧಿಸಿದಂತೆ **"ಕೊಡಗಿನ ಗೌರಮ್ಮನವರ ಕಥೆಗಳಲ್ಲಿ ಮಹಿಳಾ ಸಂವೇದನೆ"** ಎಂಬ ಈ ವಿಷಯವನ್ನು ಸಿದ್ಧಪಡಿಸಿರುತ್ತಾರೆ. ಈ ನಿಬಂಧವನ್ನು ಈ ಮೊದಲು ಭಾಗಶಃವಾಗಲಿ, ಪೂರ್ಣವಾಗಿಯಾಗಲಿ ಬೇರಾವುದೇ ಪದವಿ ಅಥವಾ ಡಿಪ್ಲೊಮೋಗಳಿಗಾಗಿ ಒಪ್ಪಿಸಿಲ್ಲ.

ಮಾರ್ಗದರ್ಶಕರು

ಸ್ಥಳ : ಮೈಸೂರು.
ದಿನಾಂಕ: 28.07.2007

(ಪ್ರೊ. ಕಾಳೇಗೌಡ ನಾಗವಾರ)

ಕೊಡಗಿನ ಗೌರಮ್ಮನವರ ಕಥೆಗಳಲ್ಲಿ ಮಹಿಳಾ ಸಂವೇದನೆ

ಪರಿವಿಡಿ



ಕೊಡಗಿನ ಗೌರಮ್ಮ
(೧೯೧೨ ರಿಂದ ೧೯೩೯)

ಕೊಡಗಿನ ಗೌರಮ್ಮನವರ ಕಥೆಗಳಲ್ಲಿ ಮಹಿಳಾ ಸಂವೇದನೆ

ಪೀಠಿಕೆ:

ಸಾಹಿತ್ಯವೆಂಬುದು ಭೂತಕಾಲದ ಗತ ಇತಿಹಾಸವಾಗಿ, ವರ್ತಮಾನದ ಕತೆಯಾಗಿ, ಭವಿಷ್ಯದ ಕನಸಾಗಿ ಮೂಡಿಬರುವ ಅಸಾಮಾನ್ಯ ಚಕ್ಷು ಗೋಚರವಾದ ನವಪರಿ ಪ್ರೇಕ್ಷಣೀಯ ನವ ಸೃಷ್ಟಿ. ಈ ನವ ಸೃಷ್ಟಿಯಲ್ಲಿ ನಮಗೆ ಕಾಣಿಸುವುದು ದೃಷ್ಟಿಗೋಚರವಾದ ಜಗತ್ತಿನಿಂದ ಭಿನ್ನವಾದ, ವಿಶಿಷ್ಟತಮವಾದ ದೃಷ್ಟಿ ಒಂದರ್ಥದಲ್ಲಿ ಸಾಹಿತ್ಯ ನಮ್ಮ ನಿತ್ಯ ಜೀವನದ ಪ್ರತಿಬಿಂಬವೂ ಹೌದು ! ಗತಿ ಬಿಂಬವೂ ಸಹ ಆಗಿದೆ. ನಮ್ಮೆಲ್ಲರ ಅರಿವಿಗೆ ಬಂದಿರುವಂತೆ ಬದುಕಿನಲ್ಲಿ ಸ್ಥಿತ್ಯಂತರಗಳು ತೀರ ಸಹಜ. ಮಾನವ ಬದುಕಿನ ಪ್ರತಿಬಿಂಬವಾದ ಸಾಹಿತ್ಯದಲ್ಲಿಯೂ ಇಂತಹ ಸ್ಥಿತ್ಯಂತರಗಳು ನಿರಂತರವಾಗಿರುತ್ತವೆ. ಕನ್ನಡ ಸಾಹಿತ್ಯವೂ ಈ ಮಾತಿಗೆ ಹೊರತಾದುದೇನಲ್ಲ.

ಸಾವಿರದ್ಯೆನೂರು ವರ್ಷಗಳ ಸಂಪದ್ಯುಕ್ತ ಸಾಹಿತ್ಯೇತಿಹಾಸವನ್ನು ಹೊಂದಿರುವ ಕನ್ನಡ ಸಾಹಿತ್ಯವನ್ನು ಪ್ರಾಚೀನಯುಗ ಮಧ್ಯಕಾಲೀನ ಯುಗ ಹಾಗೂ ಅರ್ವಾಚೀನ ಯುಗವೆಂಬುದಾಗಿ ಸ್ಥೂಲವಾಗಿ ವಿಭಜಿಸಿ ಗುರುತಿಸಬಹುದು. ಅಲ್ಲದೆ ಅರ್ವಾಚೀನ ಅಥವಾ ಆಧುನಿಕ ಕನ್ನಡ ಸಾಹಿತ್ಯವನ್ನು ಮತ್ತೆ ನವೋದಯ, ಪ್ರಗತಿಶೀಲ, ನವ್ಯ ಹಾಗೂ ನವ್ಯೋತ್ತರ (ದಲಿತ-ಬಂಡಾಯ) ಎಂಬ ವಿಭಾಗಗಳಲ್ಲಿ ಪ್ರತ್ಯೇಕಿಸಿ ಅಧ್ಯಯನ ನಡೆಸಬಹುದು.

ಹಲವಾರು ನೂತನ ಪ್ರಯೋಗ ಶಾಲೆಯಂತಿದ್ದ ನವೋದಯ ಸಾಹಿತ್ಯ ಸಂದರ್ಭ ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆಯಲ್ಲೂ ಐತಿಹಾಸಿಕವಾಗಿ ಮುಖ್ಯವಾದುದು ಹಾಗೂ ಅಧ್ಯಯನ ಯೋಗ್ಯವಾದದ್ದು ಆಗಿದೆ. ಬ್ರಿಟಿಷ್ ವಸಹಾತುಶಾಹಿಯ ಆಗಮನದಿಂದ

[illegible]

[illegible]

[illegible]
[illegible]
[illegible]
[illegible]
[illegible]
[illegible]
[illegible]
[illegible]

[illegible]
[illegible]
[illegible]
[illegible]
[illegible]

[illegible]
[illegible]
[illegible]

ಉಂಟಾದ ವಿವಿಧ ಪ್ರತಿಕ್ರಿಯೆಗಳಲ್ಲಿ ನವೋದಯ ಸಾಹಿತ್ಯ ಸಂಸ್ಕೃತಿಯ ಆವಿರ್ಭಾವವು ಒಂದಾಗಿದೆ. ಪಾಶ್ಚಾತ್ಯ ಪ್ರೇರಣೆಯಿಂದ ಅಖಿಲ ಭಾರತ ಮಟ್ಟದಲ್ಲಿ ಘಟಿಸಿದ ಈ ಸಂದರ್ಭ ಮೊದಲಿಗೆ ಬಂಗಾಲಿಯಲ್ಲಿ ಅನಂತರ ಹಿಂದಿ, ಮರಾಠಿ, ಗುಜರಾತಿ, ಭಾಷೆಗಳಲ್ಲಿ ಅವತರಿಸಿ ಕನ್ನಡಕ್ಕೆ ಸ್ವಲ್ಪ ತಡವಾಗಿಯೇ ಬಂದಿತೆನ್ನಬಹುದು. ನವೋದಯ ಕಾಲದಲ್ಲಿ ಹೆಸರಿಗೆ ತಕ್ಕಂತೆ ಕನ್ನಡ ಸಾರಸ್ವತ ಪ್ರಪಂಚದಲ್ಲಿ ನೂತನದ ಉದಯ ಬೆಳಕು ಹರಿಯತೊಡಗಿತು. ಸುಶಿಕ್ಷಿತ ಸಂವೇದನೆಗಳಿಂದ ನವೋದಯ ಶಿಷ್ಟ ಸಾಹಿತ್ಯವನ್ನು ಸೃಷ್ಟಿಸುತ್ತಿದ್ದ ಮಾಸ್ತಿ, ಬೇಂದ್ರೆ, ಕುವೆಂಪು, ಕಾರಂತ, ಪುತಿನ ಮುಂತಾದ ಸಾಹಿತಿಗಳು ಜನರ ಅಭಿರುಚಿಯನ್ನು ತಿದ್ದುವಲ್ಲಿ, ರೂಪಿಸುವಲ್ಲಿ ಮಹತ್ವದ ಪಾತ್ರ ವಹಿಸಿದರು.

ಆದರೆ ಪುರುಷರು ತಮ್ಮನ್ನು ಸಾಹಿತ್ಯ ಕ್ಷೇತ್ರಕ್ಕೆ ತೊಡಗಿಸಿಕೊಂಡಷ್ಟು ಸುಲಭವಾಗಿ ಮಹಿಳೆಯರಿಗೆ ಅದು ಸುಲಭ ಸಾಧ್ಯವಾಗಿರಲಿಲ್ಲ. ಕಾರಣ ಹೆಣ್ಣಿನ ಸ್ವಂತ ಭಾವನೆಗಳು, ಆಲೋಚನೆಗಳು ಪುರುಷ ಹಿತಾಸಕ್ತಿಗಳ ನಿಯಂತ್ರಣಕ್ಕೆ ಒಳಗಾಗಿ ಆಕೆಯ ಭಾವನೆ ಆಲೋಚನೆಗಳೆಲ್ಲವೂ ನಾಲ್ಕು ಗೋಡೆಗಳ ನಡುವೆ ಗಂಡನ ಸೇವೆ, ಮಕ್ಕಳ ಪಾಲನೆ, ಪೋಷಣೆ ಇತ್ಯಾದಿ ಸಂಗತಿಗಳಲ್ಲಿ ಕರಗಿ ಹೋಗಿದ್ದರ ಜೊತೆಗೆ ಅವಳು ಸಂಪ್ರದಾಯವೆಂಬ ಸಂಕೋಲೆಯಲ್ಲಿ ಸಿಲುಕಿದ್ದಳು. ಇಂಥ ಸಂದರ್ಭದಲ್ಲಿ ಅಕ್ಷರ ಸಂಸ್ಕೃತಿಗೆ ಮೊದಲ ಬಾರಿಗೆ ತಮ್ಮನ್ನು ತೆರೆದುಕೊಂಡ ಹಲವಾರು ಮಹಿಳೆಯರು ಈ ಕಾಲದ ಸಾಹಿತ್ಯಕ್ಕೆ ಓದುಗರಾದರು. ಸಾಹಿತ್ಯ ರಚನೆಗೆ ತೊಡಗಿದರು. ಈ ಕಾಲದಲ್ಲಿ ಬರಹದಲ್ಲಿ ಮೊದಲು ಕೈ ಹಾಕಿದ ಆಧುನಿಕ ಯುಗದ ಮಹಿಳೆಯರೆಂದರೆ ತಿರುಮಲಾಂಬ, ಕಲ್ಯಾಣಮ್ಮ, ಸರಸ್ವತಿಬಾಯಿ ರಾಜವಾಡೆ, ಎಂ.ಕೆ. ಇಂದಿರಾ, ಕೊಡಗಿನ ಗೌರಮ್ಮ, ಶ್ಯಾಮಲಾದೇವಿ, ತ್ರಿವೇಣಿ ಮುಂತಾದವರನ್ನು ಹೆಸರಿಸಬಹುದು.

ಮೊದಲಿಗೆ ಈ ಲೇಖಕಿಯರು ಶಿಕ್ಷಣವನ್ನು ಗಳಿಸಿಕೊಂಡ ಬಗೆಯೇ ಈ ಕಾಲಕ್ಕೆ ಒಂದು ದೊಡ್ಡ ಪವಾಡವೆನಿಸಿತ್ತು. ಸ್ತ್ರೀಯರ ಶಿಕ್ಷಣದ ಬಗ್ಗೆ ಅತ್ಯಂತ ತಿರಸ್ಕಾರವಿದ್ದ ಸಂಪ್ರದಾಯಸ್ಥ ಪರಿಸರಗಳಲ್ಲಿ ಹಲಗೆ -ಬಳಪ ಹಿಡಿಯುವುದೇ ಈ ಲೇಖಕಿಯರ ಮೊಟ್ಟ ಮೊದಲ ಪ್ರತಿಭಟನಾ ವಿಧಾನವಾಗಿತ್ತು. ಸಾಹಿತ್ಯದ ಮೂಲಕ ಹಿಂದುಳಿದಿರುವ ಸ್ತ್ರೀಕುಲವನ್ನು ಎಚ್ಚರಿಸಿ, ಮೇಲೆತ್ತಬೇಕು. ಅದಕ್ಕಾಗಿ ಬರಹವನ್ನು ಬಹು ಪ್ರಬಲವಾದ ಸಾಧನವಾಗಿಸಿಕೊಳ್ಳಬೇಕೆಂದು ಇವರ ಏಕೈಕ ಧ್ಯೇಯವಾಗಿತ್ತು.

ಸಮಾಜದ ಮೇಲುಜಾತಿಯವರಲ್ಲಿ ಅಂದಿನ ತೀವ್ರತರ ಸಮಸ್ಯೆ, ವಿಧವೆಯರ ಕೇಶಮಂಡನದ ಸಮಸ್ಯೆ, ವರದಕ್ಷಿಣೆ ಸಮಸ್ಯೆ, ಮಹಿಳೆಯರ ಮೇಲೆ ಶೋಷಣೆ, ಅತ್ಯಾಚಾರ, ಅವಮಾನಗಳನ್ನು ಅತ್ಯಂತ ನಿಕಟನೆಲೆಯಲ್ಲಿ ಗ್ರಹಿಸಿ ತಮ್ಮ ಕೃತಿಗಳಲ್ಲಿ ಅಂತಹ ಸಂದರ್ಭಗಳನ್ನು ಚರ್ಚೆಗೆ ಗುರಿಪಡಿಸಿ ಅಂಥ ಆಚರಣೆಯನ್ನು ಬಲವಾಗಿ ನಿರಾಕರಿಸಿದ್ದಾರೆ.

ಸ್ತ್ರೀಯರ ಪರ-ವಿರುದ್ಧವಿರುವ ಜನರ ಮನೋವೃತ್ತಿಗಳನ್ನು ಪಾತ್ರವಾಗಿ ಕಲ್ಪಿಸಿ ನಾಯಕಿಯರ ಮೂಲಕ ಅಂಥ ಜನರನ್ನೆಲ್ಲಾ ತಿದ್ದಿ, ಸರಿದಾರಿಗೆ ತರುವ ರೀತಿಯನ್ನು ಲೇಖಕಿಯರು ತಮ್ಮ ಕೃತಿಗಳಲ್ಲಿ ರಚಿಸಿದ್ದಾರೆ.

ಒಟ್ಟಿನಲ್ಲಿ ಆಧುನಿಕ ಕನ್ನಡ ಮಹಿಳಾ ಸಾಹಿತ್ಯದ ಪರಂಪರೆಯ ಮೊದಲ ಹಂತವನ್ನು ನಿರ್ಮಿಸಿದವರಲ್ಲಿ ಕೊಡಗಿನ ಗೌರಮ್ಮ ಪ್ರಮುಖರಾಗಿದ್ದಾರೆ. ಅವರ ಕಥೆಗಳು ಇಂದಿಗೂ ಜೀವಂತವಾಗಿವೆ. ಇವರ ಕತೆಗಳಲ್ಲಿ ಮಹಿಳಾ ಸಂವೇದನೆ ಬಹಳ ಅಚ್ಚುಕಟ್ಟಾಗಿ ಮೂಡಿ ಬಂದಿದೆ. ನನ್ನ ಅಧ್ಯಯನದ ಉದ್ದೇಶಕ್ಕಾಗಿ ಇವರ ಕಥೆಗಳಲ್ಲಿ ಮಹಿಳಾ ಸಂವೇದನೆ ಮತ್ತು ಸಾಮಾಜಿಕ ಕಾಳಜಿಗಳು ಹೇಗೆ ಮೂಡಿಬಂದಿವೆ ಎಂಬುದನ್ನು ಅಧ್ಯಯನ ನಡೆಸಿದ್ದೇನೆ.

ಮೊದಲನೆಯ ಅಧ್ಯಾಯದಲ್ಲಿ ಕೊಡಗಿನ ಗೌರಮ್ಮನವರ ಜೀವನ ಚರಿತ್ರೆ ಮತ್ತು ಅವರ ಮೇಲೆ ಗಾಂಧೀಜಿಯವರ ಪ್ರಭಾವವನ್ನು ಕಾಣುತ್ತೇವೆ. ಎರಡನೆಯ ಅಧ್ಯಾಯದಲ್ಲಿ ನವೋದಯ ಸಾಹಿತ್ಯದಲ್ಲಿ ಸಂಸ್ಕೃತಿಯ ವಿಕಾಸ ಮತ್ತು ಸ್ತ್ರೀ ಎಂಬುದರ ಬಗ್ಗೆ ಅಧ್ಯಯನ ನಡೆಸಿದ್ದೇನೆ. ಗೌರಮ್ಮನವರ ಕಥೆಗಳಲ್ಲಿ ಮಹಿಳಾ ಸಂವೇದನೆ ಹೇಗೆ ಮೂಡಿ ಬಂದಿದೆ ಎಂಬುದು 3ನೇ ಅಧ್ಯಾಯದಲ್ಲಿ ನೋಡಬಹುದು. 4ನೇ ಅಧ್ಯಾಯದಲ್ಲಿ ಸಣ್ಣ ಕತೆ ಬೆಳೆದು ಬಂದ ರೀತಿಯನ್ನು ಅಧ್ಯಯನ ಮಾಡಿದ್ದೇನೆ. ಗೌರಮ್ಮನವರ ಕತೆಗಳಲ್ಲಿ ಸಾಮಾಜಿಕ ಕಾಳಜಿಗಳು ಹೇಗೆ ಮೂಡಿ ಬಂದಿವೆ ಎಂಬುದನ್ನು 5ನೇ ಅಧ್ಯಾಯದಲ್ಲಿ ಅಧ್ಯಯನ ಮಾಡಿದ್ದೇನೆ.

ಕೊಡಗಿನ ಗೌರಮ್ಮ (1912 - 1939)

ಕನ್ನಡ ನವೋದಯ ಕಾಲದ ಸೃಜನಶೀಲ ಸಾಹಿತಿಯಾಗಿ, ಅದರಲ್ಲೂ ಮಹಿಳಾ ಸಾಹಿತಿಯಾಗಿ ತುಂಬ ಹೆಸರಾದವರು, ನಿಸರ್ಗ ರಮಣೀಯತೆಗೆ ನೆಲೆವೀಡಾದ ಕೊಡಗಿನವರು. ಕೆಲವೇ ದಿನಗಳ ದಾಂಪತ್ಯ ಜೀವನವನ್ನು ಅನುಭವಿಸಿದ ಇವರು ತಮ್ಮ ಇಪ್ಪತ್ತೇಳನೆ ವಯಸ್ಸಿನಲ್ಲಿ ಹರಿಯುವ ನೀರಿನಲ್ಲಿ ಜಾರಿಬಿದ್ದು ಅಕಾಲ ಮರಣಕ್ಕೆ ತುತ್ತಾದರು. ತಮ್ಮ ಸೂಕ್ಷ್ಮ ಸಂವೇದನೆಯಿಂದ ಕನ್ನಡ ಕಥಾ ಪ್ರಪಂಚಕ್ಕೆ ಹೊಸದಾರಿ ತೋರಿದ ವಿಶಿಷ್ಟ ಕತೆಗಾರ್ತಿಯಾಗಿದ್ದಾರೆ. ಇವರು ಸಣ್ಣಕತೆಗಳಲ್ಲಿ "ಹೆಣ್ಣಿನ ಮನಸ್ಸಿನ ಒಳತೋಟಿಗಳು, ಭಾವುಕ ಸಂಘರ್ಷಗಳು, ಅಸಹಾಯಕತೆಗಳು ಹಾಗೂ ಸ್ತ್ರೀ ಮನಸ್ಸಿನ ಭಾವುಕ ಪ್ರಪಂಚದ ಸೂಕ್ಷ್ಮತೆಗಳು ಪ್ರತಿಬಿಂಬಿತವಾಗಿವೆ".[1]

"ಕಂಬನಿ" ಮತ್ತು "ಚಿಗುರು" ಈ ಎರಡು ಕಥಾ ಸಂಕಲನಗಳನ್ನು ಕಥಾ ಸಾಹಿತ್ಯಕ್ಕೆ ನೀಡಿದ ಅಮೂಲ್ಯ ಕೊಡುಗೆಗಳಾಗಿವೆ. ಸ್ತ್ರೀ ಮುಕ್ತಿ ಆಂದೋಲನ ಇನ್ನೂ ಕಣ್ಣು ಬಿಡುವ ಮೊದಲೇ ಇಪ್ಪತ್ತನೇ ಶತಮಾನದ ಆರಂಭದಲ್ಲಿ ಆ ಧೋರಣೆ ನಿಲುವುಗಳನ್ನು ತಾಳಿ ಕಥೆಗಳನ್ನು ರಚಿಸಿದ ಕೀರ್ತಿ ಇವರಿಗೆ ಸಲ್ಲುತ್ತದೆ. ಸಾಂಪ್ರದಾಯಿಕ ಸಮಾಜದ ನವುರಾದ ವಿಡಂಬನೆ, ನಿರಂತರ ಜೀವನ ಪ್ರೀತಿ ಗೌರಮ್ಮನವರ ಕಥೆಗಳಲ್ಲಿ ಕಂಡುಬರುತ್ತದೆ. "ಹೆಣ್ಣು" ಇವರ ಎಲ್ಲ ಕಥೆಗಳ ಕೇಂದ್ರಬಿಂದು, ಪ್ರಧಾನ ಆಶಯ.[2]

ಕರ್ನಾಟಕದ ಪಶ್ಚಿಮ ಘಟ್ಟದ ಸುಂದರವಾದ ತಾಣಗಳಲ್ಲಿ ಕೊಡಗು ಮುಖ್ಯವಾದುದು. ಇಲ್ಲಿನ ಪರಿಶುದ್ಧ ಮತ್ತು ತಂಪು ವಾತಾವರಣದ ಗಿರಿಜನ ಪ್ರದೇಶದಲ್ಲಿ 5-3-1912ರಂದು

ಹುಟ್ಟಿದರು. ಗೌರಮ್ಮನವರ ಪೂರ್ವಜರು ಮೂಲತಃ ವಿಟ್ಲ ಸೀಮೆಯವರಾಗಿದ್ದು ಕ್ರಮೇಣ ಕುಕ್ಕೆ ಸುಬ್ರಹ್ಮಣ್ಯ ಭಾಗದಿಂದ ಘಟ್ಟದ ಮೇಲಿನ ಮಲೆನಾಡು ಪ್ರದೇಶವಾದ ಕೊಡಗಿನಲ್ಲಿ ಬಂದು ನೆಲೆಸಿದ ಹವ್ಯಕ ಬ್ರಾಹ್ಮಣ ಸಂಪ್ರದಾಯದವರು. ತಂದೆ ವಕೀಲರಾಗಿದ್ದ ಎನ್.ಎಸ್. ರಾಮಯ್ಯ, ತಾಯಿ ನಂಜಕ್ಕ. ಮಡಿಕೇರಿಯ ಸೆಂಟ್ರಲ್ ಹೈಸ್ಕೂಲಿನಲ್ಲಿ ಈಕೆ ಎಸ್.ಎಸ್.ಎಲ್.ಸಿ. ತನಕ ಓದಿದ್ದರು. ಆರು ವರ್ಷದ ಮಗುವಾಗಿದ್ದಾಗ ಗೌರಮ್ಮ ತಾಯಿ-ತಂದೆಯ ಜೊತೆಯಲ್ಲಿ ಕಾಶಿಗೆ ಹೋಗಿದ್ದರು. ಅಲ್ಲೇ ತಾಯಿ ತೀರಿಕೊಂಡರು.

ಗೌರಮ್ಮನವರ ಹದಿಹರೆಯದ ದಿನಗಳು ಮಡಿಕೇರಿಯ ಸುಂದರ ವಾತಾವರಣದಲ್ಲಿ ಕಳೆದವು. "ಕೊಡಗಿನ ಹುಡುಗಿ ಮುತ್ತಮ್ಮ" ಕೃತಿ ಬರೆದ ಪದ್ಮಾವತಿ ರಸ್ತೋಗಿ ಆ ಕಾಲಕ್ಕೆ ಹಿಂದಿ, ಇಂಗ್ಲೀಷ್ ಮತ್ತು ಕನ್ನಡದಲ್ಲಿ ಬರೆಯುತ್ತಿದ್ದ ಆತ್ಮೀಯ ಗೆಳತಿಯಾಗಿದ್ದರು.[3] ಪ್ರಸಿದ್ಧ ಸಾಮಾಜಿಕ ಕಾರ್ಯಕರ್ತೆ ಮತ್ತು ಲೇಖಕಿಯಾಗಿದ್ದ ಆರ್. ಕಲ್ಯಾಣಮ್ಮ ಅವರೊಡನೆ ಗೌರಮ್ಮ ಸಂಪರ್ಕವನ್ನು ಹೊಂದಿದ್ದರು. ಮಾಸ್ತಿ ಮತ್ತು ಬೇಂದ್ರೆಯವರು ಇವರಲ್ಲಿಗೆ ಅಪರೂಪಕ್ಕೆ ಬಂದು ಹೋಗುತ್ತಿದ್ದರು. ಪ್ರವಾಸಪ್ರಿಯರಾಗಿದ್ದ ಸಾಹಸಿ ಶಿವರಾಮ ಕಾರಂತರ ಪರಿಚಯವೂ ಇತ್ತು.

ಹೀಗಾಗಿ ಸಾಹಿತ್ಯ ಮತ್ತು ಸಾಂಸ್ಕೃತಿಕ ವಲಯದ ಚರ್ಚೆ, ಬದಲಾವಣೆಗಳು ಮತ್ತು ಹೊಸ ಬರವಣಿಗೆಯ ಸಂಪರ್ಕ ಗೌರಮ್ಮನವರ ಬರವಣಿಗೆಗೆ ಪೂರಕವಾಗಿದ್ದವು. ಯಕ್ಷಗಾನ ಮತ್ತು ತಾಳಮದ್ದಲೆಯ ಪ್ರಭಾವದ ಜೊತೆಗೆ ಕುಮಾರವ್ಯಾಸ ಮತ್ತು ಉಮರ್ ಖಯಾಮ್ ಕಾವ್ಯದ ಬಗ್ಗೆ ಅತೀವವಾದ ಆಸಕ್ತಿಯನ್ನು ಹೊಂದಿದ್ದರು. ಜಾನಪದದ ಬಗ್ಗೆ ಮನತೆರೆದು ಕುತೂಹಲ ಇದ್ದ ಇವರು ಕೆಲವು ಜನಪದ ಗೀತೆಗಳನ್ನು ಸಹ ಸಂಗ್ರಹಿಸಿದ್ದರು. ದೂರದ ಜಮಖಂಡಿಗೆ ಹೋಗಿ ಅಲ್ಲಿನ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಕೊಡಗಿನ ಪ್ರತಿನಿಧಿಯಾಗಿ

ಭಾಗವಹಿಸಿದ್ದರು. ಹಾಗೆಯೇ ಮಡಿಕೇರಿಯಲ್ಲಿ ನಡೆದ ಆ ಕಾಲದ ಐತಿಹಾಸಿಕ ಸಾಹಿತ್ಯ ಸಮ್ಮೇಳನದಲ್ಲಿ ಸಕ್ರಿಯವಾಗಿ ಪಾಲ್ಗೊಂಡಿದ್ದರು.

ಇವರ ಒಂದು ಕಥೆಗೆ ಉಡುಪಿ ಗೆಳೆಯರ ಬಳಗದಿಂದ ಚಿನ್ನದ ಪದಕ ದೊರೆಯಿತು. ಕೊಡಗಿನ ಮತ್ತೊಬ್ಬ ತರುಣ ಸಾಹಿತಿ ಭಾರತೀಸುತರು ಇವರನ್ನು ಗೌರವದಿಂದ ಕಂಡು ಸಲಹೆ ಸೂಚನೆಗಳನ್ನು ಪಡೆಯುತ್ತಿದ್ದರು. ಮುಳಿಯ ತಿಮ್ಮಪ್ಪಯ್ಯನವರು ಇವರ ಕೆಲವು ಕಥೆಗಳನ್ನು ಮೆಚ್ಚಿದ್ದರು. ಹೀಗೆ ಗೌರಮ್ಮನವರು ತಮ್ಮ ಅಪಾರ ಸಾಹಿತ್ಯ ಆಸಕ್ತಿಯಿಂದ ಎಲ್ಲರ ಗಮನ ಸೆಳೆದಿದ್ದರು.

ತಮ್ಮ ಮಿತವಾದ ಆದಾಯದಲ್ಲಿಯೇ ಗೌರಮ್ಮ ಸಂಸಾರದ ಖರ್ಚು-ವೆಚ್ಚಗಳನ್ನು ಸರಿದೂಗಿಸುತ್ತಿದ್ದರು. ಸದಭಿರುಚಿಯನ್ನು ಕಾಯ್ದಿಟ್ಟುಕೊಳ್ಳುತ್ತಲೇ ತಮ್ಮ ಸಂಪರ್ಕಕ್ಕೆ ಬಂದವರನ್ನು ಅಕ್ಕರೆಯಿಂದ ಸತ್ಕರಿಸುತ್ತಿದ್ದರು. ಸ್ನೇಹಜೀವಿಯಾಗಿದ್ದ ಈಕೆ ಉತ್ತಮ ಮಾತುಗಾರ್ತಿಯಾಗಿದ್ದರು. ಆದರೆ ಸಾರ್ವಜನಿಕ ಸಭೆಗಳಲ್ಲಿ ಭಾಗವಹಿಸಲು, ಮಾತನಾಡಲು ಹಿಂಜರಿಯುತ್ತಿದ್ದರು.

ಸೂಕ್ಷ್ಮವಾದ ರಾಜಕೀಯ ಪರಿಜ್ಞಾನವನ್ನು ಹೊಂದಿದ್ದ ಗೌರಮ್ಮ ಗಾಂಧೀಜಿ ನೇತೃತ್ವದ ಕಾಂಗ್ರೆಸ್‌ಗಾಗಿ ಕೈಲಾದ ಮಟ್ಟಿಗೆ ದುಡಿದರು. ಸ್ವಾತಂತ್ರ್ಯ ಚಳುವಳಿಯಲ್ಲಿ ತೀವ್ರವಾದ ಆಸಕ್ತಿಯನ್ನು ಹೊಂದಿದ್ದರು. ಖಾದಿ ಬಟ್ಟೆ ತೊಡುತ್ತಿದ್ದರು. ಮಹಾತ್ಮಗಾಂಧೀಜಿಯವರ ಪರಮ ಅನುಯಾಯಿಯಾಗಿದ್ದ ಆಕೆಯು ತಮ್ಮ ಇಪ್ಪತ್ತೊಂದನೆಯ ವಯಸ್ಸಿನಲ್ಲಿ ಆಶ್ಚರ್ಯಕರವಾಗಿ ಗಾಂಧೀಜಿಯವರ ಮನಸ್ಸನ್ನು ಸೂರೆಗೊಂಡಿದ್ದು ಹೆಮ್ಮೆಪಡುವ ಸಂಗತಿಯಾಗಿ ದಾಖಲಾಗಿದೆ. 1933ನೇ ವರ್ಷದ ಕೊನೆಯಲ್ಲಿ ಗಾಂಧೀಜಿಯವರು ಕರ್ನಾಟಕ ಪ್ರವಾಸದಲ್ಲಿದ್ದಾಗ

ಕೊಡಗಿನಲ್ಲಿ ಎರಡು ದಿನಗಳ ಕಾಲ ಇದ್ದರು. ತಮ್ಮಂತಹ ಸಾಧಾರಣ ಕುಟುಂಬದವರ ಮನೆಗಳಿಗೂ ಮಹಾತ್ಮರ ಆಗಮನ ಆಗಬೇಕೆಂದು ಹಠ ಹಿಡಿದ ಗೌರಮ್ಮ ಉಪವಾಸ ಸತ್ಯಾಗ್ರಹ ಆರಂಭಿಸಿದರು.

ಆರಂಭದಲ್ಲಿ ಇದನ್ನೆಲ್ಲ ಗಮನಿಸದಿದ್ದ ಗಾಂಧೀಜಿಯವರು ನಿಜಸಂಗತಿ ತಿಳಿದು ಹೌಹಾರಿದರು. ಈ ಎಳೆಯ ಚಿಲುಮೆಯ ಮನೆಯ ಅಂಗಳಕ್ಕೆ ತಾವೇ ಬಂದು ತಮ್ಮ ಕೈಯಾರೆ ಅದೇ ಕೊಡಗಿನ ಕಿತ್ತಳೆ ಹಣ್ಣು ನೀಡಿ ಉಪವಾಸ ನಿಲ್ಲಿಸಬೇಕೆಂದು ವಾತ್ಸಲ್ಯಪೂರ್ವಕವಾಗಿ ಕೇಳಿಕೊಂಡರು. ಆಕೆಗೆ ಪರಮಾನಂದವಾಯಿತು. ಗಾಂಧೀಜಿಯವರ ಸ್ವಾತಂತ್ರ್ಯ ಸಂಗ್ರಾಮ ಮತ್ತು ಹರಿಜನೋದ್ಧಾರ ಸಂಬಂಧದ ನಿಧಿಗೆ ತನ್ನ ಮೈಮೇಲಿದ್ದ ಆಭರಣಗಳನ್ನು ನೀಡಿದರು. ಕೊರಳಿನ ಮಂಗಳಸೂತ್ರ, ಕಿವಿಯ ಓಲೆ ಮತ್ತು ಮೂಗು ಬೊಟ್ಟಿನ ಹೊರತಾಗಿ ಉಳಿದೆಲ್ಲ ಒಡವೆಗಳು ಮಹಾತ್ಮರ ಕೈ ಸೇರಿದಾಗ ಅವರು ಅವಾಕ್ಕಾದರು.

ಕೈ ಹಿಡಿದ ಪತಿ ಬಿ.ಟಿ. ಗೋಪಾಲಕೃಷ್ಣ ಅವರು ಕಾಫಿ ತೋಟದ ವ್ಯವಸ್ಥಾಪಕರಾಗಿದ್ದು ಅವರ ತಿಂಗಳ ಸಂಬಳ ನಲವತ್ತು ರೂಪಾಯಿ ಮಾತ್ರ ಆಗಿತ್ತು. ಗಂಡ-ಹೆಂಡತಿ ಸಂತೋಷದ ತುಳುಕುವ ಜೋಡಿ ಒಪ್ಪಿಗೆಯ ಮೇಲೆಯೇ ಈ ನಿರ್ಧಾರ ಆಗಿದೆಯೆಂಬುದನ್ನು ಗಾಂಧೀಜಿ ಖಚಿತಪಡಿಸಿಕೊಂಡರು. ಅಷ್ಟೇ ಅಲ್ಲ ಮತ್ತೆಂದೂ ಚಿನ್ನಾಭರಣಗಳನ್ನು ನಾನು ತೊಡುವುದಿಲ್ಲ ಎಂದು ದೃಢವಾದ ದನಿಯಲ್ಲಿ ಗೌರಮ್ಮ ಹೇಳಿದರು.

ಈ ಘಟನೆಯ ನಂತರ ಹೊರಬಂದ "ಹರಿಜನ" ಪತ್ರಿಕೆಯ 2-3-1934ರ ಸಂಚಿಕೆಯಲ್ಲಿ ಈ ಬಗ್ಗೆ ವಿವರಗಳು ಪ್ರಕಟವಾದವು. ಗಾಂಧೀಜಿಯವರು ತಾವಿದ್ದ ಹರದೂರಿನಲ್ಲಿ ಬಳಸಿದ್ದ ಮೈಸೂರು ಸ್ಯಾಂಡಲ್ ಸೋಪನ್ನು ಗೌರಮ್ಮನವರು ತುಂಬ ಗೌರವಾದರಗಳಿಂದ

ತೆಗೆದಿಟ್ಟುಕೊಂಡಿದ್ದರು. ತಮ್ಮೊಡನಿರುತ್ತಿದ್ದ ಖಾದಿಯ ಕೈಚೀಲದಲ್ಲಿ ಅದನ್ನು ತಾವು ಬದುಕಿರುವ ತನಕ ಆಸ್ಥೆಯಿಂದ ರಕ್ಷಿಸಿದ್ದರು.

ಗೌರಮ್ಮನವರು ತೀವ್ರಾಸಕ್ತಿಯಿಂದ ಅನೇಕರನ್ನು ಕಾಂಗ್ರೆಸ್ ಪಕ್ಷದ ಸದಸ್ಯರನ್ನಾಗಿ ನೇಮಿಸಿದರು. ಕೊಡಗಿನಲ್ಲಿ ಸತ್ಯಾಗ್ರಹಕ್ಕಾಗಿ ದುಡಿಯುತ್ತಿದ್ದ ಸಿ.ಎಂ. ಪೂಣಚ್ಚ ಮುಂತಾದ ಪ್ರಾಮಾಣಿಕ ಕಾರ್ಯಕರ್ತರಿಗೆ ನೆರವಾಗುತ್ತಿದ್ದರು. ಈ ಎಲ್ಲ ಚಟುವಟಿಕೆಗಳ ನಡುವೆ ತನ್ನ ಸುತ್ತಲಿನ ಬದುಕಿನಲ್ಲಿ ಕಂಡುಂಡ ಅನುಭವದ ಹಿನ್ನೆಲೆಯಲ್ಲಿ ಮಹಿಳಾಲೋಕದ ಕನಸುಗಳ, ಆದರ್ಶಗಳ ಚಿತ್ರಣವನ್ನು ತಮ್ಮ ಕಥೆಗಳಲ್ಲಿ ನೀಡಲು ಪ್ರಯತ್ನಿಸಿದರು.

ಸಂಪ್ರದಾಯಸ್ಥ ಸಮಾಜವೊಂದರಲ್ಲಿರುವ ವಿಧವಾ ಸಮಸ್ಯೆ, ಹದಿಹರೆಯದವರ ಪ್ರೇಮ, ಕೌಟುಂಬಿಕ ಪ್ರೀತಿ, ಅಲ್ಲಿನ ಮಾನವೀಯ ಸಂಬಂಧಗಳು, ಶಿಕ್ಷಣ, ವರದಕ್ಷಿಣೆ, ಸೌಂದರ್ಯ ಪ್ರಜ್ಞೆ, ಜೀವನಪ್ರೀತಿ, ಜಾತಿ ಸಂಘರ್ಷ ಮುಂತಾದ ಹಲವು ಹತ್ತು ಕಡುವಾಸ್ತವಗಳು ಗೌರಮ್ಮನವರ ಕಿರಿದಾದ ಕಥೆಗಳಲ್ಲಿ ಮೂಡಿಬಂದಿದೆ. ಇವರ ಎಲ್ಲ ಕತೆಗಳ ಮೂಲವಸ್ತು ಮಹಿಳೆಯೇ ಆಗಿದ್ದಾಳೆ. ಇದರಿಂದಾಗಿ ಅವರು ಎದುರಿಸುತ್ತಿದ್ದ ಕೌಟುಂಬಿಕ ಹಾಗೂ ಸಾಮಾಜಿಕ ಸಮಸ್ಯೆಗಳೇ ಗೌರಮ್ಮನವರ ಕಥೆಗಳ ವಸ್ತುವಾಗಿವೆ. "ಅಪಾರವಾದ ಜೀವನ ಪ್ರೀತಿಯನ್ನು ಒಳಗೊಂಡಿರುವ ಇವರ ಕಥೆಗಳು ಎಂಥದ್ದೇ ಸಂದರ್ಭದಲ್ಲೂ ನಿರಾಶವಾದದ ಕೂಪಕ್ಕೆ ಓದುಗರನ್ನು ಬೀಳಿಸುವುದಿಲ್ಲ."[4]

ಕೌಟುಂಬಿಕ ಸಮಸ್ಯೆಗಳು, ಒಂಟಿತನ, ಬಡತನದ ಸ್ಥಿತಿಯಲ್ಲಿದ್ದರೂ ಇಲ್ಲಿನ ಪಾತ್ರಗಳು ಯಾವುದೇ ಹಂತದಲ್ಲೂ ದ್ವೇಷ, ಅಸೂಯೆಗಳನ್ನು ವ್ಯಕ್ತಪಡಿಸದೇ ಎಲ್ಲ ಬಗೆಯ ಮಿತಿಗಳನ್ನು ಮೀರಿ ಅಪರಿಮಿತ ಜೀವನೋತ್ಸಾಹದಿಂದ ತುಳುಕುತ್ತವೆ. ಸಣ್ಣತನಗಳಿಂದ ಹೊರತಾಗಿರುವ

ಮತ್ತು ಅದೇ ಹೊತ್ತಲ್ಲಿ ಜಾತಿ-ಮತಗಳನ್ನು ಮೀರಿದ ಮಾನವೀಯ ಪರಿಸರಕ್ಕಾಗಿ ನಿರಂತರವಾಗಿ ಹಂಬಲಿಸುತ್ತದೆ.

ಗೌರಮ್ಮನವರ ಕಥೆಗಳು ಜಯ ಕರ್ನಾಟಕ, ರಾಷ್ಟ್ರಬಂಧು, ಜಯಂತಿ, ಪ್ರಜಾಮತ ಮುಂತಾದ ನಿಯತಕಾಲಿಕೆಗಳಲ್ಲಿ ಪ್ರಕಟವಾಗುತ್ತಿದ್ದವು. ಸಮಾಜವನ್ನು ಆರೋಗ್ಯಕರ ಚಿಂತನೆಯ ದಾರಿಯಲ್ಲಿ ನಡೆಸುತ್ತಿದ್ದ ಈಕೆ 13-4-1939ರಂದು ತಾವು ವಾಸವಾಗಿದ್ದ ಮನೆಗೆ ಮೂರು ಮೈಲಿಗಳ ಅಂತರದ ಹೊಳೆಗೆ ಈಜಾಡಲು ಹೋಗಿ ಸುಳಿಯಲ್ಲಿ ಸಿಕ್ಕಿ ಅಕಾಲ ಮರಣಕ್ಕೆ ಗುರಿಯಾದರು. ಮರಣಹೊಂದಿದ ನಂತರ ಇವರ ಕಂಬನಿ ಮತ್ತು ಚಿಗುರು ಎಂಬ ಎರಡು ಕಥಾ ಸಂಕಲನಗಳಲ್ಲಿ ಇವರ ಇಪ್ಪತ್ತೊಂದು ಕಥೆಗಳು ಪ್ರಕಟವಾದವು. ದ.ರಾ. ಬೇಂದ್ರೆಯವರು ಎರಡೂ ಸಂಕಲನಕ್ಕೂ ಮುನ್ನುಡಿಯನ್ನು ಬರೆದು ಈ ಕಥೆಗಳ ಸರಳತೆ ಮತ್ತು ಚೆಲುವನ್ನು ವಿಶ್ಲೇಷಿಸಿದರು.

ಕೊಡಗಿನ ಹೊರಗಿರುವ ಓದುಗರು, ಸಾಹಿತ್ಯ ಪ್ರೇಮಿಗಳು ಸಾಂಸ್ಕೃತಿಕ ಲೋಕದ ಜನರು ಇವರನ್ನು (ಗೌರಮ್ಮ) ಅಕ್ಕರೆಯಿಂದ ಕೊಡಗಿನ ಗೌರಮ್ಮ ಎಂದು ಕರೆದಿದ್ದಾರೆ. ಈಕೆಯು ಹೊಸ ಕಾಲದ ಮಹಿಳಾ ಆಶಯಗಳ ತುಡಿತಗಳನ್ನು ಆಗತಾನೇ ಹೇಳಲು ಹೊರಟಿದ್ದರು. ಬ್ರಿಟಿಷರ ಆಳ್ವಿಕೆಯ ಕಾರಣದಿಂದಾಗಿ ಕೆಲವು ವಿಷಯಗಳಲ್ಲಿ ಆಧುನಿಕತೆಯ ಸ್ಪರ್ಶವೂ ಇತರ ಭಾಗಗಳಿಗಿಂತ ಹೆಚ್ಚಾಗಿ ಕೊಡಗಿನ ನೆಲದಲ್ಲಿ ಆಶ್ಚರ್ಯಕರವಾಗಿ ಕಾಣಿಸಿಕೊಂಡಿತು. ಅದರಲ್ಲೂ ಕೊಡವ ಜನಾಂಗದ ಹೆಚ್ಚಿನವರಲ್ಲಿ ಶಿಕ್ಷಣ, ಆರೋಗ್ಯ, ಸಹಬಾಳ್ವೆ ಹಾಗೂ ಸದಭಿರುಚಿ ಬಗೆಗೆ ಆಕರ್ಷಣೆ ಹೆಚ್ಚಾಗಿತ್ತು. ಇಪ್ಪತ್ನಾಲ್ಕನೆಯ ದಶಕದಲ್ಲಿ (1931-1939) ಎಂಟು ವರ್ಷಗಳ ಅವಧಿಯಲ್ಲಿ ಬರೆಯಲಾಗಿರುವ ಇಲ್ಲಿನ ಇಪ್ಪತ್ತೊಂದು

ಕಥೆಗಳಲ್ಲಿ ಎಲ್ಲ ಮಾನವ ಜೀವಿಗಳ ಸ್ವಾತಂತ್ರ್ಯ, ಸಮಾನತೆ, ಮನದಾಳದ ಅನಿಸಿಕೆಗಳಿಗೆ ಭದ್ರ ಬುನಾದಿ ದೊರೆಯಿತು. ಸಂಪ್ರದಾಯಿಕ ವಾತಾವರಣದಲ್ಲಿ ಹುಟ್ಟಿ ಕೂಡ ಗೌರಮ್ಮ ತೀರಾ ಆರೋಗ್ಯಕರ ನಿಲುವಿನ, ಜಾತ್ಯತೀತ ಮನೋಧರ್ಮದ, ಮಾನವೀಯ ವಿವರಗಳಲ್ಲಿ ಹೆಚ್ಚಿನ ಆಸಕ್ತಿಯನ್ನು ಹೊಂದಿರುವ ಅಪಾರ ಜೀವನ ಪ್ರೀತಿಯ ಕತೆಗಾರ್ತಿಯಾಗಿದ್ದಾರೆ.

ಸಮಾಜದಲ್ಲಿ ಮಹಿಳೆಯರ ಸ್ಥಿತಿ-ಗತಿಗಳು, ಅವರ ಸಂಕೋಲೆಗಳು ಮತ್ತು ನಿಸ್ಸಹಾಯಕತೆಗಳನ್ನು ಎತ್ತಿ ಹಿಡಿಯುವಲ್ಲಿ ಗೌರಮ್ಮನವರು ಯಶಸ್ವಿಯಾಗಿದ್ದಾರೆ. ಸಮಾಜದ ವಿಕೃತ ಮತ್ತು ಕ್ರೌರ್ಯದ ನಾನಾ ಮುಖಗಳ ಸೂಕ್ಷ್ಮವಾದ ಅನಾವರಣವು ಹೆಚ್ಚಿನ ಕಥೆಗಳಲ್ಲಿ ಆಗಿರುವುದನ್ನು ಇಲ್ಲಿ ಕಾಣುತ್ತೇವೆ. ಹೊಸ ಬದುಕಿನ ಕನಸಿನ ಕಿರಣಗಳ ಬಾಲ ವಿಧವೆಯರು ಹಾಗೂ ಜೀವನ ಪ್ರೀತಿಯ ದ್ಯೋತಕವಾಗಿರುವ ವಿವಿಧ ಪಾತ್ರಗಳಲ್ಲಿ ಕಂಡುಬರುವ ಸ್ವಾಭಿಮಾನ ಮತ್ತು ಸ್ವಪ್ರಯತ್ನಗಳ ಮೂಲಕ ಹೊಸ ಸಾಧ್ಯತೆಗಳನ್ನು ಅರಸುವ ಸ್ತ್ರೀ ಚೇತನಗಳ ಆಶಾವಾದ ನಿಜಕ್ಕೂ ದೊಡ್ಡದು. ಈ ಕತೆಗಾರ್ತಿಯು ತನ್ನ ಸಾವಿನ ಹಿಂದಿನ ದಿನ ಬರೆದಿರುವ "ಮುನ್ನಾದಿನ" ಹಾಗೂ "ಹೋಗಿಯೇ ಬಿಟ್ಟಿದ್ದ" ಕಥೆಗಳಲ್ಲಿ ಕಾರ್ಮಿಕ ಲೋಕದ ಪ್ರಾಮಾಣಿಕ ಮನಸ್ಸುಗಳು ಜಾತಿ, ಮತ, ಧರ್ಮದ ಒಣಚೌಕಟ್ಟುಗಳನ್ನು ದಾಟುತ್ತ ಸಾಗುವ ವಿವರಗಳಿವೆ.

ಅಪಾರವಾಗಿ ಹೊಸ ಬದುಕಿನ ಕಾಳಜಿಗಳನ್ನು ಹೊಂದಿದ್ದ ಗೌರಮ್ಮನವರ ಮೇಲೆ ಅವರ ಸಮಕಾಲೀನ ಮಹಿಳೆಯರ ದಟ್ಟ ಪ್ರಭಾವವಿದೆ. ನಂಜನಗೂಡು ತಿರುಮಲಾಂಬ, ಕಲ್ಯಾಣಮ್ಮ, ಶ್ಯಾಮಲಾದೇವಿ ಇವರ ಸಮಕಾಲೀನರಾಗಿದ್ದು, ಇವರೆಲ್ಲರ ಸಾಹಿತ್ಯದಲ್ಲಿ ಸಮಾಜದಲ್ಲಿ ಮಹಿಳೆಯರು ಅನುಭವಿಸುತ್ತಿರುವ ಸಮಸ್ಯೆಗಳನ್ನು ಎತ್ತಿ ಹಿಡಿದಿದ್ದಾರೆ. ಇವರ

[illegible]

[illegible]

[illegible]

[illegible]

ಮೇಲೆ ತುಂಬಾ ಪ್ರಭಾವ ಬೀರಿದ ಉತ್ತರ ಕರ್ನಾಟಕದ ಧಾರವಾಡದಲ್ಲಿ ಉತ್ತಮ ಕತೆಗಾರ್ತಿ, ಪತ್ರಕರ್ತೆ ಮತ್ತು ಸಮಾಜ ಸುಧಾರಕಿಯಾಗಿದ್ದು ಅಸಾಧಾರಣ ರೀತಿಯಲ್ಲಿ ದುಡಿದ ಬೆಳಗಾವಿ ಶ್ಯಾಮಲಾದೇವಿ ಅವರ ಸಾಧನೆಯು ಮಹತ್ವಪೂರ್ಣವಾದುದು. ಅಂತರ್ಜಾತಿಯ ವಿವಾಹವಾಗಿ ಸಮಾಜವನ್ನು ಆರೋಗ್ಯಕರವಾದ ಸ್ಥಿತಿಗೆ ತರುವಲ್ಲಿ ಅಪಾರವಾದ ಆಸ್ಥೆಯಿಂದ ದುಡಿದವರು ಎಲ್ಲಾ ಬಗೆಯ ಸೃಜನಶೀಲ ಚಟುವಟಿಕೆಗಳಲ್ಲೂ ಹೆಚ್ಚಿನ ಉತ್ಸಾಹದಿಂದ ತೊಡಗಿರುತ್ತಿದ್ದ ಇವರು, ಶ್ರಮಜೀವಿಯೂ ಸ್ನೇಹಪೂರ್ಣೆಯೂ ಆಗಿದ್ದು ರಾಷ್ಟ್ರಮಟ್ಟದ ಮಹಿಳಾ ಸಂಘಟನೆಯಲ್ಲಿ ಕ್ರಿಯಾಶೀಲರಾಗಿದ್ದರು.

ಇಪ್ಪತ್ತನೆಯ ಶತಮಾನದ ಮೂವತ್ತು ಮತ್ತು ನಲವತ್ತರ ಲೇಖಕಿಯರ ಕಷ್ಟಕೋಟಲೆ ತಾಕಲಾಟಗಳನ್ನು ಅರಿಯುವಲ್ಲಿ ಶ್ಯಾಮಲಾದೇವಿಯವರ ಬದುಕು ಮತ್ತು ಬರವಣಿಗೆಯು ನಮಗೆ ಹೆಚ್ಚಾಗಿ ನೆರವಾಗುತ್ತವೆ. ಹಾಗೆಯೇ ನಮ್ಮ ಕೆಳಜಾತಿ-ಕೆಳವರ್ಗದ ಮಹಿಳೆಯರ ಸಮಸ್ಯೆಗಳು ಮತ್ತು ಜೀವನ ವಿಧಾನವನ್ನು ಕನ್ನಡ ಕಥಾ ಲೋಕಕ್ಕೆ ಮೊದಲಿಗೆ ತಂದ ಈ ಕತೆಗಾರ್ತಿಯು ಐತಿಹಾಸಿಕವಾಗಿ ಮಹತ್ವವನ್ನು ಪಡೆದಿದ್ದಾರೆ.

ಇವರ ಕತೆಗಳು ಒಂದಿಲ್ಲೊಂದು ವಿಧದಿಂದ ಹೆಣ್ಣು-ಗಂಡಿನ ಜೀವನದ, ಅದರ ಭಾಗ್ಯ-ದುರ್ಭಾಗ್ಯದ, ಅದರ ಪ್ರಣಯದ ಆಖ್ಯಾನಗಳಾಗಿವೆ. ಗಂಡಸಿನ ದೌರ್ಜನ್ಯ, ದಾರಿದ್ರ್ಯ-ಕುರೂಪತೆಗಳ ದೌರ್ಭಾಗ್ಯ, ಹೆಂಗಸಿನ ಯುಗಯುಗದ ದುರ್ವಿಧಿ ವಿಲಾಸ, ಸಮಾಜದ ವಿಪರೀತ ದುರ್ಬುದ್ಧಿ, ಶಿಷ್ಟಾಚಾರಗಳ ಅಂಧವಿರೋಧ ಇವೇ ಮೊದಲಾದ ಕಾರಣಗಳಿಂದ ಸ್ತ್ರೀಯರಿಗಾಗುವ ದುಃಖಕ್ಕಾಗಿ ಗೌರಮ್ಮನವರ ಕರುಳಿನ ತಂತಿಯಿಂದ ಮಿಡಿದು ಬಂದ ಮೂಕ ಶೋಕವು ಹೃದಯಭೇದಕವಾಗಿಯೂ ಹೃದಯಬೋಧಕವಾಗಿಯೂ ಆಗಿರುವದು.

ಎಲ್ಲ ಕತೆಗಳೂ ವಿಶೇಷವಾಗಿ ಹೆಣ್ಣಿನ ಹೃದಯವನ್ನೇ ಆವಿಷ್ಕರಿಸುತ್ತಿದ್ದರೂ 'ಸನ್ಯಾಸಿ ರತ್ನ', 'ಹೋಗಿಯೇ ಬಿಟ್ಟಿದ್ದ', 'ಪ್ರಾಯಶ್ಚಿತ್ತ' ಈ ಕತೆಗಳಲ್ಲಿ ಗಂಡಿನ ಮುಖವಾಗಿ ಪ್ರಣಯವನ್ನು ಪ್ರದರ್ಶಿಸಿದ್ದಾಗಿದೆ. ಮೊದಲಿನೆರಡು ಕತೆಗಳಲ್ಲಿ ಕತೆಗಾರಿಕೆಯಲ್ಲಿಯೂ ಕಟ್ಟಿನಲ್ಲಿಯೂ ಒಂದು ಚಮತ್ಕಾರವಿದೆ. ಮೂರನೆಯ ಕತೆಯಲ್ಲಿ ಗಂಡಿನಷ್ಟೆ ಹೆಣ್ಣು ಜೀವಾಳವಾಗಿದೆ. ದಿನಚರಿ, ಕಾಗದ ಮೊದಲಾದ ಕಥಾಕಾರಗಳನ್ನು ಅವರ ಕೈಯಾಡಿಸಿ ನೋಡಿದ್ದಾರೆ. ಎಲ್ಲದರಲ್ಲಿ ಅವರ ಕೈ ತಡೆಯಿಲ್ಲದೆ ಸಾಗುವದು. ಆದರೆ ಈ ಎಲ್ಲ ಕತೆಗಳ ನಿಜವಾದ ವೈಲಕ್ಷಣ್ಯವೆಂದರೆ ಮಾನಸವ್ಯಾಪಾರಗಳ ಹೇಳಿಕೆ. 'ಕೌಸಲ್ಯಾನಂದನ', 'ಸುಳ್ಳು ಸ್ವಪ್ನ', 'ವಾಣಿಯ ಸಮಸ್ಯೆ', 'ಮನುವಿನ ರಾಣಿ' 'ಯಾರು?' ಮೊದಲಾದವುಗಳಲ್ಲಿ ಗೌರಮ್ಮನವರ ಸಹಾನುಭವವು ನಮ್ಮನ್ನು ಮೆಚ್ಚಿಸುವದು. 1933ರ ಅಕ್ಟೋಬರದಲ್ಲಿ ಬರೆದ ಅವರ 'ಒಂದು ಪುಟ್ಟ ಚಿತ್ರ'ಕ್ಕೂ 1939ರ ಫೆಬ್ರುವರಿಯಲ್ಲಿ ಬರೆಯಲಾದ 'ಅವಳ ಭಾಗ್ಯ'ಕ್ಕೂ ಆರು ವರ್ಷದ ಅಂತರವಿರುವಂತೆಯೇ ಕಿರಿದರಲ್ಲಿ ಹಿರಿದು ಭಾವ ತುಂಬುವ ಅವರ ಕತೆಗಾರಿಕೆಯ ಬೆಳವಣಿಗೆಯಲ್ಲಾದ ಅಂತರವನ್ನು ಕಂಡು ಅವರ ಜೀವನದ ಕತೆ ಇಷ್ಟಕ್ಕೇ ಮುಗಿಯಿತೇ - ಎನಿಸುವುದು.

ಕತೆಗಳಲ್ಲಿ ಕಟತ್ವವಿದ್ದರೂ ರೊಚ್ಚಿಲ್ಲ; ಸೋದ್ದೇಶ ಲೇಖನದ ಸೂಚನೆಯಿದ್ದರೂ ಅವಾಸ್ತವ ಆರ್ಭಟೆಯಿಲ್ಲ; ಕಲೆಯು ನೈಜ್ಯವನ್ನು ಮರೆಮಾಚಿಲ್ಲ. - ಎಲ್ಲೆಲ್ಲಿಯೂ ಹೆಣ್ಣಿನ ಹೃದಯದ ಸಾಕ್ಷಿಯನ್ನು ಸಾರುವ ಈ ಕಥಾಗುಚ್ಛವು 'ಶ್ರೀನಿವಾಸ' 'ಆನಂದ'ರ ಕತೆಗಳನ್ನು ಓದಿದ ವಾಚಕರಿಗೆ ಮನೋವಿಶ್ಲೇಷಣಾತ್ಮಕ ಕತೆಗಳ ಮಾದರಿಯಾಗಿ ಹೃದಯಂಗಮವಾಗಿ ಮೂಡಿಬಂದಿದೆ.

ಅದೇ ರೀತಿ 'ಚಿಗುರು' ಕಥಾ ಸಂಕಲನದಲ್ಲಿರುವ ಎಲ್ಲ ಕಥೆಯ ವಸ್ತು ಚಿರಂತನವಾದ ವಸ್ತು. ಅದು ಗಂಡು ಹೆಣ್ಣಿನೊಳಗಿನ ಪರಸ್ಪರ ಆಕರ್ಷಣ, ಒಲವು ದಾಂಪತ್ಯ -ದುರಂತವೋ ಸುಖಮುಕ್ತಿಯೋ ದೇವರೇ ಬಲ್ಲ. ವಾಲ್ಮೀಕಿ ಮುನಿಯು ಕ್ರೌಂಚಮಿಥುನದಲ್ಲಿ ಕಂಡು ರಾಮಾಯಣದ ತುಂಬೆಲ್ಲ ಮಿಡುಕಿ ಬರೆದ ಮೂಲವಸ್ತುವೆಂದರೆ ಸುಖದಾಂಪತ್ಯದರ್ಶನ, ಅದರ ಆಗು-ಹೋಗು, ಅದರ ಸರಸ-ವಿರಸ, ಅದರ ವಿಧಿ-ವಿಲಾಸ ದೈವದುರ್ವಿಪಾಕ. ತಂಗಿ ಗೌರಮ್ಮನವರ ಹೆಣ್ಣು ಹೃದಯ ಈ ವಸ್ತುವನ್ನೇ ಮುಗ್ಧ ಅಪೇಕ್ಷೆಯಿಂದ, ಪ್ರೌಢ ವಿವೇಕದಿಂದ, ಸುಧಾರಕ ದೃಷ್ಟಿಯಿಂದ, ಅವರಿಗೇ ಸಹಜವಾದ ಬೆಳೆಯಲಿರುವ ಸಮತೂಕದಿಂದ, ನೀತಿಯ ಗರ್ಭದಲ್ಲಿಯೂ ರಸಪಾಕಗೊಳಿಸುವ ಜಾಣ್ಮೆಯಿಂದ ಈ ವಿವಿಧ ಕಥೆಗಳಲ್ಲಿ ವಿಸ್ತರಿಸಿದೆ. 'ಪಾಪನ ಮದುವೆ', 'ಮರದ ಬೊಂಬೆ', ಕೊನೆಯ - 'ಕಾಡನ ಕಥೆ'ಇವು ಮೂರೂ ಅವರ ಪರಿಪಕ್ವ ಪರಪಾಕೋನ್ಮುಖ ಸ್ವಾಭಾವಿಕ ಕಥಾ ಕೌಶಲ್ಯದ ಕುರುಹುಗಳಾಗಿ ಉಳಿಯಬಲ್ಲವು.

ಸಮಾನಗುಣಶೀಲ ವಧೂವರ ದಾಂಪತ್ಯವನ್ನು ಕೂಡಿಸುವುದು ದುರ್ವಿಧಿಯು ತನ್ನ ಹಣೆಯಲ್ಲಿ ತಾನೇ ಬರೆದುಕೊಂಡಿಲ್ಲ- ಎಂದು ಕಾಳಿದಾಸನೇ ಮಿಡುಕಿದ್ದಾನೆ. ಕಾಂತಾಹೃದಯಕ್ಕೆ ಹಾಗೆ ತೋಚಿದರೆ ಸೋಜಿಗವಲ್ಲ. ಆಕ್ರೋಶಕ್ಕಿಳಿಯದೆ ಕಾರುಣ್ಯದ ಹದವನ್ನು ತರಬಲ್ಲ ಈ ಕಥೆಗಾರ್ತಿಯ ಕೌಶಲದ ಧ್ವನಿ ಹೃದಯಕ್ಕೆ ಮುಟ್ಟಿದಾಗ ತಂಗಿ ಗೌರಮ್ಮನವರ ನಿಧನದಿಂದ ಕನ್ನಡಕ್ಕಾದ ಹಾನಿ ಅಷ್ಟಿಷ್ಟಲ್ಲ ಎಂದು ಮತ್ತೆ ತೋರುತ್ತದೆ. ಅವರು ಮಾಡಬಹುದಾದ ಸೇವೆ ಅವರಿರುವಾಗಲೇ ಮಾಡಿ ಹೋದರು. ಅವರ ಜೀವನ ಸಾರ್ಥಕವಾಯಿತು. ಅವರ ಹಿಂದೆ ಉಳಿದ ಅವರ ಸ್ನೇಹಿತರಿಗೆ ಅವರ ಅಂತಃಕರಣದ ಈ 'ಚಿಗುರ'ನ್ನು ಕಣ್ಣಿಗೊತ್ತಿ ತಲೆಯ ಮೇಲೆ ಇಟ್ಟುಕೊಳ್ಳುವುದರ ಆಚೆಗೆ ಬೇರೆ ಸಾರ್ಥಕಯೇನುಳಿದಿದೆ? ಸುಖ ಹೆಚ್ಚಿಸುವ ವಸ್ತುವೇ

ಹೋದ ಮೇಲೆ ಅದರ ಅಗಲಿಕೆಯಿಂದ ಆದ ದುಃಖವನ್ನು ಕಡಿಮೆ ಮಾಡಿಕೊಳ್ಳುವುದೂ ಸುಖವೇ ಸರಿ. ಗೌರಮ್ಮನವರಿಗೆ ತನ್ನ 'ಚಿಗುರು' ತನ್ನವರಿಂದ ಲಾಲಿತವಾದದ್ದು. ಇದ್ದಲ್ಲಿಂದ ಕಂಡು ಸುಖವಾಗದೆ ಇರದು.

ಹೀಗೆ ಕೊಡಗಿನ ಗೌರಮ್ಮನವರ ಜೀವನಪ್ರೀತಿ, ಹೆಣ್ಣಿನ ಸಮಸ್ಯೆಗಳಿಗೆ ಸ್ಪಂದಿಸುವ ರೀತಿ, ಸಮಾಜದಲ್ಲಿ ನಡೆಯುವ ಅನ್ಯಾಯವನ್ನು ಎತ್ತಿಹಿಡಿಯುವುದು ಇವರ ಕಥೆಗಳ ಆಶಯವಾಗಿದೆ.[5] ಶಿಷ್ಟಸಾಹಿತ್ಯದಲ್ಲಿ ಕೇವಲ ಗಂಡಿನ ಚಿಂತನೆ ಆಶಯಗಳು ಮಾತ್ರ ಪ್ರಕಟವಾಗುತ್ತಿದ್ದ ಸಂದರ್ಭದಲ್ಲಿ ಮಹಿಳೆಗೂ ಕೂಡ ಸಮಾನ ಸ್ಥಾನಮಾನಗಳಿಗಾಗಿ ಹೋರಾಡಿದ ಧೀಮಂತ ಮಹಿಳೆಯಾಗಿದ್ದಾರೆ. ವಿಧವಾ ಸಮಸ್ಯೆ, ಹದಿ-ಹರೆಯದ ತುಡಿತ, ಪುರುಷರ ಕಾಮ ಪ್ರವೃತ್ತಿಗಳನ್ನು ತಮ್ಮ ಕಥೆಯ ವಸ್ತುವಾಗಿ ಬಳಸಿ ಸಮಾಜದ ಸುಧಾರಣೆಗಾಗಿ ಬೆಂಬಲಿಸಿದ್ದಾರೆ.

ನವೋದಯ ಸಾಹಿತ್ಯದಲ್ಲಿ ಸಂಸ್ಕೃತಿಯ ವಿಕಾಸ ಮತ್ತು ಸ್ತ್ರೀ

ಸಮಾಜದಲ್ಲಿ ಅಮುಖ್ಯವೆನಿಸಿ ತುಳಿತಕ್ಕೆ ಅವಜ್ಞೆಗೆ ಒಳಗಾಗಿದ್ದ ವಿವಿಧ ನಿಮ್ನಸ್ತರಗಳಿಂದ ಬಂದ ಲೇಖಕರು ತಮ್ಮ ಸಾಂಸ್ಕೃತಿಕ ಪರಿಸರದ ಸಹಜ ಭಾಷೆ ಬದುಕಿನ ಅನುಭವಗಳನ್ನು ಕನ್ನಡ ಸಾಹಿತ್ಯದೊಳಗೆ ಸೇರಿಸತೊಡಗಿದ್ದು, ಇಪ್ಪತ್ತನೆಯ ಶತಮಾನದ ಎಂಬತ್ತರ ದಶಕದಲ್ಲಿ ಸಾಂಸ್ಕೃತಿಕವಾಗಿ ಹೀಗೆ ಮಹತ್ವದ್ದಾದ ಈ ದಶಕದಲ್ಲಿ ಮಹಿಳೆಯರ ಬರಹದಲ್ಲೂ ಮುಖ್ಯ ಬೆಳವಣಿಗೆಗಳಾದವು. ಹಿಂದೆಂದೂ ಇರದಷ್ಟು ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರು ಕಾವ್ಯ ರಚಿಸತೊಡಗಿದ್ದು ಅಂಥ ಒಂದು ಮುಖ್ಯ ಬೆಳವಣಿಗೆಯಾಗಿದ್ದರೆ, ಸಣ್ಣ ಕಥೆಯಂಥ ಕಿರು ಮಾಧ್ಯಮದಲ್ಲಿ ಹೊಸ ಎಚ್ಚರದಿಂದ ಬರೆಯಬಲ್ಲ ಕತೆಗಾರ್ತಿಯರು ಕಾಣಿಸಿಕೊಂಡಿದ್ದು, ಇನ್ನೊಂದು ಗಮನಿಸಬೇಕಾದ ಬೆಳವಣಿಗೆಯಾಗಿದೆ.

ಅಲಿಖಿತ ಸಾಹಿತ್ಯವಷ್ಟೇ ಏಕೆ, ಲಿಖಿತ ಸಾಹಿತ್ಯದಲ್ಲೂ ಕಥಾ ಸಾಹಿತ್ಯದ ಕ್ಷೇತ್ರದಲ್ಲಿ ಮಹಿಳೆಯರದು ಸುದೀರ್ಘ ಪರಂಪರೆ. ಪ್ರಮಾಣದ ದೃಷ್ಟಿಯಿಂದ ಈ ಕ್ಷೇತ್ರಕ್ಕೆ ಅವರ ಕಾಣಿಕೆ ಸಾಕಷ್ಟು ದೊಡ್ಡದು. ಆದರೆ ಅನುಭವವನ್ನು ಸೂಕ್ಷ್ಮವಾಗಿ ಗ್ರಹಿಸುವ ಭಾಷೆಯನ್ನು ಎಚ್ಚರದಿಂದ ಬಳಸುವ, ನಿರ್ದಿಷ್ಟ ಕಲಾತ್ಮಕ ಪರಿಣಾಮಗಳನ್ನು ಸಾಧಿಸಬಲ್ಲ ಲೇಖಕಿಯರ ಸಂಖ್ಯೆ ಯಾವತ್ತೂ ಕಿರಿದು. ಒಬ್ಬ ಶ್ಯಾಮಲೆ, ಒಬ್ಬ ಗೌರಮ್ಮ, ಒಬ್ಬ ಗಿರಿಬಾಲೆ (ಸಾವಿತ್ರಮ್ಮ). ಹೀಗೆ ಬೆರಳೆಣಿಕೆಯಷ್ಟೇ ಜನ ಹೆಚ್ಚು ಪ್ರಜ್ಞಾವಂತಿಕೆಯಿಂದ ಕಥನ ಪರಂಪರೆಯನ್ನು ಬೆಳೆಸಿರುವವರು. ಇಂಥ ಲೇಖಕಿಯರ ಪರಂಪರೆಗೆ ಇಂದಿನವರು ಹೆಚ್ಚಿನ ವೈಚಾರಿಕ ವ್ಯಾಪ್ತಿ ಭಾವ ಸಂಕೀರ್ಣತೆ ಮತ್ತು ದಾರ್ಶನಿಕ ನೋಟಗಳನ್ನು ನೀಡಬಲ್ಲರೆಂದು ಭರವಸೆ ತಂದುಕೊಟ್ಟಿದ್ದು ಎಂಬತ್ತರ ದಶಕದ ವಿಶಿಷ್ಟತೆಯಾಗಿದೆ.

[illegible]

[illegible]

[illegible]

ನವೋದಯದ ಸತ್ಯಯುತ ಕಥೆಗಾರ್ತಿಯರಾದ ಶ್ಯಾಮಲಾದೇವಿ, ಗೌರಮ್ಮ, ಸಾವಿತ್ರಮ್ಮ ಮತ್ತು ಗಿರಿಬಾಲೆಯರು ಹೆಣ್ಣಿನ ಬದುಕಿನ ಬವಣೆ, ಬೇಗುದಿ, ನಲಿವುಗಳನ್ನು ಉತ್ತಮವಾಗಿ ಚಿತ್ರಿಸಿದ್ದರು.[6] ಒಂದೆಡೆ ಕುಸಿದು ಬೀಳುತ್ತಿರುವ ಮೌಲ್ಯ ವ್ಯವಸ್ಥೆಯ ಸ್ಥಾಪಕ ಶಕ್ತಿಯಾಗಿ ಹೆಣ್ಣು ಕಾಣಿಸಿಕೊಂಡರೆ ಮತ್ತೊಂದೆಡೆ ತಾನೇ ಅಭದ್ರತೆಯ ಅನುಭವದಿಂದ ತತ್ತರಿಸುತ್ತ ನೆಲೆ ಅರಸುವ ಹೆಣ್ಣು ಎದುರಾಗುತ್ತಾಳೆ. ಈ ವೈರುಧ್ಯ ನವೋದಯದ ಸಾಂಸ್ಕೃತಿಕ ಪರಿಸರದಲ್ಲಿ ಸ್ತ್ರೀಪುರುಷ ಸಂವೇದನೆಗಳಲ್ಲಿನ ವ್ಯತ್ಯಾಸವನ್ನು ಸೂಚಿಸುವಂತಿದೆ.

ಸಾಹಿತ್ಯ ಸಂದರ್ಭದಲ್ಲಿ ನವೋದಯ ಕಾಲದಲ್ಲಿ ಮಹಿಳೆಯರಿಗೆ ಸ್ವಾತಂತ್ರ್ಯ ದೊರೆತು, ಸಾಹಿತ್ಯದಲ್ಲಿ ತಮ್ಮನ್ನು ಸಂಪೂರ್ಣವಾಗಿ ತೊಡಗಿಸಿಕೊಂಡರು. ಮನೆಯ ನಾಲ್ಕು ಗೋಡೆಗೆ ಸೀಮಿತವಾಗಿದ್ದ ಅವಳ ಜ್ಞಾನ ಹೊರಗೆ ಬಂದ ಸಂದರ್ಭ ಅದು ನವೋದಯ ಸಾಹಿತ್ಯ ಸಂದರ್ಭ ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಐತಿಹಾಸಿಕವಾಗಿ ಮುಖ್ಯವಾದದ್ದು. ಬ್ರಿಟಿಷ್ ವಸಾಹತುಶಾಹಿಯ ಆಗಮನದಿಂದ ಉಂಟಾದ ವಿವಿಧ ಪ್ರತಿಕ್ರಿಯೆಗಳಲ್ಲಿ ನವೋದಯ ಸಾಹಿತ್ಯ ಸಂಸ್ಕೃತಿಯ ಅವಿರ್ಭಾವವೂ ಒಂದಾಗಿದೆ. ಅಖಿಲ ಭಾರತ ಮಟ್ಟದಲ್ಲಿ ಘಟಿಸಿದ ಈ ಸಂದರ್ಭ ಮೊದಲಿಗೆ ಬಂಗಾಳದಲ್ಲಿ ನಂತರ ಹಿಂದಿ, ಮರಾಠಿ, ಗುಜರಾತಿ, ಭಾಷೆಗಳಲ್ಲಿ ಅವತರಿಸಿ ಕನ್ನಡಕ್ಕೆ ಸ್ವಲ್ಪ ತಡವಾಗಿಯೇ ಬಂದಿದೆ. ಪರಂಪರಾಗತವಾಗಿ ಬಂದಿದ್ದ ಸಾಂಪ್ರದಾಯಿಕ, ಊಳಿಗಮಾನ್ಯ ಮೌಲ್ಯಗಳ ವಿಘಟನೆ ಆರಂಭವಾಯಿತು. ಒಂದು ರೀತಿಯ ಹೊಸ ಎಚ್ಚರ ಮಾನವತಾವಾದದ ಅಲೆಯೊಂದು ಉದ್ಭವಿಸಿ ಜೀವನಪರ ದೃಷ್ಟಿ ಬೆಳೆಯಿತು. ಆಧ್ಯಾತ್ಮದ ಒತ್ತು ಕಡಿಮೆಯಾಯಿತು. ಸ್ತ್ರೀಯರನ್ನು ಕುರಿತ ಸ್ತ್ರೀ ಸುಧಾರಣಾ ಚಳುವಳಿಗಳು ಹುಟ್ಟಿಕೊಂಡವು. ಈ ಚಳುವಳಿಯ ಪ್ರಭಾವದಿಂದಾಗಿ ಸಾಹಿತ್ಯದಲ್ಲಿಯೂ ಸ್ತ್ರೀಯರನ್ನು ಕುರಿತಾದ ಸಾಂಪ್ರದಾಯಿಕ ಮೌಲ್ಯಗಳನ್ನು ಪ್ರಶ್ನಿಸುವ ಯತ್ನ ನಡೆಯಿತು.

ತನಗಿಂತ ಭಿನ್ನವಾದ ಯಾವುದೇ ಸಾಹಿತ್ಯ ಚಳುವಳಿಗಳ ಬಗ್ಗೆ ಕಟು ಟೀಕೆಯನ್ನು ಮಾಡದೆ ಹುಟ್ಟಿದ ಈ ಚಳುವಳಿ ಇಂದು ಆಧುನಿಕ ಕನ್ನಡ ಸಾಹಿತ್ಯ ಪ್ರಕಾರಗಳನ್ನು ಅನ್ವೇಷಿಸಿದೆ. ಐತಿಹಾಸಿಕ ಅನಿವಾರ್ಯತೆ ಮತ್ತು ಆಂತರಿಕ ಅಗತ್ಯಗಳಿಗಾಗಿ ಭಾವಗೀತೆ, ಸಣ್ಣಕತೆ, ಕಾದಂಬರಿ, ನಾಟಕ, ವಿಚಾರ ಸಾಹಿತ್ಯ, ಪ್ರಬಂಧ ಸಾಹಿತ್ಯ -ಎಲ್ಲ ಸಾಹಿತ್ಯ ಪ್ರಕಾರಗಳೂ ಸೃಷ್ಟಿಗೊಂಡ ಕಾಲವಿದು. ಸಾಹಿತ್ಯದ ಸಂವಹನಕ್ಕೆ ಹೆಚ್ಚು ಒತ್ತುಕೊಟ್ಟ ಈ ಕಾಲದ ಸಾಹಿತಿಗಳು ಜನರ ಅಭಿರುಚಿಯನ್ನು ತಿದ್ದುವಲ್ಲಿ ರೂಪಿಸುವಲ್ಲಿ ಮಹತ್ವದ ಪಾತ್ರ ವಹಿಸಿದರು. ಅಕ್ಷರ ಸಂಸ್ಕೃತಿಗೆ ಮೊದಲ ಬಾರಿಗೆ ತಮ್ಮನ್ನು ತೆರೆದುಕೊಂಡ ಹಲವಾರು ಮಹಿಳೆಯರೂ ಈ ಕಾಲದ ಸಾಹಿತ್ಯಕ್ಕೆ ಓದುಗರಾದರು. ಹಾಗೆಯೇ ಬರವಣಿಗೆಯಲ್ಲೂ ತೊಡಗಿದರು. ವಿದ್ಯಾಭ್ಯಾಸದ ಲಾಭ ಪಡೆದ, ಬರವಣಿಗೆಯಲ್ಲೂ ತಮ್ಮನ್ನು ತೊಡಗಿಸಿಕೊಂಡ ಸೂಕ್ಷ್ಮ ಮನಸ್ಸಿನ ಸಂವೇದನಾಶೀಲ ಮಹಿಳೆಯರೂ ಈ ಕಾಲದ ಸಾಹಿತ್ಯ ರಚನೆಯ ಸಮೃದ್ಧಿಗೆ ಕಾರಣವಾಗಿದ್ದಾರೆ.

ನವೋದಯ ಸಾಹಿತ್ಯ ಪಾಶ್ಚಾತ್ಯ ಸಂಸ್ಕೃತಿಯ ಪ್ರಭಾವದೊಂದಿಗೆ ಈ ನೆಲದ ಒತ್ತಾಸೆಗಳನ್ನೂ ಮೈಗೂಡಿಸಿಕೊಂಡು ಹೊಮ್ಮಿದ ಅಭಿವ್ಯಕ್ತಿಯಾಗಿದೆ. ಬಹುತೇಕ ನವೋದಯದ ಎಲ್ಲ ಕವಿಗಳು ತಮ್ಮ ಅಂತರಂಗದ ನೋವು-ನಲಿವುಗಳಿಗೆ ಪ್ರಕೃತಿ ಸೌಂದರ್ಯ, ಪ್ರೇಮ ಪ್ರೀತಿಗಳಿಗೆ ಮತ್ತು ಆಧ್ಯಾತ್ಮಿಕ ಸಂಘರ್ಷಗಳಿಗೆ ಅಭಿವ್ಯಕ್ತಿ ನೀಡಿದ್ದಾರೆ. ವೈಯಕ್ತಿಕ ಅನುಭವಗಳಿಗೆ ವಿಶೇಷವಾಗಿ ತೆರೆದುಕೊಂಡ ಈ ಸಾಹಿತ್ಯ ಪ್ರಕಾರ ಸಮಾಜಮುಖಿಯೂ ಆಗದಿರಲಿಲ್ಲ. ಸಾಮಾಜಿಕ ಸುಧಾರಣೆ, ರಾಷ್ಟ್ರಪ್ರೇಮ, ನಾಡುನುಡಿಗಳ ಭಕ್ತಿ, ಸ್ವಾತಂತ್ರ್ಯದ ಹಂಬಲ, ಸ್ತ್ರೀ ಸ್ವಾತಂತ್ರ್ಯ ಇವೂ ಈ ಕಾಲದ ಸಾಹಿತ್ಯದಲ್ಲಿ ವಿಜೃಂಭಿಸಿವೆ. ಸ್ತ್ರೀವಾದಿ ಪ್ರಜ್ಞೆಯ ಅರಳುವಿಕೆ, ಪುರುಷಕೇಂದ್ರಿತ ಗ್ರಹಿಕೆಯ ಮಿತಿ ಮತ್ತು ಅಪಾಯಗಳನ್ನು ತೆರೆದು ತೋರುತ್ತದೆ.

ಜೀವನ ಸ್ಥಿತಿ ಮತ್ತು ಜೀವಕ್ಕೆ ವಿರುದ್ಧವಾಗಿ ಹರಿಯುವ ಮೌಲ್ಯ ಪ್ರವಾಹ ಇತಿಹಾಸದ ಒಂದಲ್ಲ ಒಂದು ಘಟ್ಟದಲ್ಲಿ ಅದಕ್ಕೆ ಬೆಲೆ ತೆತ್ತಿದ್ದೇವೆ. ಹೆಂಗಸು -ಗಂಡಸಿಬ್ಬರ ಜೀವನದ ವ್ಯಾಪಕತೆಯನ್ನು ಕುಂಟಿತಗೊಳಿಸುವ ಅವರ ಜೀವನವನ್ನು ಕೃತಕವಾಗಿಸಿ ಅರ್ಥಹೀನವಾಗಿಸುವ ಇಬ್ಬರಿಗೂ ದಮನಕಾರಿಯಾದ, ಒಟ್ಟಿನಲ್ಲಿ ಸಮಾಜದ ಪ್ರಗತಿಯ ಸಹಜದಾರಿಯನ್ನು ಮುಟ್ಟುವಿಕೆಯೇ ಹಾಗೆ ನಾವು ತೆತ್ತ ಬೆಲೆ, ಒಟ್ಟು ಮನುಷ್ಯ ಜೀವನದಲ್ಲಿರುವ ಸಹಜವಾದ ಬೆಳಕು, ಮಾಧುರ್ಯ, ದೃಷ್ಟಿಗಳನ್ನು ಗರಿಷ್ಠತೆಯಲ್ಲಿ ಹೀರಿಕೊಳ್ಳಲಾಗದಂತೆ ಈ ಏಕಮುಖ ಗ್ರಹಿಕೆ ಮಾಡಿದೆ.

ಈ ದೃಷ್ಟಿಯಿಂದಾಗಿ ಗಂಡಸು, ಹೆಂಗಸಿನ ಸ್ವಭಾವವನ್ನು ತಪ್ಪಾಗಿ ತಿಳಿಯಲಾಗಿದೆ. ಆಕ್ರಮಣ ಶೀಲತೆ, ಸಾಹಸ, ಬಿರುಸು ಮೊದಲಾದವನ್ನು ಗಂಡು ಗುಣಗಳೆಂದೂ, ಕೋಮಲತೆ, ಮಾರ್ದವತೆ, ಭಯ ಮೊದಲಾದವನ್ನು ಹೆಣ್ಣು ಗುಣಗಳೆಂದೂ ಕರೆಯಲಾಗುತ್ತದೆ. ಮನುಷ್ಯರು (ಹೆಂಗಸರು ಗಂಡಸರಿಬ್ಬರೂ)ಇವೆರಡೂ ಗುಣಗಳಿಂದ ಕೂಡಿರುತ್ತಾರೆ. ಅವುಗಳಲ್ಲಿ ಯಾರಲ್ಲಿ ಯಾವುದು ಪ್ರಧಾನವೆನ್ನುವುದು ವ್ಯಕ್ತಿತ್ವದ ಸ್ವರೂಪಕ್ಕೆ ಬಿಟ್ಟಿದ್ದು ಎಂಬ ವಸ್ತುಸ್ಥಿತಿಯನ್ನು ಯಾರು ಅರಿಯದೇ ಹೋದರು.

ಮಾನ್ಯತೆ ಪಡೆದ ಸಂಸ್ಕೃತಿಯ ಮಜಲಿನ ನಿರ್ಮಾಣವನ್ನು ಗಂಡಸರು ಮಾತ್ರ ಪ್ರಭಾವಿಸಬಲ್ಲವರಾಗಿದ್ದರಿಂದ ಸಂಸ್ಕೃತಿಯಲ್ಲೂ 'ಗಂಡುಗುಣ'ಕ್ಕೆ ಆದ್ಯತೆ ದೊರೆಯಿತು. ಆಧುನಿಕ ಕಾಲದಲ್ಲೂ ಗೃಹವಿಜ್ಞಾನ, ಸಂಗೀತ, ಕಲಾ ವಿಷಯಗಳು ಹುಡುಗಿಯರಿಗೆಂದೂ, ಗಣಿತ, ವಿಜ್ಞಾನ, ತಂತ್ರಜ್ಞಾನ, ವಾಣಿಜ್ಯಶಾಸ್ತ್ರ ಹುಡುಗರಿಗೆಂದೂ ಹೇಗೋ ಹುಟ್ಟಿನಿಂದಲೂ ಅವರಿಬ್ಬರ ಮನೋಧರ್ಮವೇ ಹೀಗೆಂದು ನಾವು ಭಾವಿಸುತ್ತೇವೆ. ಇಂಥ ವಸ್ತುಸ್ಥಿತಿಯಿಂದ

ದೂರವಾದ ನಂಬಿಕೆಗಳಿಗೆ ವಿರುದ್ಧವಾಗಿ ಸ್ತ್ರೀವಾದಿ ಪ್ರಜ್ಞೆಯು ವ್ಯಕ್ತಿತ್ವದ ದ್ವಿಲಿಂಗತ್ವಕ್ಕೆ ಮಾನ್ಯತೆಯನ್ನು ಅಪೇಕ್ಷಿಸುತ್ತದೆ, ಹಾಗೂ ಈಗ ನಾವು ಯಾವುದನ್ನು ಸ್ತ್ರೀ-ಪುರುಷರ ಮೂಲ ಪ್ರವೃತ್ತಿ ಎಂದು ಬಗೆದಿದ್ದೇವೋ ಅದು ನಮ್ಮ ಸಂಸ್ಕೃತೀಕರಣ, ಸಾಮಾಜೀಕರಣದಿಂದ ಪ್ರಭಾವಿಸಲ್ಪಟ್ಟಿದ್ದು ಎಂದು ತಿಳಿಯುತ್ತದೆ. 'ಸ್ತ್ರೀಯಾತ್ಮಕ' ಗುಣಗಳನ್ನು ಸ್ತ್ರೀತ್ವದ ಮೇಲೆ ಹೊರಿಸುವುದನ್ನು ವಿರೋಧಿಸಲಾಗಿದೆ. ವ್ಯಕ್ತಿತ್ವದಲ್ಲಿನ ದ್ವಿಲಿಂಗತ್ವಕ್ಕೆ ಹಾಗೂ ಸಂಸ್ಕೃತಿಯಲ್ಲಿನ ದ್ವಿಲಿಂಗತ್ವಕ್ಕೆ ಮಾನ್ಯತೆ ದೊರೆಯುವುದೆಂದರೆ ಕೃತಕ ಸ್ಥಿತಿಯಿಂದ ಸಹಜತೆಯೆಡೆಗೆ ತಿರುಗಿದಂತೆ.

ಸ್ತ್ರೀವಾದಿ ಪ್ರಜ್ಞೆಯ ಮತ್ತೊಂದು ಮುಖ್ಯ ಕಾಳಜಿಯೆಂದರೆ ಲಿಂಗಜಾತಿಗಳ ಮೇಲಿನ ನಿಗದಿತ ಪಾತ್ರಗಳ ಹೇರಿಕೆಯನ್ನು ಕುರಿತ ವಿರೋಧ, ಪುರುಷ ಕೇಂದ್ರಿತ ಗ್ರಹಿಕೆಯಿಂದ ಸ್ವಭಾವಗಳು ನಿರ್ಣಯಿಸಲ್ಪಟ್ಟಂತೆ ಪಾತ್ರಗಳೇ ನಿರ್ಣಯಿಸಲ್ಪಟ್ಟವು. ಅವಳು ಹುಡುಗಿಯೇ, ಸರಿ ಅವಳಿಗೆ ಆಡಲು ಗೊಂಬೆ, ಗೃಹೋಪಯೋಗಿ ವಸ್ತುಗಳನ್ನು ಕೊಡಿ, ನಾಳೆ ಅವಳು ಹೆಂಡತಿಯಾಗುವವಳು, ತಾಯಿಯಾಗುವವಳು, ಅವಳು ಅಲಂಕೃತಳಾಗಿ, ಆತ್ಮೀಯಳಾಗಿ, ತ್ಯಾಗಿಯಾಗಿ, ಕೋಮಲಾಂಗಿಯಾಗಿ ಇರಲು ಕಲಿತರೆ ಸಾಕು ಅದಕ್ಕೆ ಅವಳನ್ನು ಸಿದ್ಧಗೊಳಿಸಿ ಎನ್ನುತ್ತದೆ ಸಮಾಜ. ಹುಡುಗನಾದರೆ ಅವನು ವೀರ, ರಕ್ಷಕ, ವೃತ್ತಿಪರ ಅವನು ಹಾಗೆ ಬೆಳೆಯಬೇಕೆಂಬುದು ನಿರೀಕ್ಷೆ.[6]

ನವೋದಯ ಸಂದರ್ಭದಲ್ಲಿ ಮಹಿಳೆಯರು ಸಹ ನಾಲ್ಕು ಗೋಡೆಗೆ ಮಾತ್ರ ಸೀಮಿತವಾಗದೆ ಹೊಸ ಪ್ರಪಂಚವನ್ನು ಕಣ್ತೆರೆದು ನೋಡುವ, ತಮ್ಮ ಬಂಧನಗಳಿಂದ ಬಿಡುಗಡೆ ಪಡೆಯಲು ಯತ್ನಿಸಿದರು. ಇವರ ಈ ಪ್ರಯತ್ನಕ್ಕೆ ಆಗಿನ ಕಾಲದಲ್ಲಿ ಕಾಣಿಸಿಕೊಂಡ ಮಹಿಳಾ ಲೇಖಕಿಯರು ಕೈಜೋಡಿಸಿದರು. ತಮ್ಮ ಬರವಣಿಗೆಯ ಮೂಲಕ ಬಿಡುಗಡೆ ಪಡೆಯುವ

ದಾರಿಗಳನ್ನು, ಸಮಾಜದ ನೈಜ ಪರಿಸ್ಥಿತಿಯನ್ನು ಎತ್ತಿ ಹಿಡಿದರು. ಈ ಲೇಖಕಿಯರ ಬರವಣಿಗೆಗಳು ಎಲ್ಲಾ ಜನರಲ್ಲೂ ಜಾಗೃತಿ ಮೂಡಿಸುವಲ್ಲಿ ಯಶಸ್ವಿಯಾಗಿ ಸಮಾಜದ ಬೆಳವಣಿಗೆಯ ದಾರಿಗೆ ನೆರವಾಗಿವೆ. ಪುರುಷರಿಗೆ ಮಹಿಳಾ ಸಮಸ್ಯೆಗಳ ಬಗ್ಗೆ ಹೇಳುತ್ತಾ ಅವರ ಮನಸ್ಸಿನ ಪರಿಚಯವನ್ನು ಮಾಡಿಸುತ್ತಾರೆ. ಸಮಾಜದಲ್ಲಿ ಅವಳಿಗೂ ಒಂದು ಸ್ಥಾನವಿದೆ. ಅವಳ ಆಸೆ-ಆಕಾಂಕ್ಷೆಗಳ ಬಗ್ಗೆ ಹೇಳುತ್ತಾ ಅವರಲ್ಲಿ ಮಹಿಳಾ ಸಂವೇದನೆಯನ್ನು ಮೂಡಿಸಲು ಪ್ರಯತ್ನಿಸುತ್ತಾರೆ. ಕಿರಿಯದರಲ್ಲಿ ಹಿರಿದಾದ ಅರ್ಥವನ್ನು ಕಥೆಗಳ ಮೂಲಕ ಮೂಡಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಈ ರೂಢಿಗತ ನಂಬಿಕೆಗಳನ್ನು ಸ್ತ್ರೀವಾದಿ ಪ್ರಜ್ಞೆ ಪ್ರಶ್ನಿಸುತ್ತದೆ. ಹೆಂಗಸಿನ ಬಹುಮುಖ್ಯ ಪಾತ್ರವೆಂದೂ ಪರಿಗಣಿಸಲ್ಪಟ್ಟ ತಾಯ್ತನದ ಸುತ್ತ ಹೆಣೆಯಲಾಗಿರುವ ಪೌರಾಣಿಕ ಬಲೆಗಳೇ ಇಂದು ಪ್ರಶ್ನೆಗೀಡಾಗಿವೆ. ಪುರುಷ ಕೇಂದ್ರಿತ ಪ್ರಜ್ಞೆ ಸ್ತ್ರೀಯರ ಸ್ವಭಾವ ಶಕ್ತಿ ಮತ್ತು ಪಾತ್ರಗಳನ್ನು ನಿರ್ಣಯಿಸಿ, ಆ ನಿರ್ಣಯಕ್ಕೆ ಹೊಂದುವ ಅಥವಾ ನಿರ್ಣಯದ ಅಚ್ಚಿನಲ್ಲಿ ಎರಕ ಹೊಯ್ದ ಮಾದರಿಗಳನ್ನು ಚಾಲ್ತಿಗೆ ಬಿಟ್ಟಿತು. ಅವೆಂಥ ಮಾದರಿಗಳು ? ಗಂಡಸಿನ ಮಾನಸಿಕ, ಭೌತಿಕ, ಜೈವಿಕ ಅಗತ್ಯಗಳಿಗೆ ಹೊಂದುವಂಥವು. ಸೀತೆ, ಸಾವಿತ್ರಿ, ದಮಯಂತಿಯಂಥ ಮಾದರಿಗಳು; ಇಂಥ ಮಾದರಿಗಳ ಸೌಂದರ್ಯ, ಶೃಂಗಾರ ಪಾತಿವ್ರತ್ಯ, ತಾಯ್ತನಕ್ಕೆ ಒತ್ತು ಬಿತ್ತು. ಒಟ್ಟಾರೆ ವಿಧೇಯವಾದ, ಗಂಡಸಿನ ಒಲುಮೆ -ಹಿರಿಮೆಯನ್ನು ಒಪ್ಪುವಂಥ ಪಾತ್ರಗಳನ್ನು ಮಾದರಿಗಳೆನ್ನಲಾಯಿತು. ಈ ಮಾದರಿಗಳು ಸ್ತ್ರೀಯರ ವ್ಯಕ್ತಿತ್ವದೊಳಕ್ಕೆ ಕರೆಯಲ್ಪಟ್ಟವೆಂದರೆ ಪ್ರಜ್ಞಾಪೂರ್ವಕ ಪ್ರಯತ್ನಗಳನ್ನು ಮೀರಿ ಸಂಕ್ರಮಣ ಸ್ಥಿತಿಯಲ್ಲಿ ಈ ಹಳೆಯ ಮಾದರಿಗಳು ಗೆಲ್ಲುತ್ತಿರುವ, ಗೆದ್ದ ನಿದರ್ಶನಗಳು ವಿರಳವಲ್ಲ. ಈ ಮಾದರಿಗಳು ಸ್ತ್ರೀಯರಿಗೆ ಕೊಟ್ಟಿರುವ ಸ್ವಮಾದರಿಗಳು. ಹೆಂಗಸಿನಲ್ಲಿ ಈ ಮೇಲಿನ ವ್ಯವಸ್ಥೆಯ ಬಯಕೆಗೆ ಹೊಂದುವ ವ್ಯಕ್ತಿತ್ವ

[illegible]

ಮಾತ್ರ ತನ್ನಲ್ಲಿಯೆಂದೂ ಅದೇ ನಿಜವಾದ ತಾನೆ ಎನ್ನುವ ಭ್ರಮೆಯನ್ನು ತಂದುಬಿಟ್ಟಿದೆ. "ಸಾಮಾಜಿಕ ಬದುಕಿನ, ವೃತ್ತಿಪರ ಜೀವನದ ಸಾಧನೆಗಳನ್ನು ಹಿಂದಕ್ಕೆ ಎಳೆಯುವಷ್ಟು ಈ ಸ್ವ ಮಾದರಿಗಳು ಅವಳನ್ನು ಪತ್ನಿತ್ವ, ತಾಯ್ತನದ ನಿಗದಿತ ಪಾತ್ರಗಳಿಗೆ ಕಟ್ಟಿಹಾಕಿವೆ."[7]

ಪುರುಷ ಕೇಂದ್ರಿತವಾದ ವ್ಯವಸ್ಥೆ ಮಹಿಳೆಯ ಹೊರಗಿನ ದುಡಿಮೆಯನ್ನು ಅವಳಿಗೆ ಸವಾಲಾಗಿಯೇ ಉಳಿಸಿದೆ. ಮುಂದುವರಿದ ರಾಷ್ಟ್ರಗಳಲ್ಲೂ ಸ್ತ್ರೀಯರ ದುಡಿಮೆಯ ಬಗ್ಗೆ ಒಂದು ಸಾಂಸ್ಕೃತಿಕ ಹಿಂದೆಳೆತ ಇದ್ದೇ ಇದೆ. ಹೊರಗಿನ ದುಡಿತ ಒಂದರಲ್ಲಿಯೇ ಸ್ತ್ರೀ ವಿಮೋಚನೆ ಇದೆಯೆಂದಾಗಲೀ ಹೊರಗೆ ದುಡಿಯುತ್ತಿರುವ ಮಹಿಳೆಯರಿಗೆ ಸಮಸ್ಯೆಗಳೇ ಇಲ್ಲವೆಂದಾಗಲೀ ಇದರ ಅರ್ಥವಲ್ಲ. ಆದರೆ ಹೊರಗಿನ ದುಡಿಮೆ, ದುಡಿಮೆಗೆ ತಕ್ಕ ಪ್ರತಿಫಲ ಅವಳ ಹಕ್ಕು ಹಾಗೂ ಸ್ತ್ರೀ ವಿಮೋಚನೆಯ ಅತ್ಯಂತ ಮೂಲಭೂತ ಅಗತ್ಯ ಆರ್ಥಿಕ ಸ್ವಾವಲಂಬನೆಯೆಂಬುದು ಸ್ಪಷ್ಟ ಸಂಗತಿ.

ಸ್ತ್ರೀವಾದ ಪ್ರಜ್ಞೆಯ ಮತ್ತೊಂದು ಮಗ್ಗುಲಾಗಿ ಸ್ತ್ರೀ ಸಂಸ್ಕೃತಿಯ ಶೋಧ ಮತ್ತು ಅದರ ಪುನಾರಚನೆಯ ಪ್ರಯತ್ನವನ್ನು ಕಾಣುತ್ತೇವೆ. ಜಾಗತಿಕ ಇತಿಹಾಸದಲ್ಲಿಯೇ ಪುರುಷ ಕೇಂದ್ರಿತ ಚಿಂತನೆಯ ಪ್ರಾಧ್ಯಾನ್ಯತೆ ಸುಮಾರು ಕ್ರಿ.ಪೂ. 9ನೆಯ ಶತಮಾನದಿಂದ 19ನೆಯ ಶತಮಾನದವರೆಗೂ ಅವ್ಯಾಹತವಾಗಿ ನಡೆದುಬರುವಂತಿದೆ. ಭಾರತದ ಸಂದರ್ಭದಲ್ಲಿ ಒಟ್ಟಾರೆಯಾದ ಈ ಹಿನ್ನಡೆತವಿರುವುದು ಸರಿ. ಆದರೆ ಪುರುಷ ಕೇಂದ್ರಿತ ಚಿಂತನೆಯೇ ಪ್ರಧಾನವಾಗುಳ್ಳ ವೈದಿಕ ಸಂಸ್ಕೃತಿ ಹಾಗೂ ಈಚೆಗೆ ಬ್ರಿಟಿಷರ ಮೂಲಕ ಬಂದ ಐರೋಪ್ಯ ಸಂಸ್ಕೃತಿಗಳು ಹಲವು ಅಂಶಗಳನ್ನು ಅಂತರ್ಗತವಾಗಿಸಿಕೊಂಡಿವೆ. ಇದರಿಂದಾಗಿ ಇಂದಿನ ಅಲ್ಲಿನ ಸಂಸ್ಕೃತಿ ಸ್ತ್ರೀಯನ್ನು ಹೇಗೆ ಅರ್ಥೈಸಿಕೊಂಡಿವೆ ಎಂಬುದಕ್ಕೆ ಉತ್ತರವಿಲ್ಲ.

ಈ ಹಿನ್ನೆಲೆಯಲ್ಲಿಯೂ ಈ ಸಂಸ್ಕೃತಿಯ ಒಳಗೆ ಅಡಗಿರುವ ಸ್ತ್ರೀ ಸಂಸ್ಕೃತಿಯನ್ನು ನಾವು ಗುರುತಿಸಬಹುದು. ಹಾಗೂ ಪುರುಷ ಕೇಂದ್ರಿತ ಪ್ರಜ್ಞೆ ಪ್ರಧಾನವಾಹಿನಿಯನ್ನು ರೂಪಿಸಿದ್ದರೂ ಸ್ತ್ರೀ ಸಂಸ್ಕೃತಿ ಕಾಲ ಕಾಲಕ್ಕೆ ತಕ್ಕಂತೆ ಬದಲಾವಣೆ ಮಾಡಿಕೊಂಡು ಬೆಳೆಯುತ್ತ ಬಂದಿದೆ.

ಮಹಿಳಾ ಸಂವೇದನೆ

ಸಾಹಿತ್ಯ ವಿಮರ್ಶೆಯ ಕ್ಷೇತ್ರದಲ್ಲಿ ಸ್ತ್ರೀವಾದಿ ನೆಲೆಯು ಈಗೀಗ ವಿಶೇಷವಾದ ಕಸುವನ್ನು ಪಡೆದುಕೊಳ್ಳುತ್ತಿದೆ. "ಮಹಿಳಾ ಸಂವೇದನೆ"ಯು ಅದರ ಮೂಲದ್ರವ್ಯಗಳಲ್ಲಿ ಒಂದಾಗಿದೆ. ಪಾರಿಭಾಷಿಕವಾಗಿ "ಅನುಭವವೊಂದಕ್ಕೆ ಭಾವನಾತ್ಮಕ ಹಾಗೂ ಬೌದ್ಧಿಕ ಪಾತಳಿಯ ವ್ಯಕ್ತಿ ವಿಶಿಷ್ಟವಾದ ಪ್ರತಿಕ್ರಿಯೆ" ಯನ್ನು 'ಸಂವೇದನೆ' [8] ಎಂದು ಕರೆಯುತ್ತಾರೆ. ಇದನ್ನೇ ಸ್ವಲ್ಪ ವಿಸ್ತರಿಸಿದರೆ, ಬಾಹ್ಯಾನುಭವವನ್ನು ನಿರ್ದಿಷ್ಟ ಪ್ರಜ್ಞೆಯೊಂದರ ಮೂಲಕ ಗ್ರಹಿಸುವ ಸಂದರ್ಭ ಸಂವಾದಿಯಾಗಿ ಸಂವಹಿಸುವ ಸಾಮರ್ಥ್ಯವನ್ನು ಇದು ಸೂಚಿಸುತ್ತದೆ. ಈ ಹಿನ್ನೆಲೆಯಲ್ಲಿ ನಾವು 'ಮಹಿಳಾ ಸಂವೇದನೆ' ಎನ್ನುವ ಪರಿಕಲ್ಪನೆಯನ್ನು ಗಮನಿಸಬೇಕಾಗುತ್ತದೆ.

'ಸಂವೇದನೆ'ಯ ನಿರ್ವಚನವನ್ನು ಸೂಕ್ಷ್ಮವಾಗಿ ಗಮನಿಸಿದಾಗ ಈ ಗೊಂದಲವು ಇನ್ನಷ್ಟು ಹೆಚ್ಚಾಗುತ್ತದೆ. ಇಲ್ಲಿ 'ಸಾಮಾನ್ಯೀಕರಣ ಪ್ರಕ್ರಿಯೆ' ಮತ್ತು ಅಭಿವ್ಯಕ್ತಿಯ ಪ್ರಾಮಾಣಿಕತೆಗಳೆರಡೂ ಚರ್ಚಾಸ್ಪದ ಅಂಶಗಳೇ ಆಗುತ್ತವೆ.[9] ಸಂವೇದನೆಯೆನ್ನುವುದು ವ್ಯಕ್ತಿ ವಿಶಿಷ್ಟವೆನ್ನುವುದನ್ನು ಒಪ್ಪುವುದಾದರೆ ಸ್ತ್ರೀ ಸಮುದಾಯಕ್ಕೆ ವಿಶಿಷ್ಟವಾಗಿರುವ ಸಂವೇದನೆಗಳು ಎನ್ನುವ ಉಲ್ಲೇಖವೇ ಅಸಂಗತವಾಗುತ್ತದೆ. ಸ್ತ್ರೀ ಸಂವೇದನೆಯೆಂದಾಗ ಬರಿಯ ಸ್ತ್ರೀಯರ ಸಂವೇದನೆಯೆನ್ನುವ ಅರ್ಥವಷ್ಟೇ ಸ್ಫುರಿಸುವುದಿಲ್ಲ. ಒಬ್ಬ ಸಾಹಿತಿಯು ಹೆಣ್ಣಾಗಿ ಅವಳ ಅನುಭವಲೋಕವನ್ನು ಪ್ರವೇಶಿಸಿ ಬರೆದಾಗ ಮಾತ್ರವೇ ಸ್ತ್ರೀ ಸಂವೇದನೆಯು ಪ್ರಕಟವಾಗುತ್ತದೆ.

ಎಲ್ಲ ಸ್ತ್ರೀಯರಲ್ಲೂ ಸ್ತ್ರೀತ್ವಕ್ಕೇ ವಿಶಿಷ್ಟವಾದ ಸಂವೇದನೆಗಳು ಇರಲೇಬೇಕಾಗಿಲ್ಲ ಅಥವಾ ಪುರುಷರಲ್ಲೂ ಸ್ತ್ರೀಸಂವೇದನೆಗಳು ಇರುತ್ತವೆನ್ನುವುದನ್ನು ನಾವು ನಿರಾಕರಿಸಬೇಕಾಗಿಲ್ಲ.

[illegible]

[illegible]

[illegible]

[illegible]

ಅಲ್ಲದೆ ಮಹಿಳೆಗೆ ಅಸ್ತಿತ್ವವಿರುವುದು ಕೇವಲ ಅವಳ ಸ್ತ್ರೀತ್ವದಲ್ಲಿ ಅಲ್ಲ, ಅವಳಿಗೂ ವರ್ಗ, ವರ್ಣ, ಸಂಸ್ಕೃತಿ, ಪ್ರದೇಶ, ಧರ್ಮ ಮುಂತಾದ ಹಲವು ನೆಲೆಗಳಿವೆ. ಹೀಗಾಗಿ ಮುಸ್ಲಿಂ ಸ್ತ್ರೀಯೊಬ್ಬಳ ಪ್ರಬಲವಾದ ಸಂವೇದನೆಗಳು ದಲಿತ ಮಹಿಳೆಯರೊಂದಿಗೆ ಸಮೀಕರಣಗೊಳ್ಳಲಾರವು.

ಕನ್ನಡ ಸೃಜನಶೀಲ ಸಾಹಿತ್ಯದ ಸಂದರ್ಭದಲ್ಲಿ ಸ್ತ್ರೀ ಸಂವೇದನೆಯ 4 ಆಯಾಮಗಳು ಪ್ರಧಾನವಾಗಿ ಕಂಡು ಬರುತ್ತದೆ.

1. ಮಹಿಳಾ ಸಾಹಿತಿಗಳಲ್ಲಿ ಕಂಡುಬರುವ ಸ್ವ-ಅಭಿವ್ಯಕ್ತಿ, ಸ್ವಲ್ಪಮಟ್ಟಿಗೆ ಆತ್ಮ ವೃತ್ತಾತ್ಮಕವಾದ, ಸ್ವಂತದ ಸ್ವರೂಪದ ಶೋಧದತ್ತ ಮುಖ ಮಾಡಿರುವ ಸಾಹಿತ್ಯದ ಪ್ರಕಾರ.
2. ಸ್ತ್ರೀಪರವಾದ, ಸಹಾನುಭೂತಿಯ ನಿಲುವನ್ನು ತಳೆಯುವ ಬರಹಗಳು
3. ಜೀವ ವಿರೋಧಿ ದೃಷ್ಟಿಕೋನವಿರುವ, ಸ್ತ್ರೀ ಸಂವೇದನೆಯ ಆಭಾಸವನ್ನಷ್ಟೇ ಕಲ್ಪಿಸುವ ಕೃತಿಗಳು.
4. ಯಾವುದೇ ಬಗೆಯ ಲಿಂಗ ವಿವಕ್ಷೆಗೆ ಹೊರಡದ, ಸ್ತ್ರೀಯನ್ನು ಒಬ್ಬ ವ್ಯಕ್ತಿಯಾಗಿ, ವ್ಯಕ್ತಿತ್ವದ ಎಲ್ಲ ಶಕ್ತಿ, ಮಿತಿ, ಸಾಧ್ಯತೆಗಳೊಂದಿಗೆ ಗುರುತಿಸುವ ರಚನೆಗಳು.[10]

"ಸಾಮಾಜಿಕವಾಗಿ ಸಾಹಿತ್ಯಿಕವಾಗಿ ಒಟ್ಟಿನಲ್ಲಿ ಹೇಳುವುದಾದರೆ ಸಾಂಸ್ಕೃತಿಕವಾಗಿ ನಮ್ಮ ದೇಶದ ಮಹಿಳೆಯರು ಅಭಿವ್ಯಕ್ತಿಯ ಅನುಕೂಲ ಮತ್ತು ಅವಕಾಶಗಳಿಂದ ವಂಚಿತರಾಗಿಯೇ ಇದ್ದರೆನ್ನುವುದು ಐತಿಹಾಸಿಕ ಸತ್ಯ" ಎನ್ನುವ ಮಾತು ಸ್ವೀಕಾರಾರ್ಹವೇ ಆಗಿದೆ.

"ಇತ್ತೀಚೆಗೆ ಮಹಿಳೆಯು ತನ್ನ ಮೌನವ್ರತವನ್ನು ಮುರಿಯತೊಡಗಿದ್ದಾಳೆ. ತನ್ನ ಬಗೆಗೇ ಇರುವ ಭಯಗೊಳಿಸುವಂಥ ಅನೇಕ ಸತ್ಯಗಳನ್ನು ಗ್ರಹಿಸತೊಡಗಿದ್ದಾಳೆ."[11] ಇದುವರೆಗೆ ತಾನು

ಭದ್ರವೆಂದು ನೆಲೆಯೂರಿದ್ದು ಸೈದ್ಧಾಂತಿಕ ಬುನಾದಿಯಿಲ್ಲದ ಅಂತರಾಳದಲ್ಲಿ ಎನ್ನುವ ಎಚ್ಚರದೊಂದಿಗೇ ವಸ್ತುಸ್ಥಿತಿಯನ್ನು ಸ್ವೀಕರಿಸುವ ಪ್ರತಿಕ್ರಿಯಿಸುವ, ಪ್ರತಿಭಟಿಸುವ ಪ್ರಕ್ರಿಯೆಯಲ್ಲಿ ಅವಳು ತೊಡಗಿಕೊಳ್ಳುತ್ತಿದ್ದಾಳೆ".

ಸಮಾಜದ ಒಂದರ್ಥವೇ ಹೆಣ್ಣು. ನಮ್ಮ ಸಮಾಜದಂಥ ಸ್ವಲ್ಪ ಹಳೆಯ ವ್ಯವಸ್ಥೆಯ ಸಮಾಜಕ್ಕಂತೂ ಈಗಿನ ಕಾಲದ ದೃಷ್ಟಿಯಿಂದ ಅನೇಕ ಪ್ರಶ್ನೆಗಳು ತಲೆದೋರುತ್ತದೆ. ಸ್ತ್ರೀಯರ ಬಾಳನ್ನು ಕುರಿತು ಸಮಾಜವು ಇಂದು ಉತ್ತರ ಕೊಡಬೇಕಾಗಿರುವ ನೂರು ಪ್ರಶ್ನೆಗಳನ್ನು ಸುಲಭವಾಗಿ ಪ್ರತಿಪಾದಿಸಬಹುದು. ಹೆಣ್ಣಿನ ಬಾಳನ್ನು ಕುರಿತು ಹೆಣ್ಣಿನ ಅನುಭವದಿಂದ ಮಾತ್ರ ಹೇಳಬಹುದಾದ ಅಭಿಪ್ರಾಯವಿರುತ್ತದೆ. ಹೆಣ್ಣಿನ ಆ ಅಭಿಪ್ರಾಯವನ್ನು ಸಮಾಜವು ಗಣನೆಗೆ ತೆಗೆದುಕೊಳ್ಳುತ್ತದೆ. ಪುರುಷ ಸಂವೇದನೆಗಿಂತ ಭಿನ್ನವಾದ ಮಹಿಳಾ ಸಂವೇದನೆಯೆಂಬುದೊಂದು ಇದೆಯೇ ಎನ್ನುವ ವಿಷಯದಲ್ಲಿ ವಾದಗಳಿವೆ. ಸ್ತ್ರೀಗೆ ಅವಳದೇ ಆದ ಅನುಭವ ಲೋಕವಿದೆ; ಅವಳಿಗೆ ವಿಶಿಷ್ಟವಾದ ಪ್ರತ್ಯೇಕವಾದ ಸಂವೇದನೆಯಿಲ್ಲ, ಎಂಬ ವಾದ ಇಂದು ಸುಳ್ಳಾಗಿದೆ.

ಮಹಿಳೆ ಹಾಗೂ ಕತೆ ಸಂಬಂಧ ಇಂದು ನಿನ್ನೆಯದಲ್ಲ. ಭಾರತೀಯ ಪರಂಪರೆಯಲ್ಲಿ ಕತೆಗೆ ನಾಟಕಕ್ಕಿದ್ದಂತೆ ದೈವೀ ನೆಲೆಯನ್ನು ಕಲ್ಪಿಸಲಾಗಿದೆ. ಕತೆ ಹೇಳುವುದರಲ್ಲಿಯೂ ಮಹಿಳೆಯದೇ ಮೇಲುಗೈಯಾಗಿತ್ತೆನ್ನುವುದಕ್ಕೆ ಪಂಚತಂತ್ರದ 'ದೈವದತ್ತನೂ ಕುಂಟಣಿಯೂ' ಕತೆಯಲ್ಲಿ ಬರುವ 'ಡಾವರ ಡಾಕಿನಿ' ಸಾಕ್ಷಿಯಾಗಿದ್ದಾಳೆ. ನಾನಾ ರೀತಿಯ ಕತೆಗಳನ್ನು ಅತಿಶಯವಾಗಿ ಹೇಳುವ ವಿದ್ಯೆ ಹೊಂದಿದ ಇವಳು ಕತೆಹೇಳುವುದಕ್ಕೆ ಒಂದು ಸಾವಿರ ಗದ್ಯಾಣದ ದಕ್ಷಿಣೆ ಕೇಳುತ್ತಿದ್ದಳಂತೆ! ಇಂದಿನ ವಿನಿಮಯ ದರದಲ್ಲಿ ಇದು ಯಾವ ಕಥೆಗಾರ್ತಿಯೂ ಹೆಮ್ಮೆಪಡಬಹುದಾದ ಮೊತ್ತವಾಗಿದೆ.

ಹೀಗಿದ್ದರೂ ಒಂದು ಗಂಭೀರ ಸಾಹಿತ್ಯ ಪ್ರಕಾರವೆಂದು ಕತೆ ಕನ್ನಡದಲ್ಲಿ ನೆಲೆಗೊಂಡಿದ್ದು, ಇಪ್ಪತ್ತನೆಯ ಶತಮಾನದಲ್ಲಿಯೇ ಎನ್ನುವುದು ನಿರ್ವಿವಾದ. ತಿರುಮಲಾಂಬಾ ಅವರ ಕಾದಂಬರಿಗಳು ಸಾಮಾಜಿಕವಾಗಿದ್ದರೆ, ಕತೆಗಳಲ್ಲಿ ಪೌರಾಣಿಕವಾದವುಗಳು, ಪೌರಾಣಿಕ ವಸ್ತುವೂ ಸಣ್ಣಕತೆಯ ವಸ್ತುವಾಗಬಲ್ಲವೆನ್ನುವುದನ್ನು ಮಾಸ್ತಿಯವರು ತೋರಿಸಿಕೊಟ್ಟಿದ್ದಾರೆ. ಆದರೆ ತಿರುಮಲಾಂಬಾ ಅವರ ಕತೆಗಳು ಈ ಪ್ರಕಾರಕ್ಕೆ ಸೇರುವುದಿಲ್ಲ. ಮಾಸ್ತಿಯವರನ್ನು ಸಣ್ಣಕತೆಗಳ ಜನಕ ಎಂದು ಕರೆದಂತೆ ಇವರನ್ನು ಸಣ್ಣಕತೆಗಳ ಜನನಿ ಎಂದು ಕರೆಯಲಾಗುವುದಿಲ್ಲ. ಮಹಿಳೆಯರಿಗೆ ಸೀಮಿತವಾಗಿ ಹೇಳುವುದಾದರೆ ಸಣ್ಣ ಕತೆಯ ಪ್ರಾರಂಭವಾದುದು ಈ ಶತಮಾನದ 3ನೇ ದಶಕದಲ್ಲಿ. ಉತ್ತರ ಕರ್ನಾಟಕದಲ್ಲಿ ಶ್ಯಾಮಲಾ ದೇವಿ ಬೆಳಗಾಂವಕರ, ಕೊಡಗಿನ ಗೌರಮ್ಮ ಹಾಗೂ ದಕ್ಷಿಣ ಕನ್ನಡ ಸರಸ್ವತೀ ಬಾಯಿ ರಾಜವಾಡೆ ಇವರನ್ನು ಈ ಪ್ರಕಾರದ ಆದ್ಯೆಯರು ಎಂದು ಗುರುತಿಸಬೇಕಾಗುತ್ತದೆ.*

ಕಳೆದ ಆರು ದಶಕಗಳಲ್ಲಿ ಮಹಿಳಾ ಕಥಾ ಸಾಹಿತ್ಯಕ್ಕೂ ಒಂದು ಪರಂಪರೆ ನಿರ್ಮಿತವಾಗಿದೆ. ಈ ಪರಂಪರೆಯ 4 ಪೀಳಿಗೆಗಳನ್ನು ಸ್ಪಷ್ಟವಾಗಿ ಗುರುತಿಸಬಹುದು. ಶ್ಯಾಮಲಾ ಬೆಳಗಾಂವಕರ ಮೊದಲಾದ ಮೊದಲನೆಯ ಪೀಳಿಗೆಯ ಲೇಖಕಿಯರು ಎದುರಿಸಿದ ಮುಖ್ಯ ಪ್ರಶ್ನೆಯ ಸ್ವರೂಪ ಸಾಮಾಜಿಕವಾದದ್ದು. ಪುರುಷ ಪ್ರಧಾನ ಸಮಾಜದಲ್ಲಿ ಸ್ತ್ರೀ ಒಬ್ಬ ವ್ಯಕ್ತಿಯಾಗಿ ಗುರುತಿಸಲ್ಪಡದೆ ಪತ್ನಿ, ವಿಧವೆ, ವೇಶ್ಯೆ-ಹೀಗೆ ಪುರುಷನ ಸಂಬಂಧದಲ್ಲಿಯೇ ಗುರುತಿಸಲ್ಪಟ್ಟಿದ್ದರಿಂದ ಅವಳಿಗೆ ಸ್ವತಂತ್ರವಾದ ಅಸ್ತಿತ್ವವಾಗಲಿ, ಅದರ ಕಲ್ಪನೆಯಾಗಲಿ ಇರಲಿಲ್ಲ.

ಮೊದಲನೆಯ ಪೀಳಿಗೆಯ ಲೇಖಕಿಯರ ಕತೆಗಳಲ್ಲಿ ಬರುವ ಸ್ತ್ರೀ ಪ್ರತಿಮೆಗಳೆಲ್ಲ ಈ ಅವಸ್ಥೆಯ ಸಂಕೇತಗಳಾಗಿಯೇ ಬರುತ್ತವೆ. ಈ ಸಂಕೇತಗಳನ್ನು ಭಾಷೆಯಲ್ಲಿ ಸೃಷ್ಟಿಸುವ ಕೃತಿಯ ಸ್ವರೂಪವೇ ಮೂಲತಃ ಪ್ರತಿಭಟನಾತ್ಮಕವಾದದ್ದು. ತಾವು ಸಮಾಜದಲ್ಲಿ ಕಂಡು,

[illegible]

ಅನುಭವಿಸಿದ ಚಿತ್ರಗಳನ್ನೇ ಈ ಲೇಖಕಿಯರು ಕೊಡುತ್ತಿದ್ದುದರಿಂದ ವಾಸ್ತವ ಮಾರ್ಗದ ಅನುಸರಣೆ ಅವರಿಗೆ ಅವಶ್ಯವೆನಿಸಿತು.

ಮಾಧ್ಯಮದ ಸಾಧ್ಯತೆಗಳ ಬಗ್ಗೆ ಅವರು ವಿಶೇಷ ಲಕ್ಷ್ಯ ಕೊಡದೇ ಹೋದುದರಿಂದ ಅವರ ಕೃತಿಗಳಲ್ಲಿ ಕತೆಗಳು 'ಸಣ್ಣಕತೆ'ಯ ಸಾಹಿತ್ಯ ಪ್ರಕಾರದ ವೈಶಿಷ್ಟ್ಯ ಸಾಧಿಸಿದ ಉದಾಹರಣೆಗಳು ಕಡಿಮೆ. ಎರಡನೆಯ ಪೀಳಿಗೆಯ ಲೇಖಕಿಯರು ಕಂಡ ಮಹಿಳೆಯರಲ್ಲಿಯೂ ಕೂಡ ಕ್ರಾಂತಿಕಾರಕ ಬದಲಾವಣೆಗಳು ಕಡಿಮೆ ಇರದೇ ಹೋದರೂ ಅವರಲ್ಲಿ ತಮ್ಮ ಅಸ್ಮಿತೆಯ ಅರಿವು ಜಾಗೃತವಾಗಿದ್ದುದರಿಂದ ವ್ಯವಸ್ಥೆಯ ವಿರುದ್ಧ ದನಿ ಎತ್ತುವುದು, ಪ್ರತಿಭಟನೆಯನ್ನು ಕೃತಿಗೊಳಿಸುವುದು ಅವಶ್ಯವೆನಿಸಿತು. ಈ ಪೀಳಿಗೆಯ ಪ್ರಮುಖ ಲೇಖಕಿಯರಾದ ಅನುಪಮಾ ನಿರಂಜನ ಹಾಗೂ ತ್ರಿವೇಣಿಯರಂಥ ಕತೆಗಾರ್ತಿಯರಲ್ಲಿ ಈ ಬೆಳವಣಿಗೆಯನ್ನು ಕಾಣಬಹುದು.

ವೈಜ್ಞಾನಿಕ ತಿಳಿವು ಹಾಗೂ ಮನೋವೈಜ್ಞಾನಿಕ ಒಳನೋಟಗಳನ್ನು ಹೊಂದಿದ ಈ ಲೇಖಕಿಯರು ಸಣ್ಣಕತೆಯ ಮಾಧ್ಯಮಕ್ಕೆ ಹೊಸ ಆಳ, ವಿಸ್ತಾರಗಳನ್ನು ಒದಗಿಸಿದರು. ಸ್ತ್ರೀಯನ್ನು ಕೇವಲ ಬಲಿಪಶುವನ್ನಾಗಿ ಕಾಣಿಸಿ ಅವಳಲ್ಲಿ ಕರ್ತವ್ಯ ಶಕ್ತಿಯನ್ನಾಗಿ ಗುರುತಿಸುವ ಮೂಲಕ ಅವಳ ಹೊಸ ಪ್ರತಿಮೆಗಳನ್ನು ಸೃಷ್ಟಿಸುವಲ್ಲಿಯೂ ಅವರು ಶಕ್ತರಾದರು. ಅವರ ಕತೆಗಳಲ್ಲಿ ಆಶಾವಾದವೂ ಸೀಮಿತವಾಗಿ ಕಾಣಿಸಿಕೊಂಡಿತು. ಸ್ವಾತಂತ್ರ್ಯೋತ್ತರದ ಕಾಲ ಖಂಡದಲ್ಲಿ ಬರೆಯ ತೊಡಗಿದ ಲೇಖಕಿಯರು ಬಲವಾದ ತಾತ್ವಿಕ ಆಸ್ಥೆಗಳನ್ನು ಬೆಳೆಸಿಕೊಂಡುದರಿಂದ ಅವರು ಬದುಕಿನ ಸಂಕೀರ್ಣತೆಯನ್ನು ತಮ್ಮ ಕತೆಗಳಲ್ಲಿ ಮೂಡಿಸುವಲ್ಲಿ ಆಸಕ್ತಿ ತೋರಿಸಿದರು. ಈ ತಲೆಮಾರಿನ ಲೇಖಕಿಯರಲ್ಲಿ ಪ್ರಮುಖವಾದ ರಾಜಲಕ್ಷ್ಮಿ ಎನ್. ರಾವ್ ಹಾಗೂ ವೀಣಾರ ಕತೆಗಳಲ್ಲಿ ನಾವು ನೋಡುವ ಅಂತರ್ಮುಖತೆ ಆತ್ಮಪ್ರಜ್ಞೆ ದ್ವಂದ್ವಗಳ

ಅರಿವು ನವ್ಯ ಮನೋಧರ್ಮದ ಆವಿಷ್ಕಾರಗಳು ಕತೆಯನ್ನು ಕೇವಲ ಮನೋರಂಜನೆಗಾಗಲಿ, ಸಾಮಾಜಿಕ ಜಾಗೃತಿಗಾಗಲಿ ಬಳಸದೆ ಇವರು ಅದನ್ನು ಸತ್ಯದ ಶೋಧದಂಥ ಗಂಭೀರ ಪ್ರಯತ್ನಗಳಲ್ಲಿ ತೊಡಗಿಸಿದರು ಹಾಗೂ ಅದನ್ನು ಒಂದು ಪ್ರಬುದ್ಧ ಸಾಹಿತ್ಯ ಮಾಧ್ಯಮವನ್ನಾಗಿ ಬೆಳೆಸಿಕೊಂಡರು.

1970ರ ನಂತರ ಬರೆಯ ತೊಡಗಿದ ಲೇಖಕಿಯರು ಒಂದಿಲ್ಲೊಂದು ರೀತಿಯಿಂದ ಜಾಗತಿಕ ಸ್ವರೂಪದ ಸ್ತ್ರೀಮುಕ್ತಿ ಚಳುವಳಿಗಳಿಂದ ಪ್ರಭಾವಿತರಾದರು. ಇವರು ಬರೆಯುತ್ತಿರುವ ವೇಳೆಗೆ ಸಮಾಜದಲ್ಲಿಯೂ ಸಾಕಷ್ಟು ಸ್ಥಿತ್ಯಂತರಗಳಾಗಿದ್ದವು. ಮಹಿಳೆಗೆ ಇಂದು ಎಲ್ಲ ಕಾರ್ಯ ಕ್ಷೇತ್ರಗಳೂ ಮುಕ್ತವಾಗಿವೆಯಲ್ಲದೆ ಶಿಕ್ಷಣದ ಎಲ್ಲ ಪ್ರಕಾರಗಳೂ ಲಭ್ಯವಿದೆ. ಹೀಗಾಗಿ ಅವಳ ಅನುಭವ ಹಿಂದೆ ಎಂದೂ ಇಲ್ಲದ ವ್ಯಾಪ್ತಿ ವೈವಿಧ್ಯಗಳನ್ನು ಹೊಂದಿದೆ.

ಪುರುಷರೊಂದಿಗಿನ ವಿನಿಮಯ, ಸಹಚರ್ಯಗಳು ಹೆಚ್ಚಿದಂತೆ ಹೆಂಗಸಿಗೆ ಸಂಬಂಧಿಸಿದಂತೆ ಇರುವ ಅರ್ಥಹೀನವಾದ ಜೀವ ವಿರೋಧಿ ಮೌಲ್ಯಗಳು ಕುಸಿದು, ಹೊಸ ಮಹಿಳೆಯ ಹೊಸ ಮನುಷ್ಯನ, ಹೊಸ ಚರಿತ್ರೆಯ ಪುಟಗಳಿಗೆ ನಾಂದಿಯಾಗಬೇಕು[12] ಎನ್ನುವ ಕರೆಯನ್ನು ನಮ್ಮ ಅನೇಕ ಮಹಿಳಾ ಸಾಹಿತಿಗಳು ಸರಿಯಾದ ಸಂದರ್ಭದಲ್ಲಿಯೇ ಗ್ರಹಿಸಿದ್ದಾರೆ, ಪ್ರತಿಕ್ರಿಯಿಸಿದ್ದಾರೆ.

ತನ್ನ ಅನುಕೂಲಕ್ಕಾಗಿ ಪುರುಷ ಪ್ರಧಾನ ವ್ಯವಸ್ಥೆಯು ಸ್ತ್ರೀಗೆ ಸೃಷ್ಟಿಸಿಕೊಟ್ಟ ಮೌಲ್ಯಗಳಲ್ಲಿ ತಾಯ್ತನವೂ ಒಂದಾಗಿದೆ. ಇದನ್ನು ಅತಿಯಾಗಿ ವೈಭವೀಕರಿಸುತ್ತಾ, ಹೆಣ್ಣಿನ ಜೀವನದ ಅರ್ಥವಂತಿಕೆಯನ್ನು, ಸಾರ್ಥಕ್ಯವನ್ನು ಅವಳ ಮಾತೃತ್ವದೊಂದಿಗೆ ಸಮೀಕರಿಸಿದ್ದರಲ್ಲಿ ಆ ಮೌಲ್ಯ ವ್ಯವಸ್ಥೆಯ ದುರಂತವಿದೆ. ನಮ್ಮ ಕೆಲವು ಲೇಖಕಿಯರು ಆ ವಿದ್ಯೆಯನ್ನು ಬಯಲುಗೊಳಿಸಲು ಪ್ರಯತ್ನಿಸಿದ್ದಾರೆ. ಎಂದರೆ, ಕೌಟುಂಬಿಕ, ನೆಲೆಯಾಚೆಗೂ ಸ್ತ್ರೀಗೆ ಇರುವ

ಅಸ್ತಿತ್ವವನ್ನು ಇಂಥ ರಚನೆಗಳು ಸ್ಪಷ್ಟಪಡಿಸಿವೆ. ಸವಾಲುಗಳನ್ನು ಎದುರಿಸುತ್ತ, ತಮ್ಮ ನಿಜವಾದ ಸ್ವರೂಪಗಳ ಪತ್ತೆಗೆ ಹೊರಡುವ, ಆ ಪ್ರಕ್ರಿಯೆಯಲ್ಲಿ ಗಟ್ಟಿಯಾಗುತ್ತ ಹೋಗುವ ಈ ಪಾತ್ರಗಳೂ ಸ್ತ್ರೀ ಸಂವೇದನೆಗಳ ವಿಶಿಷ್ಟಾಂಶಗಳನ್ನು ಸೂಚಿಸುತ್ತವೆ.

ಅಕ್ಕಮಹಾದೇವಿ, (ಶರಣಸತಿ-ಲಿಂಗಪತಿ)ಸಂಚಿ ಹೊನ್ನಮ್ಮನಂತವರು ಸಹ ಪಾತಿವ್ರತ್ಯ, ಸ್ವಾಮಿನಿಷ್ಠೆ, ತಾಳ್ಮೆ ವಿಧೇಯತೆಗಳ ಸಾಮಾಜಿಕ ಸ್ತ್ರೀ ಗುಣಗಳನ್ನು ಮಾತೃತ್ವ, ಕ್ಷಮೆ, ಔದಾರ್ಯ, ಮಾಧುರ್ಯಗಳ ವ್ಯಕ್ತಿ ಗುಣಗಳನ್ನು ಸ್ತ್ರೀತ್ವದ ಮಾದರಿಯೆಂದು ಮತ್ತೆ ಮತ್ತೆ ನಂಬಿಸಿದರು.

"ಸ್ತ್ರೀ-ಪುರುಷರು ಕೆಲವು ವಿಷಯಗಳಲ್ಲಿ ಭಿನ್ನವಾದರೂ ಜ್ಞಾನ, ಬುದ್ಧಿ ಮೊದಲಾದವುಗಳು ಮಾತ್ರ ಇಬ್ಬರಿಗೂ ಸಮಾನವಾಗಿಯೇ ಇರುವುವು. ಆದ್ದರಿಂದ ಜ್ಞಾನಾಭಿವೃದ್ಧಿಯು ಪುರುಷರಿಗೆ ಹೇಗೋ ಸ್ತ್ರೀಯರಿಗೂ ಹಾಗೆಯೇ ಪರಮ ಪ್ರಯೋಜನಕಾರಿ ಎನ್ನುವುದರಲ್ಲಿ ಸಂದೇಹವಿಲ್ಲ."[13]

ಸ್ತ್ರೀ,ಪುರುಷನ ಅಲಂಕಾರವಲ್ಲ; ಜನರ ಬದುಕನ್ನು ಒಳ್ಳೆಯ ದಾರಿಯಲ್ಲಿ ಸುಖಮಯವಾಗಿ ನಡೆಯುವಂತೆ ಮಾಡಬೇಕಾದ ಹೊಣೆ ಅವಳಿಗಿದೆ. ತನ್ನ ಕುಟುಂಬಕ್ಕೆ ಮಾತ್ರ ಅವಳ ಕರ್ತವ್ಯ ಸೀಮಿತವಲ್ಲ. ಸಮಾಜದ ಇತರ ಸಂತ್ರಸ್ತರ ದುರವಸ್ಥೆಯನ್ನು ನಿವಾರಿಸಲು ಆಕೆ ಶ್ರಮಿಸಬೇಕು ಎನ್ನಲಾಯಿತು. ಆದರೆ ಭಾರತದಾದ್ಯಂತ ಹರಡಿದ್ದ ನವೋದಯದ ಸಾಂಸ್ಕೃತಿಕ ಸಂಘರ್ಷದ ಕಾವಿನಲ್ಲಿ ತಿಲಕ್, ಗಾಂಧಿ ಮುಂತಾದವರೆಲ್ಲ ಪ್ರತಿಪಾದಿಸಿದ 'ಸ್ತ್ರೀಮೌಲ್ಯ'ಗಳನ್ನೆ ಅವರೂ ಪುನರುಚ್ಚರಿಸಿದರು. ಸಾಮಾಜಿಕವಾಗಿ ನಿರ್ಗತಿಕರಾದ ಸ್ತ್ರೀಯರ ಬದುಕಿಗೆ ಆರ್ಥಿಕ ಸ್ವಾವಲಂಬನೆ ಅಗತ್ಯವೆಂದು ಸಾರಿದರು. ಗೃಹಿಣಿಯರು ಈ ಸಮಾಜ ಸುಧಾರಣೆಯಲ್ಲಿ ಪಾಲ್ಗೊಳ್ಳಬೇಕೆಂದು ಒತ್ತಿ ಹೇಳಿದರು.

'ಸ್ತ್ರೀತ್ವ' ಅಥವಾ 'ಹೆಣ್ಣುತನ' ಕೇವಲ ಭಾವನಾಪರವಾದದ್ದು, ವಿಚಾರ, ತರ್ಕಗಳು, ಪುರುಷ ಸ್ವಭಾವ ಎಂಬ ಒಂದು ಕಾಲದ ಮನಶಾಸ್ತ್ರೀಯ ನಂಬಿಕೆ ಇಂದು ಉಳಿದಿಲ್ಲ. ಪ್ರತಿ ಮಾನವ ವ್ಯಕ್ತಿಯಲ್ಲೂ ಈ ಗುಣಗಳ ಮಿಶ್ರಣ ಮಾತ್ರವಿರುತ್ತವೆ. ಯಾವುದಾದರೊಂದು ಮೇಲುಗೈ ಪಡೆದಾಗ ಅವರದು 'ಸ್ತ್ರೀಯ ಸ್ವಭಾವ-ಪುರುಷ ಸ್ವಭಾವ' ಎಂದು ಅರ್ಥೈಸಲ್ಪಡುತ್ತದೆ, ಎಂಬುದು ಈ ಹೊತ್ತಿಗೆ ನಂಬಿಕೆ. ಈ ವ್ಯಾಖ್ಯಾನ ಕೂಡ ಭಾವನಾತ್ಮಕತೆಯನ್ನು ಸ್ತ್ರೀ ಮೂಲಭೂತ ಸ್ವಭಾವವೆಂದೇ ಪರಿಗಣಿಸುವ ದೃಷ್ಟಿಕೋನವುಳ್ಳದ್ದೇ ಆಗಿದೆ. ಪರಂಪರಾಗತ ಸ್ತ್ರೀ ಕುರಿತಾದ ಮೌಲ್ಯಗಲನ್ನು ಪ್ರಶ್ನಿಸುವ ಲೇಖಕಿಗೆ ಈ ಮೌಲ್ಯ ವಿನಾಶದಿಂದ ನಿರ್ಮಾಣವಾಗುವ ನಿರ್ವಾತದ ಸ್ಥಿತಿಯನ್ನು ಬೇರೊಂದು ಮೌಲ್ಯವಾಗಿ ಪರಿವರ್ತಿಸಲೇಬೇಕಾದ ಅನಿವಾರ್ಯತೆ ಎದುರಾಗುತ್ತದೆ. ಈ ಮರು ಮೌಲ್ಯ ನಿರ್ಮಾಣ, ಬದುಕಿನ ಸಮಗ್ರ ಅನುಭವಕ್ಕೆ ಸಂವೇದಿಸುವುದರಿಂದ ಮಾತ್ರ ಸಾಧ್ಯವಾಗುವಂಥದು.

ಸೂಕ್ಷ್ಮ ಸಂವೇದನಾಶೀಲತೆ ಹೆಚ್ಚಾಗಿರುವವರು ಸಾಂದರ್ಭಿಕವಾಗಿ ಈ ಅನುಭವ ತೀವ್ರತೆ ಪಡೆಯುತ್ತಾರೆ. ಅಂಥ ಹೊತ್ತಲ್ಲಿ ಒಂದು ಅಭಿವ್ಯಕ್ತಿಯ ಸೆಳೆತಕ್ಕೊಳಗಾಗುತ್ತಾರೆ. ಆದರೆ ಸುಪ್ತ ಪ್ರಜ್ಞೆಯಲ್ಲಿ ಕುಳಿತಿರುವ ಸಂಪ್ರದಾಯದ ಪೂರ್ವ ನಿರ್ಧಾರಿತ ಬೇರುಗಳು ಈ ಸಮಗ್ರತೆಗೆ ಅಡ್ಡಿಯಾಗುತ್ತದೆ. ಹೀಗಾದಾಗ ಬದಲಾವಣೆಯ ಅಪೇಕ್ಷೆ - ಈ ಪೂರ್ವ ನಿರ್ಧಾರಿತ ಮೌಲ್ಯದೊಳಗೆಯೇ ಬಂಧಿತವಾಗುತ್ತದೆ.

ಹೆಣ್ಣಿನ ವಿವಾಹ ಸಮಸ್ಯೆ, ವರದಕ್ಷಿಣೆ, ಉದ್ಯೋಗಸ್ಥೆಯರ ಸಮಸ್ಯೆ, ವಿಧವಾ ವಿವಾಹ, ವಿವಾಹಬಾಹಿರ ಪ್ರೇಮ, ಕಾಮ ಮುಂತಾದ ಅನೇಕ ವಸ್ತುಗಳನ್ನು ಕುರಿತು ಬರೆಯುತ್ತಿರುವ ಇವರೆಲ್ಲ ಗಂಡಿನ ದಬ್ಬಾಳಿಕೆಗೆ ಸಿಕ್ಕು ನರಳುತ್ತಿರುವ ಸ್ತ್ರೀ ಪಾತ್ರಗಳ ನೂರಾರು ಮುಖಗಳನ್ನು ಚಿತ್ರಿಸಿದ್ದಾರೆ. ಆದರೆ ಯಾವುದೇ ಸಮಸ್ಯೆಯಿರಲಿ, ವಿವಾಹದ ಮೂಲಕ ಅಥವಾ ಸುರಕ್ಷಿತ

[illegible]

[illegible]

[illegible]

ಕುಟುಂಬದ ಚೌಕಟ್ಟೊಂದು ದೊರೆತರೆ ಸಾಕು ಅದು ಪರಿಹಾರವಾದಂತೆ ಎಂಬ ತೀರ್ಮಾನಕ್ಕೆ ಆತುಕೊಳ್ಳುವಂತೆ ಇವರ ರಚನೆಗಳಿವೆ.

ಸ್ತ್ರೀವಾದವೂ ಯಾವುದೇ ಒಂದು ದೇಶಕ್ಕೆ ಸೀಮಿತವಾಗದ ಬೇರೆ -ಬೇರೆ ದೇಶಗಳ ಸ್ತ್ರೀಯರ ಪರಂಪರೆ ಸ್ಥಿತಿಗತಿಗನುಗುಣವಾಗಿ ಭಿನ್ನ-ಭಿನ್ನ ಸ್ವರೂಪವನ್ನು ಪಡೆದು ವಿಕಾಸವನ್ನು ಹೊಂದುತ್ತಿದೆ. ಮೊರಿವ್ಗಲ್ಯೆನ್ ಕ್ರಾಪ್ಪಳ ಮೊಳಗಿನೊಂದಿಗೆ ಆರಂಭವಾದ ಸ್ತ್ರೀವಾದವು ಹೆಣ್ಣು ಆಕೆಯದೇ ವಿಶಿಷ್ಟ ಸಂವೇದನೆಯಿಂದ ಪ್ರಕೃತಿಗನುಕೂಲವಾದ ಪರಿಸರದಲ್ಲಿ ಪೂರ್ಣವಿಕಾಸವನ್ನು ಪಡೆಯಬೇಕಾದ್ದರ ಅಗತ್ಯವನ್ನು ಪ್ರತಿಪಾದಿಸಿದ ವರ್ಜಿನಿಯಾವ್ಗಲ್ಯೆಳ ವಿಶಿಷ್ಟ ಚಿಂತನೆಯೊಂದಿಗೆ ಮೇಳೈಸುತ್ತ ಸಾಗಿದುದನ್ನು ಅದರ ಇತಿಹಾಸ ಹೇಳುತ್ತದೆ. ಅಮೇರಿಕಾ ಇಂಗ್ಲೆಂಡ್, ಆಫ್ರಿಕಾ ಮುಂತಾದ ದೇಶಗಳಲ್ಲಿ ಆಯಾ ದೇಶದ ಸ್ತ್ರೀಯರ ವಿಶಿಷ್ಟ ಸಮಸ್ಯೆಗಳಿಗನುಗುಣವಾಗಿ ಭಿನ್ನ ಆಯಾಮಗಳನ್ನು ಸ್ತ್ರೀವಾದವು ಪಡೆದುಕೊಂಡಿದೆ. ಹಾಗೆಯೇ ಭಾರತಕ್ಕೆ ವಿಶಿಷ್ಟವಾದ ಪರಿಸರ ಹಾಗೂ ಸನ್ನಿವೇಶಗಳಲ್ಲಿ ಭಾರತೀಯ ಸ್ತ್ರೀವಾದವಾಗಿ ಅದು ರೂಪುಗೊಳ್ಳುತ್ತ ಸಾಗುವುದನ್ನು ಕಾಣಬಹುದು.

ಮನುಕುಲ ಇತಿಹಾಸದೊಂದಿಗೆ ಬೆಸೆದುಕೊಂಡಿರುವ ಯಾವುದೇ ಚಿಂತನೆಯನ್ನು ನಿರ್ದಿಷ್ಟ ಪ್ರದೇಶಕ್ಕೆ ಸೀಮಿತಗೊಳಿಸುವುದು ಸಾಧ್ಯವಿಲ್ಲ. ಪುರುಷ ಪ್ರಧಾನವಾದ ವ್ಯವಸ್ಥೆಯಲ್ಲಿ ಹೆಣ್ಣಿನ ಶೋಷಿತ ಸ್ಥಿತಿ ಭಾರತದಲ್ಲೂ ಒಂದು ವಾಸ್ತವವಾಗಿರುವಾಗ ಪಾಶ್ಚಾತ್ಯ ಸ್ತ್ರೀವಾದದ ಪ್ರೇರಣೆಗೆ ಇಲ್ಲಿ ಪ್ರಜ್ಞಾವಂತ ಸಮೂಹ ಒಂದು ಭಾಗ ಸಹಜವಾಗಿ ತೆರೆದುಕೊಂಡಿತು. ಭಾರತದಲ್ಲಿ ಇತ್ತೀಚೆಗೆ ಸ್ತ್ರೀವಾದಿ ಚಳುವಳಿ ತೀವ್ರತೆಯನ್ನು ಪಡೆಯುತ್ತಾ, ಒಂದು ಶಕ್ತಿಯಾಗಿ ಬೆಳೆಯುತ್ತಿದೆ.

ಸಣ್ಣಕತೆ ಬೆಳೆದುಬಂದ ರೀತಿ

ಹತ್ತನೇ ಶತಮಾನದಷ್ಟು ಹಿಂದೆಯೇ ಶಿವಕೋಟ್ಯಾಚಾರ್ಯನ ವಡ್ಡಾರಾಧನೆಯಿಂದ ಪ್ರಾರಂಭವಾದ ಕನ್ನಡ ಸಣ್ಣಕತೆ; ಪಂಜೆ ಮಂಗೇಶರಾಯರು, ಎಂ.ಎನ್. ಕಾಮತ್, ಕೆರೂರು ವಾಸುದೇವಾಚಾರ್ಯರೊಂದಿಗೆ ರೂಪ ಪಡೆಯ ಆರಂಭಿಸಿ, ಮಾಸ್ತಿ ವೆಂಕಟೇಶ ಅಯ್ಯಂಗಾರ್‌ರವರು ಸಮೃದ್ಧ ಕಾಣಿಕೆಯನ್ನು ನೀಡಿ, ಅನೇಕ ಮಹಿಳಾ ಕಥೆಗಾರರಿಂದ ಅದು ಮಹಿಳಾ ಸಂವೇದನೆಯನ್ನು ಪಡೆಯಿತು. ಮನುಷ್ಯನ ಕತೆ ಹೇಳುವ -ಕೇಳುವ ಮನೋವೃತ್ತಿಗೆ ಕೊನೆಯಿಲ್ಲ. ಇತ್ತೀಚೆಗೆ ಕನ್ನಡದ ಕಾದಂಬರಿಗಳು ಹೆಚ್ಚಿಗೆ ಬರುತ್ತಿರುವುದ ನಿಜವಾದರೂ ಇದರ ಜೊತೆಯಲ್ಲಿ ಒಳ್ಳೆಯ ಕತೆಗಳೂ ಬರುತ್ತಿವೆ ಮತ್ತು ಹೊಸ ಲೇಖಕರು ಈ ಪ್ರಕಾರವನ್ನು ಒಲಿಸಿಕೊಳ್ಳಲು ಪ್ರಾಮಾಣಿಕ ಪ್ರಯತ್ನ ಮಾಡುತ್ತಲೇ ಇದ್ದಾರೆ.

ವರ್ಷ-ವರ್ಷವೂ ಹೊಸ ಹೊಸ ಕತೆಗಳು, ಈ ಮೂಲಕ ಹೊಸ-ಹೊಸ ಕತೆಗಾರರೂ ಹೊರ ಬರುತ್ತಿದ್ದಾರೆ. ಕಾಲ ಉರುಳಿದಂತೆ ಭಾರತದ ಸಮಸ್ಯೆಗಳು ವಿಚಿತ್ರ ತಿರುವುಗಳನ್ನು ಪಡೆದುಕೊಳ್ಳುತ್ತಿವೆ. ಧರ್ಮದ ಹೆಸರಿನಲ್ಲಿ ಕೆಲವು ಗುಂಪುಗಳು ಅವೈಜ್ಞಾನಿಕ ನಿಲುವುಗಳನ್ನು ತಾಳಿ, ಭಾರತದ ಸಮಗ್ರತೆಗೆ ಕ್ರೂರ ಸವಾಲುಗಳನ್ನು ಎಸೆದಿವೆ. ಮಾನವ ಸಂಬಂಧಗಳು ಸಾಕಷ್ಟು ಹೊಡೆತಗಳನ್ನು ತಿಂದು ಜರ್ಝರಿತವಾಗುತ್ತವೆ. ಭಾಷೆ, ಧರ್ಮದ ಹೆಸರಿನಲ್ಲಿ ಮನುಷ್ಯನ ಅನ್ನದ ಸಮಸ್ಯೆಯ ಮೂಲವನ್ನು ಮರೆಮಾಚಲು ಸರ್ವ ಯತ್ನ ಮಾಡಲಾಗುತ್ತಿದೆ. ಬಹುಸಂಖ್ಯಾತ ಬಡವರ ಬದುಕು ನಶಿಸ ತೊಡಗಿದೆ. ಈ ದುರಂತವನ್ನು ಗುರುತಿಸಿ ಹೇಳುವುದರ ಜೊತೆಗೆ ನಮ್ಮ ಸಂಸ್ಕೃತಿಯ ಒಳ್ಳೆಯ ಎಳೆಗಳನ್ನು ಪತ್ತೆ ಮಾಡಿ, ಇವುಗಳನ್ನು

ಕಾಪಾಡುವ ಕಾರ್ಯವನ್ನು ಸಾಹಿತ್ಯ ಮಾಡುತ್ತಲೇ ಬಂದಿದೆ. ಮಾನವನನ್ನು ಮೃಗತ್ವದ ಪ್ರಪಾತಕ್ಕೆ ಬೀಳದಂತೆ ಸಾಹಿತ್ಯ ಎಚ್ಚರಿಸುತ್ತಲೇ ಬಂದಿದೆ. ಈ ದಿಕ್ಕನಲ್ಲಿ ಕಾವ್ಯದಷ್ಟೇ ಗಣನೀಯ ಕಾರ್ಯವನ್ನು ಸಣ್ಣಕತೆ ನಿರ್ವಹಿಸಿದೆ. ಈ ದಿಕ್ಕಿನಲ್ಲಿ ಕನ್ನಡ ಸಣ್ಣಕತೆಗಳು ಉತ್ತಮ ದಾರಿಯಲ್ಲಿ ಸಾಗುತ್ತಿದೆ.

ಶಾಂತಿನಾಥ ದೇಸಾಯಿಯವರು ಹೇಳುವ ಹಾಗೆ "ಕಾವ್ಯ, ಹೇಳಿ ಕೇಳಿ ಒಳಧ್ವನಿಯ ಹೊರ ಅಭಿವ್ಯಕ್ತಿ, ಸಣ್ಣಕಥೆ ಹೊರಜಗತ್ತಿನ ಒಳ ಅಭಿವ್ಯಕ್ತಿ. ಈ ಅಭಿವ್ಯಕ್ತಿ ಮೊದಮೊದಲು ಸಣ್ಣಪುಟ್ಟ ಕಾಣ್ಕೆಗಳಲ್ಲಿಯೇ ಮೂರ್ತಗೊಳ್ಳುವುದು ಅನಿವಾರ್ಯ" ಎಂಬ ಮಾತು ಸತ್ಯವಾಗಿದೆ.

ಸಣ್ಣಕಥೆಯ ಇತಿಹಾಸ:

ಸಾಹಿತ್ಯ ಪ್ರಕಾರಗಳಲ್ಲೆಲ್ಲಾ ಸಣ್ಣಕತೆ ಅತ್ಯಂತ ಪ್ರಾಚೀನವಾದದ್ದು. ಕನ್ನಡದಲ್ಲಿ ಕಾದಂಬರಿಯ ತರುವಾಯ ಸಣ್ಣಕತೆಯೇ ಅತ್ಯಂತ ಜನಪ್ರಿಯವಾದ ಮಾಧ್ಯಮವಾಗಿದೆ. ಈ ಮಾತು ಉಳಿದೆಲ್ಲಾ ಪ್ರಾಂತ್ಯಗಳ ಸಾಹಿತ್ಯಗಳಿಗೂ ಅನ್ವಯಿಸುತ್ತದೆ. ಕಥೆಯ ಬಗ್ಗೆ ಮನುಷ್ಯನಿಗಿರುವ ಜನ್ಮದಾತವಾದ ಕುತೂಹಲವೂ ಅಲ್ಲದೆ ಸಣ್ಣಕತೆ ಭಾವಗೀತದೊಡನೆ ಹೊಸದಾಗಿ ಬಂದ ಸಾಹಿತ್ಯ ಪ್ರಕಾರವಾಗಿರುವುದೂ ಇದಕ್ಕೆ ಕಾರಣವಾಗಿದೆ. ಹೊಸಗನ್ನಡದಲ್ಲಿ ಈವರೆಗೆ ಬಂದಿರುವ ಸಣ್ಣಕತೆಗಳ ಸಂಖ್ಯೆಯನ್ನು ಹೇಳುವುದು ಕೂಡ ಆಯಾಸದ ಕೆಲಸವಾಗಿದೆ. ದಿನಪತ್ರಿಕೆ, ವಾರಪತ್ರಿಕೆ ಹಾಗೂ ಮಾಸಪತ್ರಿಕೆಗಳಲ್ಲಿ ಬ್ಯಾಕ್ಟೀರಿಯಾದ ಮರಿಗಳಂತೆ ಸಣ್ಣಕತೆಗಳು ಹುಟ್ಟುತ್ತಲೇ ಇವೆ. ಯಾವ ಸಮೃದ್ಧಿ ಕಾಲದಲ್ಲಿಯೂ ಈ ಬಗೆಯ ಸಾಹಿತ್ಯ ಸೃಷ್ಟಿ ನಡೆದೇ ಇರುವಂತೆ ಕಾಣುತ್ತದೆ.

ಕಾದಂಬರಿ ಇಂಗ್ಲೀಷಿನಲ್ಲಿ 17ನೇ ಶತಮಾನದ ಕೊನೆಗೆ ಆರಂಭವಾಗಿ, ಹದಿನೆಂಟನೆ ಶತಮಾನದಲ್ಲಿ ಬೆಳೆದು, 19ನೇ ಶತಮಾನದಲ್ಲಿ ಪ್ರಬುದ್ಧವಾದ ಒಂದು ಸಾಹಿತ್ಯ ಪ್ರಕಾರವಾದರೆ, ಸಣ್ಣಕತೆ 19ನೇ ಶತಮಾನದ ತೀರ ಹೊಸ ಬೆಳವಣಿಗೆ. ಇಂಗ್ಲೀಷ್ ಸಾಹಿತ್ಯದ ಡಿಕನ್ಸ್, ಸ್ಟೀವನ್‌ಸನ್, ಆಂಟನಿ ಟ್ರಲಪ್ ಮೊದಲಾದ 19ನೇ ಶತಮಾನದ ಕಾದಂಬರಿಕಾರರು ಸಣ್ಣಕತೆಗಳನ್ನು ಬರೆದರೂ ವಿಮರ್ಶಕರು ಅವುಗಳಿಗೆ ಅಷ್ಟಾಗಿ ಲಕ್ಷ್ಯಕೊಡಲಿಲ್ಲ. ಟಾಲ್‌ಸ್ಟಾಯ್‌ನ ಕಾದಂಬರಿಗಳಿಗೆ ಸಿಕ್ಕ ಗೌರವ ಅವನ ಸಣ್ಣಕತೆಗಳಿಗೆ ಸಿಗಲಿಲ್ಲ. ರಷ್ಯದ ಆಂಟನ್ ಚೆಕೋವ್, ಫ್ರಾನ್ಸಿನ ಗಾಯ ದ ಮೊಪಾಸಾ ಮೊದಲಾದವರು ಸಣ್ಣಕತೆಗೆ ಗೌರವ ತಂದರೂ ಅದು ಅಷ್ಟಾಗಿ ಬೆಳೆಯಲಿಲ್ಲ. ಅಮೇರಿಕಾದಲ್ಲಿ ಎಡ್ಗರ್ ಆಲಿನ್‌ಪೊ, ನಾಥಾನಿಯಲ್ ಹಾಥಾರ್ನ್ ಓ. ಹೆನ್ರಿ ಮೊದಲಾದವರು ವಿಪುಲ ಸಂಖ್ಯೆಯಲ್ಲಿ ಸಣ್ಣಕತೆಗಳನ್ನು ಬರೆದು ಪ್ರಸಿದ್ಧಿಗೆ ಬಂದರು. ಇಂಗ್ಲೆಂಡಿನಲ್ಲಿಯೂ ಆರ್ನಲ್ಡ್ ಬೆನೆಟ್, ಸಾಮರ್ಸೆಟ್ ಮಾಮ್, ಎಚ್.ಜೆ. ವೆಲ್ಸ್, ಥಾಮಸ್ ಹಾರ್ಡಿ ಮೊದಲಾದವರು ಉತ್ತಮ ಮಟ್ಟದ ಅನೇಕ ಕತೆಗಳನ್ನು ಬರೆದರು. ಆದರೆ ಇಂಗ್ಲಿಷ್ ವಿಮರ್ಶೆ ಅವರ ಕಾದಂಬರಿಗಳಿಗೆ ಸೀಮಿತವಾಗಿದೆಯೇ ಹೊರತು ಈ ಲೇಖಕರನ್ನು ಸಣ್ಣ ಕತೆಗಾರರೆಂದು ಗುರುತಿಸಿಲ್ಲ.

ಸಣ್ಣಕಥೆ ಮತ್ತು ಕಾದಂಬರಿಗಳ ನಡುವೆ ಅನೇಕ ಸಾಮ್ಯಗಳಿವೆ ಎಂಬುದು ಮೇಲೆಯೇ ಕಾಣುತ್ತದೆ. ಕಥೆ, ವಸ್ತು, ಪಾತ್ರಗಳು, ಸಂಭಾಷಣೆ, ಹಿನ್ನೆಲೆ, ನಿರೂಪಣೆಯ ದೃಷ್ಟಿಕೋನ, ಜೀವನದೃಷ್ಟಿ, ನಾಟ್ಯೀಕರಣ ಇತ್ಯಾದಿ ಮೂಲ ಘಟಕಗಳು ಎರಡರಲ್ಲೂ ಇವೆ. ಪ್ರಸಿದ್ಧ ಕತೆಗಾರ ಫ್ರ್ಯಾಂಕಾ ಓ ಕಾನರ್ (1965; 28) "ಸಣ್ಣಕತೆ ಮತ್ತು ಕಾದಂಬರಿಗಳ ನಡುವಿನ ಅಂತರ ಉದ್ದದ್ದಲ್ಲ ಎಂದು ಸ್ಪಷ್ಟಪಡಿಸುತ್ತಾ, ಸಣ್ಣಕತೆಯನ್ನು ಶುದ್ಧ ಕಥನಕಲೆ ಎಂದೂ

ಕಾದಂಬರಿಯನ್ನು ಅನ್ವಯಿಕ ಕಥನ ಕಲೆ ಎಂದೂ ಕರೆಯುತ್ತಾರೆ. (The lonely voice Macmillan, London)

ಅತ್ಯಂತ ಮುಖ್ಯವಾದ ಮಾತೆಂದರೆ, ಕಾದಂಬರಿ ಒಂದು ಮೇಜರ್ ಸಾಹಿತ್ಯ ಪ್ರಕಾರವಾದರೆ, ಸಣ್ಣಕತೆ ಒಂದು ಮೈನರ್ ಸಾಹಿತ್ಯ ಪ್ರಕಾರ. ಮೂಲಭೂತವಾಗಿಯೇ ಕಾದಂಬರಿಯು ಒಳಗೊಳ್ಳುವ ಜೀವನದ ಹರವು, ಗುಣ, ಸಂಕೀರ್ಣತೆ, ವಿವರ ಸೂಕ್ಷ್ಮಗಳನ್ನು ಸಣ್ಣಕತೆ ಮೈನರ್ ಸಾಹಿತ್ಯ ಪ್ರಕಾರವಾಗಿ ಒಳಗೊಳ್ಳುವುದು ಸಾಧ್ಯವಿಲ್ಲ. ಕಾದಂಬರಿಗೆ ಇಡೀ ಜೀವನ ಅಥವಾ ಸಮಾಜವೇ ಪರಾಮರ್ಶೆಯ ಚೌಕಟ್ಟಾಗಿದೆ. ಅಲ್ಲಿ ಚಿತ್ರಿತವಾಗುವ ಜೀವನ, ಕಾಲಾವಧಿ, ಸಮಾಜಗಳನ್ನು ಅವುಗಳ ವಿಶಾಲ ಅರ್ಥದಲ್ಲಿ ನೋಡಬಹುದು. ಆದರೆ ಸಣ್ಣಕತೆಗೆ ಈ ಹರವು ಇಲ್ಲ. ಅದು ಮುಖ್ಯವಾಗಿ ವೈಯಕ್ತಿಕ ಕಲೆ, ಸ್ವಭಾವತಃ ಅದು ರೊಮ್ಯಾಂಟಿಕ್ ಜಾತಿಯದು. ಅಲ್ಲಿ ಜೀವನ, ಸಮಾಜ, ಜನಾಂಗಗಳು ಹಿನ್ನೆಲೆಯಾಗಿ ಮಾತ್ರ ಬರಲು ಸಾಧ್ಯ. ಈ ಹಿನ್ನೆಲೆಯ ಆಸರೆಯಲ್ಲಿ ಒಂದೆರಡು ವ್ಯಕ್ತಿಗಳ ಬದುಕಿನ ಒಂದು ಅನುಭವ, ಅನಿಸಿಕೆ, ಬದಲಾವಣೆ, ಮಿಂಚು, ಒಳನೋಟಗಳನ್ನು ಅದು ತೀಕ್ಷ್ಣ ರೂಪದಲ್ಲಿ ಕೊಡಬಲ್ಲದು. ಅದರಲ್ಲಿ ಹೊಳೆಯುವ ಅರ್ಥ ಸಂಪೂರ್ಣ ಅಥವಾ ಶಾಶ್ವತ ಅರ್ಥವಾಗಿರದೆ ಸಂಚಾರೀ ಜಾತಿಗೆ ಸೇರಿದ ಆಂಶಿಕ ಅರ್ಥವಾಗಿರುತ್ತದೆ. ಜೀವನದ ಒಂದು ಸಾಧ್ಯತೆಯಾಗಿರುತ್ತದೆ.

ಈ ಎರಡೂ ಸಾಹಿತ್ಯ ಪ್ರಕಾರಗಳ ನಡುವಿನ ವ್ಯತ್ಯಾಸವನ್ನು ಮಾಕ್ ಶೋರರ್ (1950) ಇನ್ನೊಂದು ಸೂಕ್ಷ್ಮ ಸಂಗತಿಯ ಮೂಲಕ ವಿವರಿಸುತ್ತಾನೆ. ಅವನ ಪ್ರಕಾರ ಸಣ್ಣಕತೆ ನೈತಿಕ ಅರಿವಿನಲ್ಲಿಯ ಬದಲಾವಣೆಯನ್ನು ತೋರಿಸಿದರೆ, ಕಾದಂಬರಿ ನೈತಿಕ ಬದುಕಿನಲ್ಲಿಯ ಬದಲಾವಣೆಯನ್ನು ತೋರಿಸುತ್ತದೆ ಎಂದಿದ್ದಾರೆ. ಸಣ್ಣಕತೆ ನೈತಿಕ ಸಾಕ್ಷಾತ್ಕಾರವನ್ನು ಒಂದು

ಅನಿಸಿಕೆಯಂತೆ ತಟ್ಟನೆ ಮಿಂಚಿಸಿ ಬಿಡುತ್ತದೆ. ಬೆಳವಣಿಗೆ ಅಥವಾ ವಿಕಾಸದ ಪ್ರಕ್ರಿಯೆಯನ್ನು ಊಹೆಗೆ ಬಿಡುತ್ತದೆ. ಅದರ ಶಕ್ತಿ ಇರುವುದು ಈ ಅನಿಸಿಕೆಯ ತೀವ್ರತೆಯಲ್ಲಿ. ಹೀಗೆ ಸಂಕ್ಷಿಪ್ತತೆಯೇ ಸಣ್ಣಕತೆಯ ಜೀವನದರ್ಶನದ ಸ್ವರೂಪವನ್ನು ನಿರ್ಧರಿಸುತ್ತದೆ.

ಸಣ್ಣಕಥೆಯ ತಂತ್ರ, ವ್ಯಾಪ್ತಿ, ಬರವಣಿಗೆಯ ರೀತಿ, ಅದರ ಒಟ್ಟಂದದ ಪರಿಣಾಮ ಹಾಗೂ ಅದು ತೊಡಗಬಹುದಾದ ಅನೇಕ ರೂಪಗಳು, ಇವುಗಳ ಬಗ್ಗೆ ವಿಮರ್ಶಕರು ಅಭ್ಯಾಸಪೂರ್ಣವಾದ ಲೇಖನಗಳನ್ನು ಸಣ್ಣಕತೆಗಳಲ್ಲಿ ಬಳಸಿಕೊಂಡಿದ್ದಾರೆ. ಸಣ್ಣಕತೆಯ ರಚನೆಯ ಶಾಸ್ತ್ರ ಅವಗತವಾಗಿ ಅದರ ಸ್ವರೂಪ ನಿಶ್ಚಿತವಾದ ಮೇಲೆ ಅದರ ಬರವಣಿಗೆಯೂ ಸುಲಭವಾಗುತ್ತ ಬಂದಿತು. ಈಗ ಕತೆಗಳಲ್ಲಿ ಆ ಪರಿಶ್ರಮ ಕಡಿಮೆಯಾಗುತ್ತ ಬಂದಿದೆ.

ಸಣ್ಣಕತೆಯ ಪ್ರಕಾರಕ್ಕೆ ವಿಶಿಷ್ಟ ರೂಪ ನೀಡಿ ಅದನ್ನು ಪರಿಣಾಮಕಾರಿ ಮಾಧ್ಯಮವನ್ನಾಗಿ ಬಳಸಿದವರಲ್ಲಿ ಶ್ರೀನಿವಾಸರು ಮೊದಲಿಗರು. ಚಾರಿತ್ರಿಕವಾಗಿ ಸಣ್ಣ ಕಥೆಗಳನ್ನು ಬರೆದವರಲ್ಲಿ ಮೊದಲಿಗರು ಯಾರು ಎಂಬ ಜಿಜ್ಞಾಸೆಯಿದೆ. ಈ ಶತಮಾನದ ಆರಂಭದಲ್ಲಿ ಕನ್ನಡದ ಸಣ್ಣ ಕಥೆಗಳ ಉಗಮವಾಯಿತು. ಆರಂಭದಲ್ಲಿ ಸಣ್ಣಕತೆಗಳನ್ನು ಬರೆದವರ ಸಾಲಿಗೆ ಪಂಜೆ ಮಂಗೇಶರಾಯರು, ಕೆರೂರ ವಾಸುದೇವಾಚಾರ್ಯರು, ಎಂ.ಎನ್. ಕಾಮತರು ಮುಂತಾದವರು ಸೇರುತ್ತಾರೆ. ಸಮಗ್ರ ಜೀವನ ದೃಷ್ಟಿಯ ಅಭಾವದಿಂದಾಗಿ ಈ ಮೂವರು ಕಥೆಗಾರರು ನಂತರದ ಕತೆಗಾರರ ಮೇಲೆ ಪ್ರಭಾವ ಬೀರದೆ ಹೋದರು. ಆದರೂ ಸಣ್ಣಕತೆಯ ಬೆಳವಣಿಗೆಯ ಹಾದಿಯಲ್ಲಿ ಇವರಿಗೆ ಐತಿಹಾಸಿಕ ಮಹತ್ವ ಲಭಿಸಿದೆ.

ಹೀಗಿದ್ದರೂ ಶ್ರೀನಿವಾಸರು ಸಣ್ಣಕತೆಯ ಜನಕರೆಂಬ ಖ್ಯಾತಿಗೆ ಪಾತ್ರರಾಗಿದ್ದಾರೆ. ಇವರ ಆರಂಭದ ಕತೆಗಳಲ್ಲಿಯೇ ಗೋಚರಿಸುವ ಆಳವಾದ ತಿಳಿವು ಮತ್ತು ಜೀವನ ದೃಷ್ಟಿಗಳು

[illegible]

[illegible]

[illegible]

[illegible]

[illegible]

ಇಂದಿಗೂ ಬೆರಗುಗೊಳಿಸುವಂಥವು. ಮಾಸ್ತಿಯವರ ಕತೆಗಳ ವಸ್ತು, ತಂತ್ರ, ತಿಳಿಹಾಸ್ಯ, ಹಿರಿದಾದ ಜೀವದೃಷ್ಟಿ, ಸರಳ ಸುಂದರಶೈಲಿ, ಅಚ್ಚಳಿಯದ ಪಾತ್ರಗಳು ಕನ್ನಡ ಸಣ್ಣಕಥಾ ಪ್ರಪಂಚದಲ್ಲಿ ವಿಶಿಷ್ಟವಾಗಿ ಉಳಿದಿದೆ.

19ನೇ ಶತಮಾನದಲ್ಲಿ ಸಣ್ಣಕತೆ ಮೊದಲು ಅಮೇರಿಕಾದಲ್ಲಿ ಪ್ರಚಾರಕ್ಕೆ ಬಂದಿತು. ನಂತರ ಪ್ರಪಂಚದಲ್ಲೆಲ್ಲಾ ಪ್ರಸಾರಗೊಂಡಿತು. ಫ್ರಾನ್ಸ್, ಇಂಗ್ಲೆಂಡ್, ರಷ್ಯಾ, ಜರ್ಮನಿ, ನಾರ್ವೆಗಳಲ್ಲಿ ಸಣ್ಣಕತೆಗಳು ಅಸಂಖ್ಯಾತವಾಗಿ ಜನಜೀವನವನ್ನು ಚಿತ್ರಿಸತೊಡಗಿದವು. ಹಗಾವಾಕರ್, ಬ್ರೆಟ್‌ಹಾರ್ಟನ್, ಹೆನ್ರಿ ಜೇಮ್ಸ್, ಕ್ಯಾಥರೀನ್, ಮ್ಯಾನ್‌ಫೀಲ್ಡ್, ಎಡ್ಗರ ಅಲೆನ್, ಪೊ. ಸಾಮರ್‌ಸಿಟ್‌ಮಾಮ್ ಮುಂತಾದವರು ಸಣ್ಣಕಥಾ ಕ್ಷೇತ್ರದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಆಧುನಿಕ ತ್ವರಿತ ಜೀವನದ ವೇಗ, ಜನರ ವಿದ್ಯೆಯ ಮಟ್ಟ ಏರಿದುದು ಅಚ್ಚಿನ ಸೌಕರ್ಯ ನಾಗರೀಕತೆ ಬೆಳೆದಂತೆ ಹೆಚ್ಚು ಹೆಚ್ಚು ತೊಡಕಾಗುತ್ತಿರುವ ಜೀವನ ಸಮಸ್ಯೆಗಳು, ಇವೆಲ್ಲಾ ಈ ಸಾಹಿತ್ಯ ಪ್ರಕಾರವನ್ನು ಪೋಷಿಸಿದವು.

ಸಣ್ಣಕತೆ ಒಂದು ರಸ ಬಿಂದು ಅಥವಾ ರಸದ ಗಟ್ಟಿ. ಅದರ ಗುರಿ ಸೂಜಿಯ ಮೊನೆಯಂತೆ ಚೂಪು. ಅದರ ಶೈಲಿಯ ವೇಗ ಜೂಜಿನ ಕುದುರೆಯ ನಾಗಾಲೋಟ, ಅದು ಉಪಯೋಗಿಸಿಕೊಳ್ಳುವ ಮಾತುಗಳು ಅತೀ ಸ್ವಲ್ಪ, ತೋರಿಸುವ ಸತ್ಯ ಅದ್ಭುತ ಓದುವುದಕ್ಕೆ ಸ್ವಲ್ಪವೇ ಕಾಲ ಹಿಡಿದರೂ ಅದು ತೆರೆಯುವ ರಸಭಂಡಾರವನ್ನು ಅನೇಕ ಗಂಟೆಗಳ ಕಾಲ ಸವಿಯಬಹುದು. ಸಣ್ಣದರಲ್ಲಿ ದೊಡ್ಡದನ್ನು ಅಡಗಿಸುವ, ಸ್ವಲ್ಪದರಲ್ಲಿ ಬಹಳಷ್ಟು ಹೇಳುವ ಚಾತುರ್ಯ ಅದು. ಸಣ್ಣಕತೆಯಲ್ಲಿ ಭಾವದ ಹಿರಿಮೆ ಇರಬೇಕು, ಭಾವ ನಿರೂಪಣೆ ಸುಂದರವಾಗಿರಬೇಕು, ವಸ್ತುವಿಗಿಂತ ವಸ್ತುವಿನ ವರ್ಣನೆಗೆ ಹೆಚ್ಚು ಪ್ರಾಧ್ಯಾನ್ಯ. ಮೊದಲಿನಿಂದ

[illegible]

[illegible]

[illegible]

ಕೊನೆಯವರೆಗೆ ಪ್ರತಿಯೊಂದು ಮಾತೂ ಪರಿಣಾಮ ರಮಣೀಯತೆಗೆ ಸಹಾಯಕವಾಗಬೇಕು. ಯಾವುದೂ ಮಿತಿಯನ್ನು ಮೀರಬಾರದು, ಅವಶ್ಯಕವಲ್ಲದ ಪದ ಅಲ್ಲಿರಬಾರದು. ಪ್ರತಿಯೊಂದು ಮಾತನ್ನೂ ತೂಗಿ ಚೂಪು ಮಾಡಿ ಬಳಸಬೇಕು. ಆದರೆ ಸ್ವಾಭಾವಿಕತೆಗೆ ಭಂಗ ಬರಬಾರದು.

ಇಷ್ಟೆಲ್ಲಾ ಲಕ್ಷಣಗಳನ್ನು ಹೊಂದಿರುವ ಸಣ್ಣಕತೆಗಳಲ್ಲಿ ಪ್ರಮಾದ ನಡೆದದ್ದು ಭಾರತದ ಬಂಗಾಳ ಪ್ರಾಂತ್ಯದಲ್ಲಿ. ಆ ಪ್ರಯೋಗದಲ್ಲಿ ಮೊದಲ ಕೀರ್ತಿ ಪಡೆದವರು ವಿಶ್ವಕವಿ ಠಾಕೂರರು. ಠಾಗೂರರು 200 ಕ್ಕಿಂತ ಹೆಚ್ಚು ಸಣ್ಣಕತೆಗಳನ್ನು ಬರೆದಿದ್ದಾರೆ. ಕರ್ನಾಟಕವು ಬಹುಬೇಗ ಸಣ್ಣಕತೆಯ ಪ್ರಭಾವವನ್ನು ಕಂಡುಕೊಂಡಿತು. ಕನ್ನಡ ಸಾಹಿತ್ಯದಲ್ಲಿ ಮೊದಲು ಕಲಾಪ್ರಸಿದ್ಧಿಗೆ ಬಂದ ಸಣ್ಣಕಥೆಗಳು ಶ್ರೀನಿವಾಸರು ಬರೆದವು. 'ಸುವಾಸಿನಿ' ಪತ್ರಿಕೆಯಲ್ಲಿ ಪ್ರಕಟಿಸಿದ ಭಾರತ ಶ್ರವಣ, ಕಮಲಾಪುರದ ಹೊಟ್ಲಿನಲ್ಲಿ, 'ನನ್ನ ಚಿಕ್ಕತಾಯಿ' 'ನನ್ನ ಚಿಕ್ಕ ತಂದೆಯವರ ಉಯಿಲ್' ಕತೆಗಳ ಮೂಲಕ ಕನ್ನಡ ಆಧುನಿಕ ಸಣ್ಣಕತೆಯ ಚರಿತ್ರೆಯನ್ನು ಆರಂಭಿಸಿದರು. ಇವರ ಜೊತೆಗೆ ಶ್ರೀ ಎಂ.ಎನ್. ಕಾಮತ್‌ರು ಕೆರೂರು ವಾಸುದೇವಾಚಾರ್ಯರು, ಸಣ್ಣಕತೆಗಳ ಹುಟ್ಟು, ಬೆಳವಣಿಗೆಗಳ ಸಂಬಂಧದಲ್ಲಿ ಕನ್ನಡ ನಾಡಿನ ಬೇರೆ ಬೇರೆ ಭಾಗಗಳಲ್ಲಿ ವ್ಯವಸಾಯ ಮಾಡಿದವರು.

ಈಗ ಕನ್ನಡದಲ್ಲಿ ಬಂದಿರುವ ಸಣ್ಣಕತೆಗಳಲ್ಲಿ ಅತ್ಯುತ್ತಮವಾದವು ಭಾರತದ ಇತರ ಭಾಷೆಗಳ ಉತ್ತಮ ಕತೆಗಳಿಗೂ, ಅನೇಕ ಪಾಶ್ಚಾತ್ಯ ಉತ್ತಮ ಕತೆಗಳಿಗೂ ಯಾವ ವಿಧದಲ್ಲಿಯೂ ಕಡಿಮೆ ಇಲ್ಲ. ನವೋದಯ ಕಾಲಘಟ್ಟದಲ್ಲಿ ಸಣ್ಣಕತೆಯ ಮಾಧ್ಯಮದಲ್ಲಿ ಶ್ರೀನಿವಾಸ, ಎ.ಆರ್. ಕೃಷ್ಣಶಾಸ್ತ್ರಿ, ಆನಂದ, ಕುವೆಂಪು, ಅಶ್ವಥ್‌ರು ನವೋದಯ ಸಂದರ್ಭದಲ್ಲಿ ಕಾಣಿಸಿಕೊಂಡ ಪ್ರಸಿದ್ಧ ಲೇಖಕಿಯರು. ಹಾಗೆ ಮಹಿಳೆಯರು ಕುಟುಂಬದ ಚೌಕಟ್ಟಿನ ಒಳಗಡೆ

ಇದ್ದು ಕತೆ ಬರೆದು ಪ್ರಸಿದ್ಧಿ ಪಡೆದರು. ಗೌರಮ್ಮ, ಶ್ಯಾಮಲಾದೇವಿ, ತಿರುಮಲಾಂಬರ ಕತೆಗಳು ನೈಜ ಬದುಕಿಗೆ ಹತ್ತಿರವಾಗಿವೆ.

ಸುತ್ತಮುತ್ತಲ ಸಮಾಜದ ಕಠಿಣ ಪರಿಸ್ಥಿತಿ ಮತ್ತು ಅನುಭವವೇ ಬಹುಪಾಲು ಗೌರಮ್ಮನನ್ನು ಆ ರೀತಿ ರೂಪಿಸಿರುವಂತೆ ತೋರುತ್ತದೆ. ಗೌರಮ್ಮ ತಮ್ಮ ಬರವಣಿಗೆಯಲ್ಲಿ ಅನುಭವಕ್ಕೆ ಮತ್ತು ಗ್ರಹಣಶಕ್ತಿ ಪರಿಮಿತಿಗೆ ನಿಷ್ಠರಾಗಿದ್ದಾರೆ ! ತನ್ನ ಈ ಮಿತಿಯಿಂದಾಚೆ ಹೋದ ಉದಾಹರಣೆ ಇಲ್ಲ, ಆ ಕಾರಣವೇ ಆಕೆಯ ಬರವಣಿಗೆ ಜೊಳ್ಳಾಗಲಿಲ್ಲ.

ಕೊಡಗಿಗೆ ಮಹಾತ್ಮಗಾಂಧೀಜೀ ಬಂದಾಗ ಉಪವಾಸ ಕುಳಿತು ತನ್ನ ಮೈಮೇಲಿನ ಆಭರಣ ನೀಡಿದ್ದು ಉಂಟು. ಅದಕ್ಕೆ ಬದಲಿ ಆಭರಣ ಧರಿಸುವುದಿಲ್ಲ - ಎಂಬ ಭರವಸೆ ನೀಡಿದ ನಂತರವೇ ಗಾಂಧೀಜೀ ಆಭರಣ ಸ್ವೀಕರಿಸಿದ್ದು. ಆದರೆ ಆ ಪ್ರಸಂಗ ಆಗಲೀ ಅಥವಾ ಸ್ವಾತಂತ್ರ್ಯ ಆಂದೋಳನವಾಗಲೀ ಗೌರಮ್ಮನ ಕತೆಗಳಲ್ಲಿ ಎಲ್ಲೂ ಬಿಂಬಿತವಾಗಿಲ್ಲ. ಕಾರಣ ಇಷ್ಟೆ. ಅದು ಆಕೆಯ ಅನುಭವವಲಯ ಮೀರಿದ್ದಾಗಿತ್ತು.

ಗೌರಮ್ಮನವರ ಕಥೆಗಳ ಸಾಮಾಜಿಕ ಕಾಳಜಿಗಳು

ಗೌರಮ್ಮನವರು ಕನ್ನಡ ಸಣ್ಣಕತೆಯ ಪ್ರಾರಂಭದ ದಿನಗಳಲ್ಲೇ ಬರೆಯಲಾರಂಭಿಸಿದ್ದರು ಎಂಬುದು ಚಾರಿತ್ರಿಕವಾಗಿ ತುಂಬ ಮಹತ್ವದ ಸಂಗತಿ. ಆಕೆ ಬರೆಯಲು ಪ್ರಾರಂಭಿಸಿದಾಗ ಮಾಸ್ತಿಯವರ ಮೊದಲ ಕಥಾ ಸಂಕಲನ ಪ್ರಕಟವಾಗಿ ಕೇವಲ ಹತ್ತು-ಹನ್ನೆರಡು ವರ್ಷಗಳು ಕಳೆದಿದ್ದವು. ಕಾರಂತರ 'ಚೋಮನದುಡಿ' ಆಗಷ್ಟೇ ಪ್ರಕಟವಾಗಿತ್ತು. ಪ್ರಗತಿಶೀಲ ಚಳುವಳಿ ಇನ್ನು ಪ್ರಾರಂಭವಾಗಿರಲಿಲ್ಲ. ಈಗ ನಾವು ತುಂಬಾ ಮಹತ್ವದ ಲೇಖಕರೆಂದು ಗುರುತಿಸುವ ಅನಂತಮೂರ್ತಿ, ಲಂಕೇಶ್, ತೇಜಸ್ವಿ ಇನ್ನು ಹುಟ್ಟಿರಲೇ ಇಲ್ಲ. ಸುಮಾರು ಅರ್ಧ ಶತಮಾನದ ಹಿಂದೆ ಓರ್ವ ಕತೆಗಾರ್ತಿ ಇಷ್ಟೆಲ್ಲ ಒಳ್ಳೆಯ ಕತೆಗಳನ್ನು ಬರೆದಿದ್ದರೂ ಕನ್ನಡ ವಿಮರ್ಶೆ ಅವರನ್ನು ಗಂಭೀರವಾಗಿ ತೆಗೆದುಕೊಳ್ಳದ್ದು ತುಂಬ ಆಶ್ಚರ್ಯ ಹುಟ್ಟಿಸುತ್ತದೆ. ಈಗ ಹೊಸದಾಗಿ ಬರೆಯಲು ಪ್ರಾರಂಭಿಸಿರುವ ತರುಣಿಯರು ಗೌರಮ್ಮನಿಂದ ಕಲಿಯುವಂಥದ್ದು ಇದೆ ಎನಿಸುತ್ತದೆ.

ಪ್ರೇಮ, ಮದುವೆ, ಗೆಳೆತನಗಳ ಸುತ್ತ ಹೆಣೆದಿರುವ ಕಥೆಗಳಲ್ಲಿ ವ್ಯಕ್ತವಾಗುವ ಲಿಂಗಭೇದ, ಲಿಂಗ ಅಸಮಾನತೆಗಳು ಮಾತ್ರ ತೋರಿಕೆಯ ತೆಳು ಸ್ವರೂಪದಲ್ಲೇ ತೀವ್ರವಾದ ಪರಿಣಾಮಗಳನ್ನು ಉಂಟುಮಾಡುತ್ತವೆ. ಈ 'ಲಿಂಗ ಪ್ರಜ್ಞೆ'ಯೇ ಗೌರಮ್ಮನ ಎಲ್ಲ ಕಥೆಗಳಲ್ಲೂ ಹೆಣ್ತನದ ಎರಕವನ್ನು ಅಚ್ಚು ಮಾಡಿರುವುದು. ಗೌರಮ್ಮ ಖಚಿತವಾದ ನೆಲೆಯಲ್ಲಿ ನಿಂತೇ ಬರೆದಿದ್ದಾರೆ. ಹಾಗೆಂದೇ ಮಿತವಾದ ಹರಹಿನಲ್ಲೂ ಆಕೆ ಅರ್ಥಪೂರ್ಣವಾದದ್ದನ್ನು ಗಾಢವಾಗಿ ಹೇಳಬಲ್ಲರು. ಒಬ್ಬ ಲೇಖಕಿಯ ಅನುಭವ ಪ್ರಪಂಚದಷ್ಟು ವಿಶಾಲವಲ್ಲವೆಂದೂ, ಆದ್ದರಿಂದ ಆಕೆಯ ಬರಹ ಸಾಮಾನ್ಯವಾಗಿ ಸೀಮಿತ ಆಶಯವುಳ್ಳದ್ದೆಂದೂ ಅದು ನೇತಾತ್ಮಕವೋ,

ಸಹಾನುಭೂತಿಯುಳ್ಳದ್ದೋ ಎಂಬ ಪರಿವೆಯೂ ಇಲ್ಲದಂತೆ ಆಗಾಗ ಹೇಳಿಕೆಗಳನ್ನು ಮಾಡಲಾಗುತ್ತದೆ. ಗೌರಮ್ಮನ ಕಥೆಗಳನ್ನು ಓದಿದಾಗ ತಾನು ಕಂಡ ಸಮಾಜವನ್ನು ಸೂಕ್ಷ್ಮವಾಗಿ ಗ್ರಹಿಸುವ ಯಾವುದೇ ಲೇಖಕಿ ತೀವ್ರವಾಗಿ ಬರೆಯಲು ಸಾಧ್ಯ ಎಂಬುದು ಮನದಟ್ಟಾಗುತ್ತದೆ. ಹೀಗಾಗಿ ಹೆಣ್ಣಿನ ವಿಶಿಷ್ಟ ಗ್ರಹಿಕೆಗಳನ್ನು ಗಮನಿಸಿಯೂ ಓರ್ವ ಲೇಖಕಿಯೆಂದೂ, ತುಂಬ ಹಿಂದೆ ಕಥೆಗಳನ್ನು ಬರೆದವರೆಂದೂ ಯಾವ ವಿಮರ್ಶಕರೂ ರಿಯಾಯಿತಿ ತೋರುವ ಭಂಗಿಯನ್ನು ಮರೆಯುವ ಅವಕಾಶ ಇಲ್ಲಿ ಇಲ್ಲ.

ಲಿಂಗ ಅಸಮಾನತೆಯನ್ನು ಶೋಧಿಸುವುದೇ ಗೌರಮ್ಮನ ಬರವಣಿಗೆಯ ಪ್ರಧಾನ ಕಾಳಜಿ. ಅವರ ಅನೇಕ ಕತೆಗಳ ಮುಕ್ತಾಯ ಸಮಸ್ಯೆಗಳ ಸರಳೀಕೃತ ಪರಿಹಾರಗಳೆಂದು ಮೇಲಿನ ನೋಟಕ್ಕೆ ಕಂಡರೂ ಕತೆಗಳು ನಿಯೋಜಿಸುವ ಅರಿವಿನ ಸ್ಫೋಟಕ್ಕೇನೂ ಅಂಥ ಭಂಗ ಬರುವುದಿಲ್ಲ. ಆತ್ಮಹತ್ಯೆಯಾಗಲೀ, ಮತಾಂತರವಾಗಲೀ, ಗೌರಮ್ಮನ ಕಥೆಗಳಲ್ಲಿ ಸಾಮಾಜಿಕ ಸಮಸ್ಯೆಗಳಿಗೆ ಪರಿಹಾರಗಳೆಂಬಂತೆ ಅತ್ಯಂತಿಕವಾದ ತಾತ್ತ್ವಿಕ ಧೋರಣೆಗಳಲ್ಲಿ ಸೂಚಿತವಾಗುವುದಿಲ್ಲವೆಂಬುದು ತುಂಬ ಮುಖ್ಯವಾದ ಅಂಶ. ಇನ್ನೊಂದು ದೃಷ್ಟಿಯಿಂದ ನೋಡುವುದಾದರೆ ಇವುಗಳ ಬಗ್ಗೆ ಗೌರಮ್ಮ ಭಾವುಕರಾಗಿಯೂ ಇಲ್ಲಿ ನಿರ್ದಿಷ್ಟ ಘಟನೆಗಳು ನಿರ್ದಿಷ್ಟ ಅಂತ್ಯವನ್ನು ಕಂಡುಕೊಂಡವು, ಎಂದು ಮೇಲುನೋಟಕ್ಕೆ ಭಾಸವಾಗುವಂಥ ತೀರ ನೇರವಾದ ನಿರೂಪಣಾ ತಂತ್ರವನ್ನು ಗೌರಮ್ಮ ಬಳಸಿದರೂ ಅವರ ಕಥೆಗಳನ್ನು ಒಟ್ಟಾಗಿ ನೋಡಿದಾಗ ಈ ಅಂತ್ಯವನ್ನು ಸಾಮಾಜಿಕ ಸಮಸ್ಯೆಗಳಿಗೆ ಅರ್ಥಪೂರ್ಣ ಪರಿಹಾರಗಳನ್ನು ಶೋಧಿಸುವಲ್ಲಿ ಗೌರಮ್ಮನರ ವೈಯಕ್ತಿಕ ಕನಸುಗಳನ್ನು, ತಲ್ಲಣಗಳನ್ನು ಕೆಲವೊಮ್ಮೆ ಕೇವಲ ಭಾವುಕ ಅಪೇಕ್ಷೆಗಳನ್ನು ಸೂಚಿಸುವುದರಿಂದ ಕುತೂಹಲಕಾರಿಯಾಗಿ ಕಾಣುತ್ತದೆ.

ಪುನರ್ವಿವಾಹ

ಗೌರಮ್ಮನವರ ಮೊದಲ ಕಥೆ 'ಪುನರ್ವಿವಾಹ' ವಿಧವಾ ಸಮಸ್ಯೆಯನ್ನು ಕುರಿತದ್ದು. ಮೂವತ್ತೈದರ ವಿಧುರನೊಬ್ಬ ಹೆಂಡತಿ ಸತ್ತು ಆರು ತಿಂಗಳಾಗುವ ಮೊದಲೇ ನೆರೆಮನೆಯ ಹದಿನೈದರ ನವ ಯುವತಿ ರಾಜಿಯಲ್ಲಿ ಮೋಹಗೊಳ್ಳುತ್ತಾನೆ. ಧನಿಕನಾದ ತಾನು ಆ ನಿರ್ಗತಿಕಳನ್ನು ಮದುವೆಯಾಗಿ ಉದ್ಧರಿಸುವೆನೆಂಬ ವಿಚಾರದ ಬಣ್ಣವನ್ನು ತನ್ನ ನಡತೆಗೆ ಲೇಪಿಸಿಕೊಂಡಿರುತ್ತಾನೆ. ಆದರೆ ಅವಳು ಬಾಲ ವಿಧವೆಯೆಂಬ ಸತ್ಯ ತಿಳಿದಾಗ ವಿಧವೆಯರನ್ನು ನೋಡುವುದೂ ಅಮಂಗಳವೆಂದು ತಿರಸ್ಕರಿಸುತ್ತಾನೆ.

ವಿಧುರನೊಬ್ಬ ಮದುವೆಯಾಗುವುದು ತಪ್ಪಲ್ಲವಾದರೆ, ವಿಧವೆಯ ಮರು ಮದುವೆ ಹೇಗೆ ತಪ್ಪಾದೀತು ? ಎಂದು ಕಥೆಯ ನಾಯಕಿ ರಾಜಿ ಕೇಳುವ ಪ್ರಶ್ನೆಯೇ ಕಥೆಯೂ ಎತ್ತುವ ಪ್ರಶ್ನೆಯಾಗುತ್ತದೆ. ಈ ಕಥೆಯಲ್ಲಿ ಗಂಡಸರ ಇಬ್ಬಂದಿ ನೀತಿಯನ್ನು ನೋಡಬಹುದು. ಮದುವೆಯಾಗಿ ಒಂದು ಮಗುವಿದ್ದು, ಹೆಂಡತಿ ಸತ್ತ ಆರು ತಿಂಗಳಲ್ಲೇ ಇನ್ನೊಂದು ಮದುವೆಯಾಗ ಬಯಸುತ್ತಾನೆ. ತಾಯಿಯ ಒತ್ತಾಯದ ಜೊತೆಗೆ ಅವನಿಗೂ ರಾಜಿ ಎಂಬ ಎಳೆಯ ವಯಸ್ಸಿನ ಹುಡುಗಿಯ ಮೇಲೆ ಮೋಹ ಮೂಡುತ್ತದೆ. ನನಗೆ ಕೇವಲ ಮೂವತ್ತೈದು ವರ್ಷ, ಐಶ್ವರ್ಯ ಇದೆ ಹಾಗಾಗಿ ನನ್ನನ್ನು ಮದುವೆಯಾಗಲು ರಾಜಿ ಪುಣ್ಯ ಮಾಡಿರಬೇಕು ಎಂದು ಯೋಚಿಸುತ್ತಾನೆ. ಹೆಣ್ಣಿನ ಮನಸ್ಸಿನ ಭಾವನೆಗೆ ಬೆಲೆ ಕೊಡದೇ, ತಮಗೆ ತಾವೇ ನಿರ್ಧಾರ ಕೈಗೊಳ್ಳುತ್ತಾರೆ. ದಿನ ನಿತ್ಯ ರಾಜಿಯನ್ನು ಕದ್ದು-ಕದ್ದು ನೋಡಲು ಶುರು ಮಾಡುತ್ತಾನೆ.

ಒಂದು ದಿನ ರಾಜಿಯು ಹೊಳೆಯ ದಡಕ್ಕೆ ಬನ್ನಿ ಎಂದು ಕಾಗದ ಬರೆದಿದ್ದಳು. ಅಪಾರ ಸಂತೋಷಗೊಂಡು ಅಲ್ಲಿಗೆ ಬರುತ್ತಾನೆ. ತಾನೇ ಮಾತಿಗೆ ಪ್ರಾರಂಭಿಸಿ ಕೇಳಿದಾಗ ನನಗೆ

ನಿಮ್ಮನ್ನು ಮದುವೆಯಾಗಲು ಇಷ್ಟವಿಲ್ಲ ಎಂದು ಹೇಳುತ್ತಾಳೆ. ಆಗ ನನ್ನಲ್ಲಿ ಬೇಕಾದಷ್ಟು ಆಸ್ತಿ ಇದೆ, ನನ್ನ ಐಶ್ವರ್ಯಕೆ ಒಡತಿಯಾಗುವೆ, ನಾನು ನಿನ್ನನ್ನು ಪ್ರೀತಿಸುತ್ತೇನೆ ಎಂದು ಹೇಳಲು 'ಈಗ ಪ್ರೀತಿಸುವುದು ನನ್ನನ್ನೇ ? ನಾಳೆ ಪ್ರೀತಿಸುವುದು ಇನ್ನು ಯಾರ ? ಪ್ರೀತಿಸಿ ಮದುವೆಯಾದ ಹೆಂಡತಿ ಸತ್ತ ಆರು ತಿಂಗಳಾಗುವ ಮೊದಲೇ ಎರಡನೆಯ ಮದುವೆಗೆ ಅವಸರ. ಇದೇ ನಿಮ್ಮ ಪ್ರೀತಿಯಲ್ಲವೇ ! ಎಂದು ಕೇಳುತ್ತಾಳೆ. ಕೋಪಗೊಂಡ ಅವನಲ್ಲಿ ಮತ್ತೆ ನಾನು ಬಾಲವಿಧವೆ ನನ್ನನ್ನು ಮದುವೆಯಾಗಿ ಎಂದು ಸತ್ಯ ಹೇಳಿದಾಗ ಅವನಿಗೆ ಸಿಡಿಲು ಬಡಿದಂತಾಗುತ್ತದೆ. ವಿಧವೆಯೊಬ್ಬಳನ್ನು ನಾನು ಮದುವೆಯಾಗುವುದೇ, ಕುಲಕ್ಕೆ ಕಳಂಕ ಬರುತ್ತದೆ, 'ನೀನು ವಿಧವೆ ಎಂದು ತಿಳಿದಿದ್ದರೆ ನಿನ್ನ ಮುಖವನ್ನು ಸಹ ನೋಡುತ್ತಿರಲಿಲ್ಲ. ಯಾವ ವಿಧವೆಯನ್ನು ಪ್ರಾತಃಕಾಲ ನೋಡಿದರೆ ಅಮಂಗಳವೋ ಅಂತಹ ವಿಧವೆಯನ್ನು ಮದುವೆಯಾಗುವವನು ನಾನಲ್ಲ' ಎಂದು ಹೇಳುತ್ತಾನೆ.

ಈ ರಾಜಿಯ ಪಾತ್ರದ ಮೂಲಕ ಗೌರಮ್ಮನವರು ಸಮಾಜದ ನೀತಿ-ನಿಯಮಗಳನ್ನು ಪ್ರಶ್ನಿಸುತ್ತಾರೆ. ವಿಧವೆಯನ್ನು ನೋಡಿದರೆ ಅಮಂಗಳ ಸರಿ, ವಿಧುರನನ್ನು ನೋಡಿದರೆ ? ಹೆಂಡತಿ ಸತ್ತ ಆರು ತಿಂಗಳ ಒಳಗೆ ಇನ್ನೊಂದು ಮದುವೆ ಬಯಸುವುದು ಅದು ಪ್ರೀತಿಯೇ? ಆದರೆ ಹೆಣ್ಣು ಬುದ್ಧಿ ಬರುವ ಮೊದಲೇ ಮದುವೆಯಾದ ಗಂಡ ಸತ್ತರೆ ಇಡೀ ಜೀವನ ಪೂರ್ತಿ ಅಮಂಗಳವಾಗಿಯೇ ಕಳೆಯಬೇಕೆ ? ಎಂದು ಸಮಾಜದ ಕಟ್ಟುಪಾಡುಗಳನ್ನು ಅಲ್ಲಾಡಿಸುತ್ತಾರೆ. ಸಮಾಜದ ಅನ್ಯಾಯಕ್ಕೆ ಒಳಗಾಗಿರುವ ಮಹಿಳೆಯರಿಗಾಗಿ ಜೀವನಪೂರ್ತಿ ದುಡಿಯುತ್ತೇನೆ. ಯಾವ ಪುರಾಣ, ಶಾಸ್ತ್ರಗಳಲ್ಲೂ ವಿಧವೆಯ 'ಪುನರ್ವಿವಾಹ' ತಪ್ಪು ಎಂದು ಹೇಳಿಲ್ಲ. ಹಿಗೂ ಧರ್ಮದ ಅವನತಿಯಾಗುತ್ತಿರುವುದು ನಿಮ್ಮಂತಹ ಅಜ್ಞಾನಿಗಳಿಂದ ಎಂದು ಸಮಾಜದ ಅನ್ಯಾಯವನ್ನು ಖಂಡಿಸುತ್ತಾರೆ.

ಕೊನೆಗೆ ರಾಜಿಯ ಮಾತುಗಳಿಂದ ಪರಿವರ್ತನೆಗೊಂಡ ವಿಧುರನು ಅವಳ ಕಾಲ ಮೇಲೆ ಬಿದ್ದು 'ನಿನ್ನ ಪವಿತ್ರ ಚರಣಗಳ ಆಣೆಯಿಟ್ಟು ಇನ್ನು ಮುಂದಿನ ನನ್ನ ಈ ಅಲ್ಪ ಜೀವನವನ್ನು ವಿಧವೆಯರ ಉದ್ಧಾರಕ್ಕಾಗಿಯೇ ವಿನಿಯೋಗಿಸುತ್ತೇನೆಂದು' ಹೇಳುತ್ತಾನೆ. ಹೀಗೆ ಗೌರಮ್ಮನವರು ಮಹಿಳೆಯ ಮನಸ್ಸಿನ ಭಾವನೆಗಳಿಗೆ ಉನ್ನತವಾದ ಬೆಲೆಯನ್ನು ಕೊಡಿಸುತ್ತಾರೆ. ಕಥಾನಾಯಕಿಯು ಮಂಡಿಸುವ ತರ್ಕಬದ್ಧವಾದ ವಿದಗ್ಧತೆಯಿಂದ ಕೂಡಿದ ಹಾಗೆ ವಾಗ್ವೈಖರಿಯನ್ನು ಗಮನಿಸಿದರೆ ಕೇವಲ ಹದಿನೈದರ ಬಾಲೆಗೆ ಇಂತಹ ವೈಚಾರಿಕ ಪ್ರಬುದ್ಧತೆ ಇರಲು ಸಾಧ್ಯವೇ ಎಂಬ ಸಂಶಯವೇಳುತ್ತದೆ. ಇಲ್ಲಿ ಭಾವಾವೇಶ ತೀವ್ರವಾಗಿದ್ದು, ಅವನು ಕಾಲು ಹಿಡಿದು ಕ್ಷಮೆ ಕೇಳಿದಾಗ, "ಸಾಮಾನ್ಯವಾದ ಒಬ್ಬ ವಿಧವೆಗೆ ಕಾಲಿಗೆ ಬೀಳುವುದು ಭೂಷಣವಲ್ಲ" ಎನ್ನುವುದು, ಇವೆಲ್ಲ ಇದು ಲೇಖಕಿಯ ಮೊದಲ ಕಥೆ ಎಂಬುದನ್ನು ನೆನಪಿಸುವ ದುರ್ಬಲಾಂಶಗಳಾಗಿವೆ.

ಆಗಿನ ಕಾಲಕ್ಕೆ ಗೌರಮ್ಮನವರು ತಮ್ಮ ಕಥೆಯ ನಾಯಕಿಯ ಮೂಲಕ ವಿಧವಾ ಪುನರ್ ವಿವಾಹ ಏಕೆ ತಪ್ಪು ? ಎಂದು ಪ್ರಶ್ನಿಸಿದ್ದು ನಿಜವಾಗಿ ದಿಟ್ಟತನದ ಪ್ರತೀಕವಾಗಿದೆ. ಹೀಗಾಗಿ ಅಸಹಜತೆಯನ್ನು ಮೀರಲಾಗದಿದ್ದರೂ ವೈಚಾರಿಕವಾಗಿ ಕಥೆ ಗಮನ ಸೆಳೆಯುತ್ತದೆ. ಹೀಗೆ ಇವರು ಮಹಿಳೆಯರ ಮನಸ್ಸಿನ ಭಾವನೆಗೆ ಸ್ಪಂದಿಸುತ್ತಾ, ಸಮಾಜದ ಪರಿವರ್ತನೆಯ ಉದ್ದೇಶ ಇಟ್ಟುಕೊಂಡು ಕಥೆಗಳನ್ನು ರಚಿಸಿದ್ದಾರೆ. ಇವರ ಕಥೆಗಳ ಮಹಿಳಾ ಸಂವೇದನೆ ಉತ್ತಮವಾಗಿ ಮೂಡಿಬಂದಿದೆ.

ತಮ್ಮ ಮೊದಲ ಕಥೆಯ ದುರ್ಬಲಾಂಶಗಳ ಅರಿವು ಸ್ವತಃ ಗೌರಮ್ಮನವರಿಗಿತ್ತು. ಆದ್ದರಿಂದ ತಮ್ಮ ಮುಂದಿನ ಕಥೆಗಳಲ್ಲಿ ಈ ಮಿತಿಯನ್ನು ಮೀರಲು ಯತ್ನಿಸಿದ್ದಾರೆ. ಈ ಮಾತಿಗೆ ಅವರ 'ಒಂದು ಪುಟ್ಟ ಚಿತ್ರ' ಹಾಗೂ 'ವಾಣಿಯ ಸಮಸ್ಯೆ' ಉತ್ತಮ ಉದಾಹರಣೆಯಾಗಿವೆ. ಕೇವಲ ತರ್ಕದಿಂದ ವಿರೋಧಿಗಳನ್ನು ತಿದ್ದಲೆತ್ನಿಸುವ ಯತ್ನವನ್ನು

ಬಿಟ್ಟು ಒಂದು ಸಮಸ್ಯೆಯನ್ನು ಅನೇಕ ದೃಷ್ಟಿಕೋನಗಳಿಂದ ವಾಸ್ತವವಾಗಿ ಗ್ರಹಿಸಲು ಅವರು ಯತ್ನಿಸುವುದನ್ನು ಒಂದು ಪುಟ್ಟ ಚಿತ್ರ ಕತೆಯಲ್ಲಿ ಕಾಣಬಹುದು. ಇಲ್ಲಿನ ನಾಯಕಿ ಶಾಂತಿ ಕೂಡ ಒಬ್ಬ ಬಾಲ ವಿಧವೆ, ಆದರೆ ಬಾಲ್ಯದಲ್ಲೇ ತಂದೆ ತಾಯಿಯರನ್ನು ಕಳೆದುಕೊಂಡು ಅಣ್ಣ-ಅತ್ತಿಗೆಯರ ಆಶ್ರಯಕ್ಕೆ ಬಿದ್ದವಳು. ಪ್ರೀತಿಯ ಕೊರತೆಯಿಂದ ತಪಿಸುವ ಆಕೆಗೆ ಅಣ್ಣ ಅತ್ತಿಗೆಯರಿಂದ ದೊರೆಯುವುದು ನಿರ್ಲಕ್ಷ್ಯ, ತಿರಸ್ಕಾರಗಳು ಮಾತ್ರ.

ಹೀಗೆ ಶಾಂತಿಯ ಪರಾವಲಂಬನೆ ಆರ್ಥಿಕವಾದದ್ದು, ಮಾನಸಿಕವಾದದ್ದೂ ಆಗಿದೆ. ಈಕೆ ಮನೆಯೊಳಗೆ ಸಿಗದ ಪ್ರೀತಿಗಾಗಿ ಹೊರಗಡೆ ಅರಸುವ ಹಂತ ತಲುಪಿದಾಗ ಈ ದುರ್ಬಲ ಸ್ಥಿತಿಯ ಲಾಭ ಪಡೆಯುತ್ತಾನೆ. ಅಲ್ಲಿ ಪ್ರವೇಶಿಸಿದ ನಯವಂಚಕ, ಸ್ವಾರ್ಥಿಪಶು ರಘು. ಅವಳು ಗರ್ಭಿಣಿಯಾದಾಗ ಅವಳ ಕೈ ಬಿಟ್ಟು ಓಡುತ್ತಾನೆ. ಅಣ್ಣ-ಅತ್ತಿಗೆಯ ತಿರಸ್ಕಾರದ ಭೀತಿ, ಸಮಾಜದ ಅಪವಾದದ ಭೀತಿ, ತನ್ನ ಅಸಹಾಯಕತೆಯ ಅರಿವು- ಇವೆಲ್ಲದರಿಂದ ಶಾಂತಿಗೆ ಸಮಾಜ ಹೇಗೆ ಗಂಡಿಗೊಂದು ನ್ಯಾಯ- ಹೆಣ್ಣಿಗೊಂದು ನ್ಯಾಯವನ್ನೇ ವಿಧಿಸುತ್ತದೆಂಬ ವಾಸ್ತವದ ಅರಿವಾಗುತ್ತದೆ. ಆದರೆ ಆ ಅರಿವನ್ನೇ ತನ್ನ ಶಕ್ತಿಯಾಗಿ ಮಾಡಿಕೊಂಡು, ಛಲದಿಂದ ಎದುರಿಸಲು ಬೇಕಾದ ಮಾನಸಿಕ ಸಿದ್ಧತೆ ಇಲ್ಲದೆ ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ. ಶಾಂತಿಯ ಈ ಆಯ್ಕೆ ಆ ಸಮಸ್ಯೆಗೆ ಹತಾಶ ಮನಸ್ಸು ಕಂಡುಕೊಂಡ ಪರಿಹಾರ ಮಾತ್ರ.

ಮನೆ ಬಿಟ್ಟು ಹೋಗುವ ಮೊದಲು ಶಾಂತಿ ಬರೆದಿಟ್ಟ ಪತ್ರ ಸಿಕ್ಕಿದಾಗ ಅವಳ ಅಣ್ಣ ತನ್ನ ತಪ್ಪನ್ನು ಗ್ರಹಿಸಿ, ಪಶ್ಚಾತ್ತಾಪ ಪಡುವುದಷ್ಟೇ ಅಲ್ಲ, ಏನಾದರೂ ಮಾಡಿ ಅವಳನ್ನು ಹುಡುಕಿ ಹಿಂದಕ್ಕೆ ಕರೆತಂದು, ಅವಳ ಬಾಳನ್ನು ಸರಿಪಡಿಸಬೇಕೆಂದು ಪ್ರಯತ್ನಿಸುತ್ತಾನೆ. ಆದರೆ ಈ ನಿರ್ಧಾರ, ಈ ಕಾರ್ಯಶೀಲತೆಗಳಲ್ಲಿ ತಡವಾಗಿದ್ದರಿಂದ ಅವಳ ಸಾವನ್ನು ತಪ್ಪಿಸಲಾಗುವುದಿಲ್ಲ.

ಕಥೆಯ ಕೊನೆಯಲ್ಲಿ ರೈಲಿನಡಿ ನುಚ್ಚಾದ ಶಾಂತಿಯ ಶವ ಈ ಇಡೀ ಸಮಸ್ಯೆಯ ಭೀಕರತೆಯನ್ನು ಸೂಚಿಸುವಂತೆ ದೊಡ್ಡ ಪ್ರಶ್ನೆಯಾಗಿಯೇ ಉಳಿಯುತ್ತದೆ.

ಶಾಂತಿ, ರಘುನಾಥ ಮತ್ತು ರಾಜ ಇವರುಗಳ ನಡುವಿನ ಪತ್ರವ್ಯವಹಾರದ ರೂಪದಲ್ಲಿ ಕಥೆ ಬಿಚ್ಚಿಕೊಳ್ಳುವಂತೆ ಮಾಡಿ ಲೇಖಕಿ ನೇರ ನಿರೂಪಣೆಯ ಭಾವುಕತೆಯ ಅಪಾಯದಿಂದ ಪಾರಾಗುತ್ತಾರೆ. ಅಷ್ಟೇ ಅಲ್ಲ, ಸಮಸ್ಯೆಯ ಹಲವು ಮಗ್ಗಲುಗಳನ್ನು ಪರಿಶೀಲಿಸುತ್ತಾ, ಸರಳ ಪರಿಹಾರಕ್ಕೆ ಯತ್ನಿಸದೆ ಆ ಸಮಸ್ಯೆಯ ಸಂಕೀರ್ಣತೆಯನ್ನು ಓದುಗರಿಗೆ ಪರಿಚಯಿಸುತ್ತಾರೆ.

ಕಥೆಯಲ್ಲಿ ತಪ್ಪು 'ನಾಯಕ-ನಾಯಕಿಯರದಾದರೂ ಶಿಕ್ಷೆ ಅನುಭವಿಸುವುದು ನಾಯಕಿ ಮಾತ್ರ'. ಸಮಾಜದ ನಿಂದೆಗೆ ಗುರಿಯಾಗಿ ಚಿತ್ರಹಿಂಸೆ ಅನುಭವಿಸಿ ಕೊನೆಗೆ ಆತ್ಮಹತ್ಯೆಯ ದಾರಿ ಹಿಡಿಯುತ್ತಾರೆ. ಗಂಡಸಾದುದರಿಂದ ಅವರಿಗೆ ಶಿಕ್ಷೆ ಇಲ್ಲ, ಅವಮಾನ ಅಬಲೆಯರ ಮೇಲೆಯೇ ಎಂದು ಲೇಖಕಿ ಗೌರಮ್ಮ ಕಿಡಿಕಾರಿದ್ದಾರೆ.

ವಾಣಿಯ ಸಮಸ್ಯೆ:

ಗೌರಮ್ಮನವರ 'ವಾಣಿಯ ಸಮಸ್ಯೆ'ಯಲ್ಲಿ ಎದ್ದುಕಾಣುವ ಆಧುನಿಕತೆಯಿದೆ. ದ.ಬಾ. ಕುಲಕರ್ಣಿಯವರು ತಿಳಿಸಿದಂತೆ ಗೌರಮ್ಮನವರಿಗೆ ಪಾಶ್ಚಾತ್ಯ ಸಾಹಿತ್ಯದಲ್ಲಿ ರುಚಿಯಿದ್ದಿತು ಹಾಗೂ ಜಗತ್ತಿನ ಶ್ರೇಷ್ಠ ಕತೆಗಳ ಪರಿಚಯವಿದ್ದಿತು. ಅವರು ತಮ್ಮ ಕತೆಗಾಗಿ ಬಳಸಿದ ತಂತ್ರ ಹೊಸತು. ಆಧುನಿಕತೆಯ ಮುಖ್ಯ ಲಕ್ಷಣಗಳಲ್ಲೊಂದಾದ ಅಂತರ್ಮುಖತೆ ಈ ಕತೆಯ ಜೀವಾಳವಾಗಿದೆ. 'ಮಾನಸ ವ್ಯಾಪಾರಗಳ ಹೇಳಿಕೆ' ಗೌರಮ್ಮನವರ ವೈಶಿಷ್ಟ್ಯವೆಂದು ವಿವರಿಸಿದ ಬೇಂದ್ರೆಯವರು ಈ ಅಂಶವನ್ನು ಸಮರ್ಪಕವಾಗಿ ಗುರುತಿಸಿದರು. 'ವಾಣಿಯ ಸಮಸ್ಯೆ' ಎಂಬ ಹೆಸರಿದ್ದರೂ ಈ ಕತೆಯ ಕೇಂದ್ರ ಬಿಂದು ಇಂದು. ಅವಳ ಏಕಾಕಿತನ, ಸ್ವಾತಂತ್ರ್ಯ ಪ್ರೀತಿ,

ವಾಣಿಯೊಡನೆ ಅವಳು ಬೆಳೆಯುವ ಸೌಹಾರ್ದದ ಸಂಬಂಧ, ರತ್ನನ ಸಂಪರ್ಕದಲ್ಲಿ ಅವಳಲ್ಲಿ ಹುಟ್ಟಿಕೊಂಡ ಹೊಸ ಬಯಕೆಗಳು, ಈ ಬಯಕೆಗಳಿಂದ ಎದ್ದೇಳುವ ನೈತಿಕ ಸಮಸ್ಯೆ, ಈ ಸಮಸ್ಯೆಗೆ ಅವಳು ಕೊನೆಗೆ ಕಂಡುಕೊಳ್ಳುವ ಪರಿಹಾರ-ಇವೆಲ್ಲ ಅತ್ಯಂತ ಸಹಜವಾಗಿ ಕತೆಯಲ್ಲಿ ಮೂಡಿಬಂದಿವೆ.

ಕತೆಯ ಭಾವನಾ ಪ್ರಪಂಚವೂ ತೀರ ಸ್ವಾಭಾವಿಕವೆಂದು ನಮ್ಮ ಅನುಭವಕ್ಕೆ ಬರುತ್ತದೆ. ಕತೆಯಲ್ಲಿ ಎಲ್ಲಿಯೂ ಅಪಸ್ವರಗಳಿಲ್ಲ. ಗೌರಮ್ಮನವರ ಕತೆಗಳಲ್ಲಂತೂ ಈ ಕತೆ ಅತ್ಯಂತ ಪಕ್ವವಾದುದು. ಇಂದು ವಿಧವೆಯಾದರೂ ಅಸಹಾಯಕಳಲ್ಲ. ಗಂಡನಿಲ್ಲದಿದ್ದರೂ ಮನೆಯ ಆಶ್ರಯ ಅವಳಿಗಿದೆ. ಹೀಗಾಗಿ ಅವಳು ಏಕಾಂಗಿಯಾದರೂ ಸ್ವತಂತ್ರ ಜೀವನವನ್ನೇ ಆಯ್ದುಕೊಳ್ಳುತ್ತಾಳೆ. ಸ್ನೇಹ ಜೀವಿಯಾದರೂ ಮಾನವೀಯ ಸಂಬಂಧಗಳಿಂದ ದೂರ ಉಳಿಯುತ್ತಾಳೆ. ಅವಳ ಮನೆ ಮತ್ತು ನೆರೆಮನೆಗಳ ನಡುವಿರುವ ಸಂಬಂಧ ಅವಳಿಗೆ ಅಮುಖ್ಯವಾಗುತ್ತದೆ. ಆದರೆ ವಾಣಿ ಹಾಗೂ ರತ್ನರ ಸಂಪರ್ಕದಿಂದಾಗಿ ಅವಳ ಜೀವನ ಸಮಸ್ಯಾತ್ಮಕವಾಗುತ್ತದೆ. ಅವಳು ತಾನು ಬೇಕೆಂದೇ ಬಿಟ್ಟುಬಂದ ಬಳಗಕ್ಕೆಂದು ಮರಳುವುದು ಅವಳ ಸೋಲೆನಿಸಿದರೂ ಅದು ಪಲಾಯನವಲ್ಲ, ನೈತಿಕ ಕ್ರಿಯೆ ಬೇರೆ, ಸಾಂಸ್ಕೃತಿಕ ಸಂದರ್ಭದಲ್ಲಿ ಬಹುಶಃ ಅವಳಿಗೆ ಆಯ್ಕೆ ಇರುತ್ತಿದ್ದವೇನೋ. ಆದರೆ ಅವಳು ಬದುಕಿದ್ದ ಸಮಾಜದಲ್ಲಿ ಅವಳು ಕೈಗೊಂಡ ನಿರ್ಣಯವೇ ಸಾಧುವಾಗಿತ್ತು.

ವಾಣಿಯ ಸಮಸ್ಯೆ ಓದುಗರ ಸಮಸ್ಯೆಯಾಗುವುದಿಲ್ಲ ಎನ್ನುವುದರಲ್ಲಿ ಈ ಕತೆಯ ಯಶಸ್ಸಿದೆ. ಇಂದುವಿನಲ್ಲಿ ಸೌಂದರ್ಯವಿದೆ, ಅಚ್ಚುಕಟ್ಟುತನವಿದೆ, ಪ್ರೀತಿಸುವ ಶಕ್ತಿಯಿದೆ, ತನ್ನದಲ್ಲದ ಸಂಸಾರವನ್ನು ಓರಣಗೊಳಿಸುವ ಸಾಮರ್ಥ್ಯವಿದೆ, ಆಳವಾದ ಭಾವನೆಗಳಿವೆ.

ಆದರೆ ಶ್ರೀಮಂತಿಕೆಯಿದ್ದೂ ಅವಳು ವಿಧವೆ ಎಂಬ ಒಂದೇ ಕಾರಣಕ್ಕಾಗಿ ಅವಳಿಗೆ ಸುಖದ ಬಾಗಿಲು ಮುಚ್ಚಿಕೊಳ್ಳುತ್ತದೆ. ಬಹುಶಃ ಅವಳು ಸ್ವಾರ್ಥಿಯಾಗಿದ್ದರೆ ಸುಖವೂ ಕೂಡ ಅವಳಿಗೆ ದೊರೆಯಬಹುದಿತ್ತು. ಆದರೆ ಅವಳು ಈ ಮಾರ್ಗವನ್ನು ಆಯ್ದುಕೊಳ್ಳುವುದಿಲ್ಲ. ಈ ನೈತಿಕ ಶಕ್ತಿಯು ಅವಳ ವ್ಯಕ್ತಿತ್ವಕ್ಕೆ ಗಟ್ಟಿತನವನ್ನು ಒದಗಿಸುತ್ತದೆ.

ಬಾಲ್ಯದಲ್ಲಿ ಗಂಡನನ್ನು ಕಳೆದುಕೊಂಡು ವಿಧವೆಯಾದ ಕಥಾನಾಯಕಿ ಬಂಧು, ಬಳಗ ನೆಂಟರಿಂದ ದೂರವಾಗಿ ಬೇಸರಿಸಿ ಬದುಕಿನಲ್ಲಿ ಆತ್ಮೀಯ ಸ್ನೇಹಕ್ಕಾಗಿ ಹಂಬಲಿಸುತ್ತಾಳೆ. ಪಕ್ಕದ ಮನೆಯ ಗೆಳತಿಯ ಗಂಡನೊಂದಿಗೆ ಸ್ನೇಹ ಆತ್ಮೀಯತೆಯ ಕಡೆಗೆ ತಿರುಗುವಲ್ಲಿ ಅವಳ ಮನಸ್ಸಿನಲ್ಲಿ ಉಂಟಾದ ತುಮುಲ, ತಳಮಳಗಳು ಅವಳನ್ನು ಘರ್ಷಣೆಗೆ ಈಡು ಮಾಡುತ್ತಾಳೆ. ಈ ಮಾನಸಿಕ ಸಂಘರ್ಷದಿಂದ ಹೊರಬರಲು ದಾರಿಯನ್ನು ಕಂಡುಕೊಳ್ಳುವುದೇ ಈ ಕಥೆಯ ಮೂಲವಸ್ತು.

ಇಂದು ಬಾಲ್ಯದಲ್ಲಿ ತಂದೆ-ತಾಯಿಯನ್ನು ಕಳೆದುಕೊಂಡ ಬೇರೆಯವರ ಮನೆಯಲ್ಲಿ ಬೆಳೆದವಳು. ಮದುವೆಯಾದ ಆರು ತಿಂಗಳಲ್ಲಿ ತನ್ನ ಗಂಡನನ್ನು ಕಳೆದುಕೊಂಡು ಒಂಟಿಯಾಗಿ ಜೀವನ ನಡೆಸುತ್ತಿರುತ್ತಾಳೆ. ತನ್ನ ನೆರೆಮನೆಗೆ ವಾಣಿ ಮತ್ತು ರತ್ನ ಎಂಬ ದಂಪತಿಗಳು ಬರುತ್ತಾರೆ. ಇಂದುಗೆ ವಾಣಿಯ ಪರಿಚಯ ಸ್ನೇಹವಾಗಿ ಪರಿಣಮಿಸುತ್ತದೆ. ಇಂದು ಎಲ್ಲದರಲ್ಲೂ ವಾಣಿಗಿಂತ ಭಿನ್ನವಾಗಿರುತ್ತಾಳೆ. ಎಲ್ಲ ಕೆಲಸದಲ್ಲಿಯೂ ವಾಣಿಗೆ ನೆರವಾಗಿ ಅವಳ ಮನೆಯನ್ನು ಸುಂದರವಾಗಿ ಇಡುವುದರ ಮೂಲಕ ರತ್ನನ ಮನಸ್ಸನ್ನು ಸೆಳೆಯುತ್ತಾಳೆ.

ಜೀವನದಲ್ಲಿ ಎಲ್ಲ ಬಂಧನಗಳಿಂದ ದೂರವಾಗಿದ್ದ ಇಂದು ಆಕರ್ಷಣೆಗೆ ಒಳಗಾಗುತ್ತಾಳೆ. ಸಮಾಜ ಹೇರಲ್ಪಟ್ಟಿದ್ದ ನೀತಿ-ನಿಯಮಗಳನ್ನು ಮೀರುವ ಧೈರ್ಯವಿಲ್ಲದೆ ತನ್ನ ಆಸೆಗಳನ್ನು

[illegible]

[illegible]

[illegible]

[illegible]

[illegible]

ಮುಚ್ಚಿಡಲು ಬಯಸುತ್ತಾಳೆ. ರತ್ನನ ಮನಸ್ಸು ಇವಳನ್ನು ನೋಡುವ, ಮಾತನಾಡಿಸುವ ತವಕದಲ್ಲಿರುತ್ತದೆ. ಇಂದು ಕೂಡ ವಾಣಿಗೆ ಸಿಕ್ಕಿರುವ ಸಂಸಾರದ ಸುಖವನ್ನು ಕಂಡು ಅಸೂಯೆ ಮೂಡುತ್ತದೆ. ಮರುಕ್ಷಣದಲ್ಲಿ ಈ ರೀತಿ ಸಂತೋಷ ಪಡುವುದು ತಪ್ಪು ಎಂದು, ಎಂದೂ ಆ ತರದ ಭಾವನೆಗಳಿಗೆ ಎಡೆ ಕೊಡಿದಿದ್ದ ಇಂದುವಿನ ಮನವು ಎಚ್ಚರಿಸಿದಾಗ ಅವಳಿಗೆ ತನ್ನ ನೀಚ ಭಾವನೆಗಳಿಗೆ ನಾಚಿಕೆಯಾಯಿತು.

ರತ್ನನಿಗೆ ನನ್ನ ವಾಣಿಯೂ ಇಂದುವಿನ ರೀತಿ ಕಾರ್ಯಕುಶಲೆಯಾಗಿದ್ದರೆ ಎಂದೆಂದುಕೊಳ್ಳುವ ಬದಲು, ತಾನೆಂದೂ ನೋಡದ ಇಂದುವಿನ ರೂಪವನ್ನು ಕಲ್ಪಿಸತೊಡಗಿದ. ಪ್ರತ್ಯಕ್ಷವಾಗಿ ನೋಡಿರದಿದ್ದರೂ ಅವಳ ಕೆಲಸಗಳನ್ನು ನೋಡಿ ಅವಳ ಚಿತ್ರವನ್ನು ಕಲ್ಪಿಸಿಕೊಂಡಿದ್ದನು. ಅವನ ಆ ಕಾಲ್ಪನಿಕ ಇಂದುವು ಆದರ್ಶ ಸ್ತ್ರೀಯಾಗಿದ್ದಳು. ಇತರರ ಅಸಾಧ್ಯ ರೋಗಗಳನ್ನು ತನ್ನ ಔಷಧಿಗಳ ಬಲದಿಂದ ವಾಸಿಮಾಡುತ್ತಿದ್ದ ರತ್ನನಿಗೆ ಕೊನೆಕೊನೆಗೆ ಇಂದುವನ್ನು ಚಿತ್ರಿಸುವ ರೋಗದಿಂದ ಪಾರಾಗಲು ಅಸಾಧ್ಯವಾಗಿ ತೋರಿತು.

ಕೊನೆಗೊಮ್ಮೆ ವಾಣಿ ತವರಿಗೆ ಹೋದಾಗ ಇಂದು-ರತ್ನರಿಗೆ ತಮ್ಮೊಳಗೆ ಬೆಳೆದ ಪ್ರೀತಿಯ ತೀವ್ರತೆ ಸಾಕ್ಷಾತ್ಕಾರವಾಗುತ್ತದೆ. ಈ ಅರಿವಿನಿಂದ, ಸಂಪ್ರದಾಯಕ್ಕೆ ಅಂಟಿದ ಇಂದುವಿನ ಮನದಲ್ಲಿ ಉಂಟಾದ ತೀವ್ರ ಒಳತೋಟಿ, ಬಹು ಸಂಯಮದಿಂದ ಮನೋಜ್ಞವಾಗಿ ಕತೆಯಲ್ಲಿ ಸೆರೆಹಿಡಿಯಲ್ಪಟ್ಟಿದೆ. ಶಾಂತ, ಸ್ನಿಗ್ಧ ಬದುಕಿನಲ್ಲಿ ತೀವ್ರ ಕೊರತೆಯ ಅರಿವುಂಟಾಗಿ ಅವಳ ಸುಖ-ಸಂತೋಷಗಳು ಮಾಯವಾಗುತ್ತವೆ. ಈ ಕೊರತೆಯ ಅರಿವು ಹಾಗೂ ರತ್ನನ ಕಡೆಗೆ ಉತ್ಕಟವಾಗಿ ಹರಿಯುವ ಮನವನ್ನು ನಿಗ್ರಹಿಸಲಾಗದೆ ತನ್ನ ಅಶಕ್ತತೆಯ ಅರಿವು ಇವುಗಳು ಇಂದುವನ್ನು ಪಲಾಯನಕ್ಕೆಳೆಸುವಂತೆ ಪ್ರೇರೇಪಿಸುತ್ತದೆ.

ಯಾವ ನೆಂಟರ ಆಶ್ರಯ ಬಯಸದೆ ಸ್ವತಂತ್ರ್ಯವಾಗಿ ಬದುಕ ಬಯಸಿದ್ದಳೋ ಅದೇ ಬಂಧುಗಳ ಆಶ್ರಯಕ್ಕೆ ಹಿಂದಿರುಗುವ ಮೂಲಕ ಆಕೆ ತನ್ನ ಸಮಸ್ಯೆಗೆ ಸಾಂಪ್ರದಾಯಿಕ ನೈತಿಕ ದೃಷ್ಟಿಯಿಂದ ಪರಿಹಾರ ಕಂಡುಕೊಳ್ಳುತ್ತಾಳೆ. ಆದರೆ ಯಾವುದರ ಬೆಲೆಯನ್ನೂ ಅರಿಯದ ವಾಣಿಗೆ ಎಲ್ಲವನ್ನೂ ಕೊಟ್ಟ ದೇವರು ತನ್ನ ಜೀವನವನ್ನೇಕೆ ಅಂಧಕಾರಮಯವನ್ನಾಗಿ ಮಾಡಿದ ಎಂಬುದು ಇಂದುವಿಗೆ ಎಲ್ಲಕ್ಕಿಂತ ದೊಡ್ಡ ಪ್ರಶ್ನೆಯಾಗಿ ಕಾಡಿದುದಾಗಲಿ ತನ್ನ ಶಾಂತ ಜೀವನ ಪ್ರವಾಹವನ್ನು ಕಲಕಿ ಕದಡಿಸುವ ಯೋಚನೆಗಳಿಗೆ ಪರಿಹಾರವೇನೆಂಬ ಅವಳ ಅಸಹಾಯಕತೆಯಾಗಲಿ ಕಥೆಯೊಳಗೆ ಕಾಣುವುದಿಲ್ಲ. ಬದಲಾಗಿ ಅವು ಇಂದುವಿನ ನೆಲೆಯಿಂದ ಹೊರಟು ಓದುಗರ ಮನದಲ್ಲಿ ಕಾಡತೊಡಗುತ್ತದೆ. ಹೀಗೆ ಮೇಲು ನೋಟಕ್ಕೆ ಸಾಂಪ್ರದಾಯಿಕ ಪರಿಹಾರಕ್ಕೆ ಗೌರಮ್ಮನವರ ನಾಯಕಿಯರು ಎಳಸುತ್ತಾರೆ.

ಆದರೆ ಲೇಖಕಿಯ ಧೋರಣೆ ಅದೆಂದಾಗಲೀ ಕಥೆ ಅಂಥ ಪರಿಹಾರವನ್ನು ಸೂಚಿಸುತ್ತದೆಯೆಂದಾಗಲೀ ಭಾವಿಸಲು ಆಸ್ಪದವಿಲ್ಲ. ಕಲೆಯ ಅಂದಗೆಡದಂತೆ ಒಳಧ್ವನಿಯ ಮೂಲಕ ವಿಚಾರ ಅಂತಃಕರಣಗಳನ್ನು ಮುಟ್ಟಲೆತ್ನಿಸುವ ಈ ಸಾಧನೆ ನಿಜಕ್ಕೂ ಕಡಿಮೆಯದಲ್ಲ, ಸಾಮಾಜಿಕ ಸಮಸ್ಯೆಗಳಷ್ಟೇ ಅಲ್ಲದೆ, ಮಾನವ ಹೃದಯದ ಭಾವನಾ ಲೋಕ ಕೂಡ ಗೌರಮ್ಮನವರ ಕಥೆಗಳಿಗೆ ಆಯಾಮ ಒದಗಿಸುತ್ತದೆ. ಹೆಣ್ಣು ಮಕ್ಕಳ (ವಿಧವೆಯರ) ಅಂತರಂಗದ ತುಮುಲ ಭಾವನೆಗಳನ್ನು ಸೆರೆ ಹಿಡಿಯುವಲ್ಲಿ ಇವರು ಗೆಲ್ಲುತ್ತಾರೆ.

'ವಾಣಿಯ ಸಮಸ್ಯೆ'ಯ ಕಥೆಯ ಮೂಲಕ ಬೇರೊಬ್ಬಳ ಗಂಡನ ಜೊತೆ ಅನೈತಿಕ ಸಂಬಂಧ ಬೆಳೆಸಿ ಆ ಮೂಲಕ ಒಂದು ಕುಟುಂಬದ ನೆಮ್ಮದಿ ಕದಡುವ ಬದುಕು ಮಾತ್ರವೇ ವಿಧವೆಯರಿಗಿರುವುದು? ಎಂಬ ಪ್ರಶ್ನೆಯನ್ನು ಗೌರಮ್ಮ ಈ ಕಥೆ ಮೂಲಕ ಹೇಳುತ್ತಾರೆ. ವಿಧವೆಯರ ಮನಸ್ಸಿನ ಸಂಘರ್ಷವನ್ನು ಎಳೆ ಎಳೆಯಾಗಿ ಬಿಚ್ಚಿಟ್ಟಿದ್ದಾರೆ. ಹೀಗೆ ಕಥೆಯಲ್ಲಿ

[illegible]

[illegible]

[illegible]

ಬರುವ 'ಇಂದು' ಮನೆಯನ್ನು ಬಿಟ್ಟು ಹೋಗಿದ್ದು ಏಕೆ? ಎನ್ನುವ ಪ್ರಶ್ನೆ ವಾಣಿಗೆ ಸಮಸ್ಯೆಯಾಗಿಯೇ ಉಳಿದುಬಿಡುತ್ತದೆ.

ಸಾಮಾಜಿಕ ಕಳಕಳಿಯನ್ನು ಹೊಂದಿರುವ ಗೌರಮ್ಮ 'ವಿಧವಾ ವಿವಾಹ', ವರದಕ್ಷಿಣೆಯ ಸಮಸ್ಯೆಗಳಂತಹದ್ದನ್ನು ಬಹಳ ನೈಜವಾಗಿ ಚಿತ್ರಿಸುತ್ತಾರೆ. ಹೀಗೆ ವಾಣಿಯ ಸಮಸ್ಯೆ ಆಧುನಿಕ ಯುಗದಲ್ಲಿ ಅತ್ಯಂತ ಯಶಸ್ವಿ ಕಥೆಯಾಗಿದೆ.

ವಿಧವಾ ಸಮಸ್ಯೆಯಂತೆ, ಗೌರಮ್ಮನವರ ಕಥೆಗಳಲ್ಲಿ ಮತ್ತೆ ಮತ್ತೆ ಕಾಣಸಿಗುವ ಇನ್ನೊಂದು ವಸ್ತು, ವರದಕ್ಷಿಣೆಯ ಸಮಸ್ಯೆ. ಆಹುತಿ, ನನ್ನ ಮದುವೆ, ಯಾರು ? ಈ ಮೂರು ಕಥೆಗಳಲ್ಲೂ ಸುಶಿಕ್ಷಿತರಾದ ತರುಣರು ವಿಲಾಯಿತಿ ಶಿಕ್ಷಣದ ಮಹತ್ವಾಕಾಂಕ್ಷೆ ಬೆಳೆಸಿಕೊಳ್ಳುವುದು, ಅದನ್ನು ಈಡೇರಿಸಿಕೊಳ್ಳಲು ವರದಕ್ಷಿಣೆ ಪಡೆದು ಮದುವೆಯಾಗುವುದು, ಇವರ ಈ ದುರಾಸೆಗೆ ಬಲಿಯಾಗಿ ಹಲವು ಹೆಣ್ಣುಗಳ ಬದುಕು ದುರಂತವಾಗುವುದು, ಮತ್ತೆ ಮತ್ತೆ ಕಂಡುಬರುತ್ತವೆ. ಸ್ತ್ರೀ ಪುರುಷರ ನಡುವೆ ಸಾಮರಸ್ಯದ ಅಗತ್ಯವನ್ನು ಗುರುತಿಸಬಯಸುವ ಸಮಾಜ, ವಿದೇಶಿ ಶಿಕ್ಷಣದ ವ್ಯಾಮೋಹಕ್ಕಾಗಿ ನಡೆಯುವ ಒಂದು ವ್ಯಾಪರದಂತೆ ಮದುವೆಯನ್ನು ಪರಿಗಣಿಸುವುದರ ವಿಕೃತ ಫಲವೇ ಈ ಕಥೆಗಳ ವಸ್ತು. ಈ ಯಾವುದೇ ಕಥೆಯಲ್ಲಾಗಲಿ ಆವೇಶಕ್ಕೆ ಆಸ್ಪದವಿಲ್ಲದಂತೆ, ಏಕಪಕ್ಷೀಯವಾಗದಂತೆ ಪರ-ವಿರುದ್ಧ ದೃಷ್ಟಿಕೋನಗಳುಳ್ಳ ವ್ಯಕ್ತಿಗಳ, ಮನಸ್ಸುಗಳ ಮೂಲಕ ಗೌರಮ್ಮ ಸಮಸ್ಯೆಯನ್ನು ವಿವೇಚಿಸಿದ್ದಾರೆ.

"**ಆಹುತಿ**" ಗೌರಮ್ಮನವರ ತುಂಬ ಜನಪ್ರಿಯ ಕಥೆಯಾಗಿದ್ದರೂ ಅದೇ ಅವರ ಅತ್ಯುತ್ತಮ ಕಥೆಯಲ್ಲ. ಈ ಕಥೆ ಸ್ವಲ್ಪ ಭಾವುಕವೆಂದು ಕೆಲವರಿಗೆ ಅನ್ನಿಸಬಹುದು. ಆದರೆ ನಮ್ಮ ಸಮಾಜದಲ್ಲಿ ಅಷ್ಟೇನೂ ಅಪರಿಚಿತವಲ್ಲದ ಒಂದು ಘಟನೆಯನ್ನು ತಮ್ಮ ವಿಶಿಷ್ಟ

ಶೈಲಿಯಲ್ಲಿ ಗೌರಮ್ಮ ಮಂಡಿಸಿರುವ ರೀತಿ ಖಂಡಿತವಾಗಿಯೂ ಒಂದು ಮನಸ್ಸನ್ನು ಚುಚ್ಚುವಂಥದ್ದು. ಗೌರಮ್ಮನ ಇತರ ಕಥೆಗಳ ಜಗತ್ತು ಕೂಡ ಅಷ್ಟೇನೂ ವಿಶಾಲವಾಗಿಲ್ಲ. ಪ್ರೇಮ, ಮದುವೆ, ಗೆಳೆತನಗಳ ಸುತ್ತ ಹೆಣೆದಿವೆ. ಆಹುತಿ ವರದಕ್ಷಿಣೆ ಸಮಸ್ಯೆ ಕುರಿತಂತೆ ಕನ್ನಡದಲ್ಲಿ ಬಂದ ಆರಂಭದ ಕಥೆಗಳಲ್ಲಿ ಒಂದು. ಅಥವಾ ಅದೇ ಮೊಟ್ಟಮೊದಲ ಕಥೆ ಆಗಿದ್ದರೂ ಆಗಿದ್ದಿರಬಹುದು. ಗೌರಮ್ಮ ಬರವಣಿಗೆಗೆ ತೊಡಗಿದಾಗ ವರದಕ್ಷಿಣೆ ಸಮಸ್ಯೆ ಮಾತ್ರ ಇತ್ತು. ಆದರೆ ಕೇಳಿದಷ್ಟು ವರದಕ್ಷಿಣೆ ತಾರದೇ ಹೋದ ಕಾರಣ ಹೆಣ್ಣು ಮಕ್ಕಳನ್ನು ಸುಡುವ ಭೀಕರ ಮತ್ತು ಅಮಾನುಷ ಪರಿಸ್ಥಿತಿ ಆಗಿನ್ನೂ ಕಾಣಿಸಿಕೊಂಡಿರಲಿಲ್ಲ. ಆದರೆ ಅದರ ಬೀಜರೂಪವನ್ನು ಆಹುತಿ ಕಥೆಯಲ್ಲಿ ಕಾಣಬಹುದು.

'ಆಹುತಿ' ಒಂದು ಸಾಮಾಜಿಕ ಕಳಕಳಿಯುಳ್ಳ ಕಥೆಯಾಗಿದೆ. ವರದಕ್ಷಿಣೆಯನ್ನು ಹೆಚ್ಚು ಪಡೆದು ಇಂಗ್ಲೆಂಡಿಗೆ ಹೋಗಿ ಬ್ಯಾರಿಸ್ಟರನಾಗಬೇಕೆಂದು ಬಲವಾದ ಆಸೆ ಹೊಂದಿದ ಯುವಕ ತಂದೆ ನೋಡಿದ ಬಡ ಹುಡುಗಿಯನ್ನು ತಿರಸ್ಕರಿಸಿ ಮದ್ರಾಸಿಗೆ ತೆರಳುತ್ತಾನೆ. ತಂಗಿಯು ಅವಳು ಒಳ್ಳೆ ಹುಡುಗಿ, ಓದು ಬರಹ ಗೊತ್ತಿದೆ, ನೋಡುವುದಕ್ಕೆ ಚೆಂದ ಇದ್ದಾಳೆ, ನಿನಗೆ ಯೋಗ್ಯಳಾಗಿದ್ದಾಳೆ ಎಂದು ಹೇಳಿದಾಗ ಅವರು ವರದಕ್ಷಿಣೆ ಎಷ್ಟು ಕೊಡುತ್ತಾರೆ ? ಎಂದು ಪ್ರಶ್ನಿಸುತ್ತಾನೆ.

ತಂದೆಯ ಮಾತಿಗೂ ವಿರೋಧ ಹೇಳಿ ಮದ್ರಾಸಿಗೆ ಬಂದು ಕೆಲಸ ಹುಡುಕಲು ಶುರುಮಾಡಿ ಜೊತೆಗೆ ಶ್ರೀಮಂತರ ಹುಡುಗಿಯನ್ನು ನೋಡಲು ಶುರುಮಾಡುತ್ತಾನೆ. ಯಾವ ಉತ್ತಮ ಕೆಲಸವೂ ಸಿಗದೇ, ಇಬ್ಬರೂ ಹೆಣ್ಣು ಮಕ್ಕಳಿಗೆ ಪಾಠ ಹೇಳಿಕೊಡುವ ಕೆಲಸ ಸಿಗುತ್ತದೆ. ಶಾಂತಿ ಮತ್ತು ಸೀತೆ ಎಂಬ ಹುಡುಗಿಯರಿಗೆ ಪಾಠ ಹೇಳುತ್ತಾ ಶಾಂತಿ ಎಂಬ ಯುವತಿ ಯುವಕನ ಮನಸ್ಸಿಗೆ ಹತ್ತಿರವಾಗುತ್ತಾಳೆ. ಆದರೆ ಅವಳು ಬಡವಳೆಂಬ ಕಾರಣಕ್ಕೆ

ತನ್ನ ಪ್ರೀತಿ ಪ್ರಸ್ತಾಪ ಮಾಡಲು ಹಿಂಜರಿಯುತ್ತಾನೆ. ಅವಳು ತನ್ನ ಊರಿಗೆ ಹೊರಟು ಹೋದಾಗ ಅವಳಿಗೆ ಮದುವೆ ಎಂದು ತಿಳಿದಾಗ 'ಶಾಂತಿ ಇಲ್ಲದೆ ನಾನು ಬದುಕಲಾರೆ' ಎಂದು ಅವನಿಗೆ ಅನಿಸತೊಡಗುತ್ತದೆ. ಏನು ಮಾಡಿದರೆ ತಾನೆ ಈಗೇನು ಪ್ರಯೋಜನ? ಹಣದಾಸೆಯಿಂದ ನನ್ನ ಜೀವನವನ್ನು ನಾನೇ ಮಣ್ಣುಗೂಡಿಸಿಕೊಂಡ ಮೇಲೆ ಗೊತ್ತಾಯಿತು. ಶಾಂತಿವಿಹೀನ ಪ್ರಪಂಚದಲ್ಲಿ ಜೀವಿಸುವುದು ನನ್ನಿಂದ ಅಸಾಧ್ಯವೆಂದು ತನ್ನ ನಿಧಾನ ಪ್ರವೃತ್ತಿಗೆ ತಾನೇ ಹೇಸಿಕೊಳ್ಳುತ್ತಾನೆ.

ಆಕೆ (ಶಾಂತಿ) ತನ್ನ ಗೆಳತಿಗೆ ತಾನು ಮುದುಕನೊಬ್ಬನ ಸತಿಯಾಗಲು ಒಲ್ಲದೆ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದೇನೆ, ಎಂದು ಕಾಗದ ಬರೆದಿದ್ದನ್ನು ಓದಿ ವಿಹ್ವಲನಾಗುವ, ತನ್ನನ್ನು ತಾನೇ ಜರಿದುಕೊಂಡು 'ವರದಕ್ಷಿಣೆ ಎಂಬ ಪಿಶಾಚಿಯು ಎಷ್ಟೆಷ್ಟು ಸುಕುಮಾರಿಯನ್ನು ಬಲಿ ತೆಗೆದುಕೊಳ್ಳುವುದೋ ದೇವರೇ ಬಲ್ಲ! ಆದರೆ ನನ್ನ ಶಾಂತಿಯನ್ನು ಅದು ಬಲಿ ತೆಗೆದುಕೊಂಡ ಮೇಲೆ ನನಗದರ ನಿಜಸ್ವರೂಪವೂ ಗೊತ್ತಾಯಿತು ಎಂದು ಪಶ್ಚಾತ್ತಾಪಗೊಂಡು ಊರಿಗೆ ಹಿಂತಿರುಗುತ್ತಾನೆ.

ಊರಿಗೆ ಬಂದ ಯುವಕನಿಗೆ ಮತ್ತೊಂದು ಆಶ್ಚರ್ಯ ಕಾದಿರುತ್ತದೆ. ತನಗೆ ಮೊದಲು ಮನೆಯವರು ನೋಡಿ ನಿಶ್ಚಯಿಸಿದ್ದು ಇದೇ ಹುಡುಗಿ ಎಂದು ತಿಳಿದು ಮರಗಟ್ಟಿ ನಿಲ್ಲುತ್ತಾನೆ. ಆದರೆ ಕಾಲ ಮೀರಿ ಹೋಗಿರುತ್ತದೆ. ಶಾಂತಿ ಸಾವಿಗೆ ಶರಣಾಗಿರುತ್ತಾಳೆ.

ಆಹುತಿಯಲ್ಲಿ ಗಂಡಿನ ಸರ್ವಾಧಿಕಾರವನ್ನು ಆತ್ಮಹತ್ಯೆಯ ಮೂಲಕ ಹೆಣ್ಣು ತಿರಸ್ಕರಿಸುತ್ತಾಳೆ. ಗೌರಮ್ಮನವರು ಹೆಣ್ಣು-ಗಂಡಿನ ಸಾಧ್ಯತೆಗಳನ್ನು ಗಮನಿಸಿದಾಗ, ಸರಳೀಕರಣ ವಿಭಜನೆಗೆ ಇಳಿಯುವುದಿಲ್ಲ. ಆದರೆ ಪುರುಷ ಪ್ರಧಾನ ಸಮಾಜ ಹೆಣ್ಣಿನ ಮೇಲೆ ಹೇರುವ ಅವಿವೇಕವನ್ನು ಸ್ಪಷ್ಟವಾಗಿ ವಿರೋಧಿಸುತ್ತಾರೆ.

ಮೆಲೋ ಡ್ರಾಮಾಟಿಕ್ ಅಂಶ ಇದ್ದರೂ ಇದೊಂದು ಒಳ್ಳೆಯ ಕತೆ. ವರದಕ್ಷಿಣೆ ಪ್ರತ್ಯೇಕ ಸಮಸ್ಯೆ ಅಲ್ಲ, ಅದು ಇತರ ಸಾಮಾಜಿಕ ಸಮಸ್ಯೆಗಳ ಜೊತೆ ಹೊಂದಿಕೊಂಡಿದೆ ಎಂದು ತೋರಿಸುವ ಕತೆಯ ಪಾತಳಿಯಲ್ಲಿ ಸಂಕೀರ್ಣತೆ ಇದೆ. ಒಟ್ಟಿನಲ್ಲಿ ವರದಕ್ಷಿಣೆಯ ಆಸೆಯಿಂದಾಗಿ ಒಬ್ಬ ಹೆಣ್ಣುಮಗಳ ಜೀವನ ದುರಂತವಾಗುವುದನ್ನು ಚಿತ್ರಿಸಲಾಗಿದೆ.

'ಯಾರು?' ಎಂಬ ಕಥೆಯೂ ಸಹ ವರದಕ್ಷಿಣೆಯ ಇನ್ನೊಂದು ಮುಖವನ್ನು ಪರಿಚಯಿಸುತ್ತದೆ. ಇಬ್ಬರು ಸ್ನೇಹಿತರ ಪತ್ರಗಳ ಮುಖೇನ ಆರಂಭವಾಗುವ ಈ ಕಥೆಯಲ್ಲಿ ನಾಯಕಿ ಪಾಪಾ ಮಹೇಶನ ಮುದ್ದಿನ ತಂಗಿಯಾಗಿದ್ದು, ಅವಳನ್ನು ವರದಕ್ಷಿಣೆ ಕೊಟ್ಟು ಸೋದರತ್ತೆಯ ಮಗನ ಜೊತೆ ಮದುವೆ ಮಾಡಿರುತ್ತಾರೆ. ಮದುವೆಯ ಸಮಯದಲ್ಲಿ ಅವಳಿಗೆ ಹನ್ನೊಂದು ವರ್ಷ ಸಹ ತುಂಬಿರಲಿಲ್ಲ. ಗಂಡ ಎಂದರೆ ನಾಚಿಕೆ ಮಾಡುವ ವಸ್ತು, ಅವನು ಬಂದರೆ ಓಡಿ ಹೋಗಿ ಅವಿತುಕೊಳ್ಳಬೇಕು ಎಂದಷ್ಟೆ ಅವಳ ಭಾವನೆ. ಇಂತಹ ಮುಗ್ಧ ಹುಡುಗಿಯನ್ನು ಕೇವಲ ಆಕೆಯ ತಂದೆ ಕೊಟ್ಟ ದುಡ್ಡಿನ ಆಸೆಗಾಗಿ ಮಾತ್ರ ಆತ ಮದುವೆಯಾಗಿರುತ್ತಾನೆ.

ವಿದೇಶಕ್ಕೆ ಹೋಗುವ ಹಿಂದಿನ ದಿನ ಪಾಪಾಳಿಗೆ ಅದರ ಅರಿವು ಆಗುತ್ತದೆ. ಆಮೇಲೆ ಅವಳನ್ನು ಸಂಪೂರ್ಣವಾಗಿ ಮರೆತೇ ಬಿಡುತ್ತಾನೆ. ಇಲ್ಲಿ ಪಾಪಾ ಅವನು ನನ್ನನ್ನು ಮದುವೆಯಾಗಿದ್ದು ದುಡ್ಡಿಗಾಗಿ ಎಂಬುದನ್ನು ತಿಳಿದು ಮನೋರೋಗಕ್ಕೆ ಈಡಾಗುತ್ತಾಳೆ. 'ಇಂಗ್ಲೆಂಡಿಗೆ ಹೋಗುವ ಸಲುವಾಗಿಯೇ ನಿನ್ನನ್ನು ಮದುವೆ ಆದೆ, ಇಲ್ಲದಿದ್ದರೆ ಯಾರು ಮದುವೆ ಆಗುತ್ತಿದ್ದರು ನಿನ್ನ, ಎನ್ನುವ ಅವನ ಮಾತುಗಳು ಪಾಪಾಳ ಕೊರಗಿಗೆ ಈಡು ಮಾಡಿದವು. ವಿದೇಶದಿಂದ ವಾಪಸ್ಸು ಬಂದನಾದರೂ ಅವನು ಅವಳನ್ನು ಸ್ವೀಕರಿಸಲು ಸಿದ್ಧನಿರುವುದಿಲ್ಲ. ಕಾರಣ ಅವನು ಆಗಲೇ ಇನ್ನೊಂದು ಮದುವೆಯಾಗಿರುತ್ತಾನೆ.

[illegible]

[illegible]

[illegible]

ಕಾರಣವಿರಲಿ, ಇಲ್ಲದಿರಲಿ -ನಮ್ಮ ಸಮಾಜದಲ್ಲಿ ಪತಿಯಿಂದ ತಿರಸ್ಕೃತೆಯಾದ ಪತ್ನಿ ಎಂದರೆ ಎಲ್ಲರಿಗೂ ಸಂಶಯ, ಸಮಾಜದ ಕ್ರೂರ ನಾಲಿಗೆ ಪಾಪಾಳನ್ನು ಟೀಕಿಸದಿರಲಿಲ್ಲ. ಆ ಆಘಾತದಿಂದ ಕಷ್ಟಪಟ್ಟು ಹೊರಬಂದು ಸಿನಿಮಾಕ್ಕೆ ಸೇರಿ ಪ್ರಸಿದ್ಧ ನಟಿಯಾಗುತ್ತಾಳೆ. ಇಡೀ ಭಾರತದ ಮೂಲೆ-ಮೂಲೆಗಳಲ್ಲಿ ಸಹ ಅವಳ ಸ್ವರ್ಗೀಯ ಸಂಗೀತ ಕೇಳದ, ಅವಳ ಆ ಅಪೂರ್ವ ನಟನೆಯನ್ನು ನೋಡದ ಜನರಿಲ್ಲ. ಜನರ ದೃಷ್ಟಿಯಲ್ಲಿ ಅವಳು ಸುಖವಾಗಿದ್ದರೂ ಅವಳಿಗೆ ಸುಖ, ಶಾಂತಿ ಇಲ್ಲದೆ ಜೀವನ ನಡೆಸುತ್ತಿರುತ್ತಾಳೆ. ಜನರ ದೃಷ್ಟಿಯಲ್ಲಿ ಮೊದಲೇ ಪತಿಯಿಂದ ಪರಿತ್ಯಕ್ತೆಯಾಗಿದ್ದ ಪಾಪಾ, ಈಗ ಸಿನಿಮಾ ನಟಿ ! ಜಗತ್ತಿನ ದೃಷ್ಟಿಯಲ್ಲಿ ಸಿನಿಮಾ ನಟಿ ಎಂದರೆ ಚರಿತ್ರ ಹೀನರೂ ಎಂದಾಗಿದ್ದು ಇದಕ್ಕಿಂತ ಅವಳ ಬಾಳಿಗೆ ದೊಡ್ಡ ಶಿಕ್ಷೆ ಬೇಕೆ? ಎನ್ನುವ ಪ್ರಶ್ನೆಯನ್ನು ಓದುಗರಿಗೆ ಮಹೇಶ ಮುಂದೆ ಇಡುತ್ತಾನೆ.

ಹೀಗೆ ಕೀಳು ಚರಿತ್ರೆಯ ಹೆಣ್ಣೆಂಬ ಹಣೆ ಪಟ್ಟಿ ಹೊರುತ್ತಾಳೆ. ಕಥೆಯ ನಾಯಕಿ ದುಡ್ಡಿನ ಮೇಲಿನ ಆಮಿಷಕ್ಕೆ ಒಳಗಾಗಿ ಮದುವೆಯಾದ ಗಂಡನಿಂದಾಗಿ ಅವಳ ಜೀವನ ದುರಂತವಾಗುವುದನ್ನು ಕಾಣುತ್ತೇವೆ.

ಗೌರಮ್ಮನವರು ಮೊದಲ ಬಾರಿಗೆಂಬಂತೆ ದುರಂತಕ್ಕೆ ಒಳಗಾದ ಹೆಣ್ಣೊಬ್ಬಳು ಸ್ವತಂತ್ರವಾಗಿ ಯಾರ ಹಂಗೂ ಇಲ್ಲದೆ ಬದುಕುವ ಛಲ ತೊಟ್ಟಿರುವುದನ್ನು ಇಲ್ಲಿ ಕಾಣುತ್ತೇವೆ. ಇವರ ಕಥೆಗಳ ನಾಯಕಿಯರ ತೀರ್ಮಾನಗಳ ದೃಷ್ಟಿಯಿಂದ ಹೇಳುವುದಾದರೆ ಇದು ಒಂದು ಬೆಳವಣಿಗೆ ಎನ್ನಬೇಕು. ಈ ಕಥೆಯೂ ವರದಕ್ಷಿಣೆಯ ಆಸೆಗೆ ಬಲಿಯಾದ ಯುವಕನಿಂದಾಗಿ ಒಬ್ಬ ಮುಗ್ಧ ಹೆಣ್ಣಿನ ಜೀವನ ದುರಂತವಾಗುವುದನ್ನು ಬಹಳ ಸಮರ್ಥವಾಗಿ ಎತ್ತಿ ಹಿಡಿದಿದ್ದಾರೆ. ಪಾಪಾಳ ಪಾತ್ರದ ಮೂಲಕ ಗೌರಮ್ಮನವರು ಒಬ್ಬ ಮಹಿಳೆಯ ಮನಸ್ಸಿನ ತುಡಿತು-ಮಿಡಿತಗಳನ್ನು, ಕೊನೆಗೆ ಅವಳ ಜೀವನ ಪ್ರಾಮುಖ್ಯತೆಯನ್ನು ಎತ್ತಿ ಹಿಡಿಯುತ್ತಾರೆ. ಹಾಗೆ ಮಹೇಶನ ಪಾತ್ರದ

ಮೂಲಕ ಉತ್ತಮ ಗಂಡಿನ ರೀತಿ ನೀತಿಗಳನ್ನು ವಸಂತನ ಪಾತ್ರದ ಮೂಲಕ ಯಾವುದೇ ವಿಷಯವನ್ನು ಪರೀಕ್ಷಿಸದೇ, ಸತ್ಯ ತಿಳಿಯದೆ ಮಾತನಾಡಬಾರದು ಎಂಬುದನ್ನು ತಿಳಿಸುತ್ತಾರೆ. ಹೀಗೆ 'ಯಾರು?' ಎಂಬ ಶೀರ್ಷಿಕೆಯ ಮೂಲಕ ಹೆಣ್ಣಿನ ಸಮಸ್ಯೆಗೆ ಮುಖ್ಯವಾಗಿ ಯಾರು ಕಾರಣರು ಎಂಬುದನ್ನು ಓದುಗರ ಮನಸ್ಸಿಗೆ ಪ್ರಶ್ನೆಯಾಗಿ ನೀಡುತ್ತಾರೆ. ಇದು ಒಂದು ಉತ್ತಮ ಸಾಮಾಜಿಕ ಕಥೆಯಾಗಿದೆ.

ಸಮಾಜದ ಸ್ವಸ್ಥವನ್ನೇ ಗಮನದಲ್ಲಿಟ್ಟುಕೊಂಡು ರಚಿಸಿದ ಮತ್ತೊಂದು ಕಥೆ, 'ನನ್ನ ಮದುವೆ' ಕಥೆಯಲ್ಲಿ ವರದಕ್ಷಿಣೆ ಆಸೆಗೆ ಬಲಿಬಿದ್ದ ಯುವಕ ಹುಡುಗಿಯನ್ನೂ ನೋಡದೆ ಮದುವೆಗೆ ಒಪ್ಪುತ್ತಾನೆ. ಮದುವೆ ಮಂಟಪದಲ್ಲಿ ಅವನಿಗೆ ತಿಳಿಯುತ್ತದೆ, ತಾನು ಮದುವೆಯಾಗುತ್ತಿರುವ ಹುಡುಗಿ ಕುರುಡಿ ಎಂದು. ಈ ಕಥೆಯಲ್ಲಿ ವರದಕ್ಷಿಣೆ ದಾಹಕ್ಕೆ ಕುರುಡು ಹೆಣ್ಣನ್ನು ವರಿಸಿದ ಯುವಕನ ಮನಸ್ಥಿತಿಯ ಪರಿವರ್ತನೆಗಳನ್ನು ಲೇಖಕಿ ಗೌರಮ್ಮ ದಾಖಲಿಸಿದ್ದಾರೆ.

ಇಲ್ಲಿ ಕಥೆಯ ನಾಯಕ ಇಂಗ್ಲೆಂಡಿಗೆ ತೆರಳಬೇಕು ಎಂದು ಬಹಳ ಆಸೆ ಹೊಂದಿರುತ್ತಾನೆ. ಆದರೆ ಅವನ ತಂದೆಗೆ ಮಗನನ್ನು ಇಂಗ್ಲೆಂಡಿಗೆ ಕಳುಹಿಸುವಷ್ಟು ಶಕ್ತಿ ಇರಲಿಲ್ಲ. ಕೊನೆಗೆ ಮದುವೆಯ ಪ್ರಸ್ತಾಪ ಮಾಡುತ್ತಾರೆ. ನೀನೀಗ ಮದ್ವೆ ಆದ್ರೆ ನಿನ್ನ ಇಚ್ಛೆಯಂತೆ ಯೂರೋಪಿಗೆ ಹೋಗಬಹುದು, ಮಾವನ ಮನೆಯವರೆ ನಿನ್ನ ಓದಿನ ಖರ್ಚನ್ನು ಕೊಡುತ್ತಾರೆ ಎಂದು ತಂದೆ ಹೇಳಿದಾಗ, ವರದಕ್ಷಿಣೆ ತೆಗೆದುಕೊಳ್ಳುವುದಿಲ್ಲ ಎಂದು ವಾದ ಮಾಡಿದ್ದರೂ, ಪರಿಸ್ಥಿತಿಗೆ ಒಳಗಾಗಿ ಮದುವೆಗೆ ಒಪ್ಪಿಕೊಳ್ಳುತ್ತಾನೆ. "ಹಣವನ್ನು ಮದುವೆಯಾಗುವ ನನಗೆ ಹುಡುಗಿನ ನೋಡಿ ಮಾಡಬೇಕಾದುದೇನು" ಎಂದು ಹುಡುಗಿಯನ್ನು ನೋಡದೆ ಮದುವೆಗೆ ಒಪ್ಪುತ್ತಾನೆ. ಮದುವೆಯ ಮನೆಯೂ ತುಂಬಾ ಅದ್ಧೂರಿಯಾಗಿ ಅಲಂಕಾರಗೊಂಡಿತ್ತು. ಕೊನೆಯ ಸಮಯದಲ್ಲಿ

ಮದುವೆಗೆ ಬಂದಿದ್ದ ಎಷ್ಟೋಂದು ಜನರಿಗೆ ಗೊತ್ತಾಗದ ಒಂದು ವಿಷಯ ತಿಳಿಯಿತು. ನಾನು ಮದುವೆಯಾಗುತ್ತಿರುವುದು ಕುರುಡಿಯನ್ನು ಎಂದು. ಹೀಗೆ ವರದಕ್ಷಿಣೆಯ ಆಸೆಗೆ ಬಲಿಯಾದ ಒಬ್ಬ ಯುವಕನ ದಾರುಣ ಜೀವನ ಸ್ಥಿತಿಯನ್ನು ಗೌರಮ್ಮನವರು ಮನೋಜ್ಞವಾಗಿ ಚಿತ್ರಿಸಿದ್ದಾರೆ.

ವರದಕ್ಷಿಣೆಯ ಆಸೆಗಾಗಿ ಶ್ರೀಮಂತರ ಮಗಳನ್ನು ಮದುವೆಯಾಗ ಬಯಸುವ ರಾಮೂಗೆ ಹೆಣ್ಣಿನ ಮನೆಯವರ ವರ್ತನೆ ಹೀಗೆನಿಸುತ್ತದೆ. "ನಾವು ಊಟ ತೀರಿಸಿ ಕುಳಿತಿದ್ದೇ ತಡ, ಇದಿರು ಮನೆಯಿಂದ ಹೆಂಗಸರ ಗುಂಪೊಂದು ಬಂದು ನನ್ನನ್ನು ಬಾಗಿಲು, ಕಿಟಕಿಗಳ ಸಂದಿಯಿಂದ ಇಣುಕಿ ನೋಡಲಾರಂಭಿಸಿತು. ಕಳೆದ ವರ್ಷ ಅಣ್ಣ ಹೊಸ ಮೋಟಾರ್ ಸೈಕಲ್ ಕೊಂಡುಕೊಂಡಾಗ ಪಕ್ಕದ ಮನೆಯವರು ನೋಡಲಿಕ್ಕೆ ಬಂದುದರ ನೆನಪು ಬಂತು ನನಗೆ. ಅಲ್ಲಿಂದೆದ್ದು ಹೋಗಿ ಒಂದು ಶಾಲು ಮುಸುಕು ಹಾಕಿ ಮಲಗಿದೆ. ಆದರೆ ಮನಸ್ಸು ಒಳಗೊಳಗೇ ಚುಚ್ಚುತ್ತಿತ್ತು. ನಿನ್ನ ಮಾರಾಟವಾಗಿ ಹೋಯಿತು ಎಂದು ಇಷ್ಟು ಸಾಲದೆಂಬಂತೆ ಗೌರಮ್ಮನವರು ರಾಮೂನ ಕೈಯಿಂದ ಒಬ್ಬ ಕುರುಡಿಗೆ ಮಾಲೆ ಹಾಕಿಸುತ್ತಾರೆ. ವರದಕ್ಷಿಣೆ ತೆಗೆದುಕೊಳ್ಳುವ ಯುವಕರಿಗೆ ಇದಕ್ಕಿಂತ ಬೇರೆ ಶಿಕ್ಷೆ ಬೇಕಾಗಿಲ್ಲ. ಆದರೆ ಹೀಗೆ ಮಾಡುವಾಗ ಆ ಹುಡುಗಿಯ ಅಂಧತ್ವದ ಬಗ್ಗೆ ಅರಿವಿಲ್ಲದೇ ತಾಳುವ ನಿಲುವೇನೆಂಬುದು ಒಂದು ತಾಂತ್ರಿಕ ಸಮಸ್ಯೆಯಾದರೂ ವರದಕ್ಷಿಣೆಯ ಸಮಸ್ಯೆಯನ್ನೇ ಪ್ರಧಾನವಾಗಿ ಕೆದಕಿರುವ ಲೇಖಕಿಯ ಆ ಕುರಿತ ಧೋರಣೆ ಸಾಕಷ್ಟು ತೀವ್ರವಾಗಿಯೇ ಸೂಚಿತವಾಗುತ್ತದೆ.

ಹೀಗೆ ಸಮಾಜದ ಕ್ರೂರ ಪದ್ಧತಿಯಾದ ವರದಕ್ಷಿಣೆ ಸಮಸ್ಯೆಯನ್ನು ಗೌರಮ್ಮನವರು ತಮ್ಮ ಕಥೆಗಳಲ್ಲಿ ಬಹಳ ಸಮರ್ಥವಾಗಿ ಬಳಸಿಕೊಂಡು ಸಮಾಜದಲ್ಲಿ ಜಾಗೃತಿ ಮೂಡಿಸಲು ಪ್ರಯತ್ನಿಸಿದ್ದಾರೆ.

[illegible]

[illegible]

[illegible]

ಸಾಮಾಜಿಕ ಸಮಸ್ಯೆಗಳಷ್ಟೇ ಅಲ್ಲದೆ, ಮಾನವ ಹೃದಯದ ಭಾವನಾ ಲೋಕ ಕೂಡ ಗೌರಮ್ಮನವರ ಕಥೆಗಳಿಗೆ ಆಯಾಮ ಒದಗಿಸುತ್ತದೆ. ಮಾನವ ಅಂತರಂಗದಲ್ಲಿ ನಡೆಯುವ ಹೋರಾಟವೇ ಕತೆಗಳ ವಸ್ತು. ವ್ಯಕ್ತಿಗಳ ಅಂತರಂಗದ ತುಮುಲಗಳ ಮೂಲಕ ಮೌಲ್ಯ ಶೋಧನೆ ನಡೆಸುವ ಯತ್ನವಾಗಿ 'ಕೌಸಲ್ಯಾನಂದನ', 'ಹೋಗಿಯೇ ಬಿಟ್ಟಿದ್ದೆ', 'ಮನುವಿನ ರಾಣಿ' 'ಪಶ್ಚಾತ್ತಾಪ'ಒದಲಾದ ಕಥೆಗಳು ಗಮನ ಸೆಳೆಯುತ್ತವೆ.

'ಹೋಗಿಯೇ ಬಿಟ್ಟಿದ್ದ' ಗೌರಮ್ಮನವರ ಕಥಾ ಸಂಕಲನದಲ್ಲಿ ತುಸು ಭಿನ್ನವಾದ ಕಥೆ. ಈ ಕಥೆಯಲ್ಲಿ ತೊಂಬತ್ತು ವರ್ಷಗಳ ಹಿಂದಿನ ಸಾಮಾಜಿಕ ಚಿತ್ರಣವಿದೆ. ಹೆಸರೆ ಇಲ್ಲದ ಅನಾಥ ಹಿಂದೂ ಒಬ್ಬ ಮುಸ್ಲಿಂ ಹುಡುಗಿ ಲತೀಫಾಳನ್ನು ಹೃದಯಾಂತರಾಳದಿಂದ ಪ್ರೀತಿಸಿದರೂ, ಅವಳನ್ನು ಪಡೆಯಲಾಗದೆ, ಬೇರೊಬ್ಬರಿಗೆ ಅವಳನ್ನು ಒಪ್ಪಿಸಲಾರದೆ, ಹೇಡಿಯಂತೆ ಅವಳನ್ನು ಕದ್ದೊಯ್ದು ವಿವಾಹವಾಗಲೂ ಆಗದೆ, ಅವಳೇ ಕೇಳಿಕೊಂಡ ರೀತಿಯಲ್ಲಿ ಅವಳನ್ನು ಚೂರಿಯಿಂದ ಇರಿಯುತ್ತಾನೆ. ಸತ್ತ ಅವಳನ್ನು ಸೇರಿಕೊಳ್ಳಬೇಕೆಂದು ಬಯಸಿ ಬಾವಿಗೆ ಹಾರಿದರೆ, ಸಾವು ಅವನಿಂದ ದೂರ ಉಳಿಯುತ್ತದೆ. ಹುಚ್ಚು ಎಂಬ ಕಾರಣದಿಂದ ಫಾಸಿಯೂ ಆಗುವುದಿಲ್ಲ. ಆದರೆ ಹುಚ್ಚನಾಗದೇ ಮೂವತ್ತು ವರ್ಷಗಳ ಕಾಲ ಹುಚ್ಚಾಸ್ಪತ್ರೆಯಲ್ಲಿ ಬರ್ಬರವಾಗಿ ಕಳೆದು ರೈಲಿನಲ್ಲಿ ಹಿಂತಿರುಗುತ್ತಾ ಐದಾರು ಕಾಲೇಜು ಯುವಕರ ಎದುರು ಕಥೆ ಹೇಳಲು ತೊಡಗುತ್ತಾನೆ.

ಯುವಕರು ಕೇಳಬೇಕೆಂದೇನು ಆತ ನಿರೀಕ್ಷಿಸುವುದಿಲ್ಲ ಅಥವಾ ತನಗೆ ತಾನೇ ಆತ ಹೇಳಿಕೊಳ್ಳುತ್ತಿರುತ್ತಾನೆ. ಈ ಎರಡೂ ಅರ್ಥ ಬರುವಂತೆ ನಿರೂಪಣೆ ಶೈಲಿಯನ್ನು ರೂಪಿಸಲಾಗಿದೆ. ಹೀಗೆ ತನ್ನ ಕಥೆಯನ್ನು ಮನೋಜ್ಞವಾಗಿ ಹೇಳುತ್ತಲೇ ಚಲಿಸುತ್ತಿದ್ದ ರೈಲಿನಿಂದ ಹಾರುತ್ತಾನೆ.

ತನಗಾಗಿ ಕಾಯುತ್ತಿದ್ದ ಲತೀಫಾಳನ್ನು ಸೇರಲು. ಇದರಿಂದ ದಿಗ್ಭ್ರಾಂತರಾದ ಯುವಕರಿಗೆ ಆ ಮುದುಕ ತನ್ನ ಕಥೆಯನ್ನೇ ಹೇಳುತ್ತಿದ್ದ ಎಂಬುದು ಕೊನೆಯವರೆಗೂ ತಿಳಿಯುವುದಿಲ್ಲ.

ಹೀಗೆ ವಿಭಿನ್ನ ಕಥಾ ವಸ್ತುವನ್ನು ಹೊಂದಿರುವ ಈ ಕಥೆಯ ನಿರೂಪಣೆಯಲ್ಲಿ ಹೊಸತನವಿದೆ. ಇಲ್ಲಿ ಚಲಿಸುತ್ತಿರುವ ರೈಲು ಬದುಕಿಗೆ ಸಂಕೇತ ! ಆದರೆ ಮುದುಕನ ಬದುಕು ಚಲನಾ ಶೀಲತೆಯನ್ನು ಕಳೆದುಕೊಂಡು ಎಷ್ಟೋ ವರ್ಷಗಳಾಗಿವೆ. ತಾನು ಹೇಳುವುದು ಮುಗಿದ ತಕ್ಷಣ ಬಿಡುಗಡೆಯಾಯಿತು. ಇನ್ನೇನು ಹೋಗಬಹುದಲ್ಲಾ ? ಎಂದು ಹೇಳಿ ರೈಲಿನಿಂದ ಹೊರನೆಗೆದು ಬದುಕಿಗೆ ವಿದಾಯ ಹೇಳುತ್ತಾನೆ. ಆಗಲೇ ಕೇಳುವವರಿಗೆ ಗೊತ್ತಾಗುವುದು ಮುದುಕ ತನ್ನ ಕತೆಯನ್ನೇ ಹೇಳುತ್ತಿದ್ದ ಎಂದು.

ಮತ, ಜಾತಿ, ಮೇಲು-ಕೀಳು ಎಂಬ ಕಟ್ಟುಪಾಡುಗಳಿಗೆ ಅನಗತ್ಯ ಪ್ರಾಮುಖ್ಯತೆ ನೀಡಿ ಎರಡು ಸರಳ ಜೀವಿಗಳನ್ನು ಬಲಿತೆಗೆದುಕೊಂಡ ಸಮಾಜ ಆರೋಗ್ಯಕಾರಿ ಸಮಾಜವಲ್ಲ, ಅದೊಂದು ಅಸ್ವಸ್ಥ ಸಮಾಜ ಎಂದು ಸಾಂಕೇತಿಕವಾಗಿ ತೋರಿಸಲಾಗಿದೆ. ಜೊತೆಗೆ ಹೊಸ ಜನಾಂಗದ ಕಾಲೇಜು ಯುವಕರ ಎದುರು ಅದನ್ನು ನಿರೂಪಿಸಲಾಗಿದೆ. ಬೇರೆ ದಾರಿಯೇ ಇಲ್ಲದೆ ಯುವಕರು ರೈಲು ನಿಲ್ಲಿಸಬೇಕಾಗುತ್ತದೆ. ಅಂದರೆ ಈ ಅಸ್ವಸ್ಥ ಸಮಾಜಕ್ಕೆ ತಡೆ ಹಾಕದೇ ಮನುಷ್ಯ ಮನುಷ್ಯನಾಗಿ ಬದುಕಲಾರ ಎಂಬುದು ಕತೆಯಲ್ಲಿ ಅಡಕವಾಗಿರುವ ಅಂಶ.

ಇದೇನು ! ಕತೆ ಹೇಳುತ್ತ ಇವನಿಗೇ ಹುಚ್ಚು ಹಿಡಿಯಿತೇ ಎಂದು ನಾವು ಒಬ್ಬರ ಮುಖವನ್ನೊಬ್ಬರು ನೋಡಿಕೊಂಡೆವು. ಮತ್ತೆ ಅವನ ಮುಖವನ್ನು ನೋಡುವುದರೊಳಗೆ, ಅವನು ಮಿಂಚಿನ ವೇಗದಿಂದ, ಹೋಗುತ್ತಿದ್ದ ಆ ರೈಲ ಕಿಟಕಿಯಿಂದ ಕೆಳಗೆ ಹಾರಿಬಿಟ್ಟಿದ್ದ ಎಂಬ ಲೇಖಕಿಯ ಮಾತುಗಳು ನಿಜವಾದ ಪ್ರೀತಿಯ ಮನಸ್ಸನ್ನು ತಿಳಿಸುತ್ತದೆ.

[illegible]

[illegible]

[illegible]

[illegible]

"ಪ್ರೇಮಕ್ಕೆ ಜಾತಿ ಕುಲಗಳನ್ನು ಕಟ್ಟಿಕೊಂಡು ಮಾಡಬೇಕಾದುದೇನು ? ಅದು ಕುರುಡು, ಅದರಲ್ಲೂ ನಿಜವಾದ ಪ್ರೇಮವಾದರೆ ಅದರ ಹಾದಿ ಎಂದೆಂದಿಗೂ ನಿಷ್ಕಂಟಕವಲ್ಲ. ಎಂಬ ಲೇಖಕಿಯ ನುಡಿಗಳು ಪ್ರೀತಿಯ ಮಹತ್ವವನ್ನು ಎತ್ತಿ ಹಿಡಿಯುತ್ತದೆ. ಸಮಾಜದಲ್ಲಿ ನಿಜವಾದ ಪ್ರೀತಿಗೆ ಬೆಲೆ ಇಲ್ಲದೆ, ಜಾತಿ ಮತಗಳ ಕಟ್ಟಿಗೆ ಒಳಗಾಗಿ ಸಾವಿನ ದಾರಿ ಹಿಡಿಯುವ ನಿಷ್ಕಲ್ಮಶ ಪ್ರೇಮಿಗಳ ಮನಸ್ಸನ್ನು ತೆರೆದು ತೋರಿಸುತ್ತದೆ.

ಪ್ರಾಯಶ್ಚಿತ್ತ

ಪ್ರೇಮಕ್ಕೆ ಯಾವುದೇ ರೀತಿಯ ಜಾತಿ-ಭೇದವಿಲ್ಲದೆ, ಅದು ಹುಡುಗ-ಹುಡುಗಿಯರ ಮನಸ್ಸನ್ನು ಅವಲಂಬಿಸಿರುತ್ತದೆ. ಎಂಬುದಕ್ಕೆ 'ಪ್ರಾಯಶ್ಚಿತ್ತ' ಕಥೆಯೂ ಉತ್ತಮ ಉದಾಹರಣೆಯಾಗಿದೆ. ಇದು ಮನಸ್ಸುಗಳ ಹೋರಾಟವನ್ನು ಬಿಂಬಿಸುವ ಕತೆಯಾಗಿದೆ. ಈ ಕತೆಯಲ್ಲಿ ಹದಿಹರೆಯದವರ ಪ್ರೇಮವನ್ನು ವಸ್ತುವಾಗಿ ತೆಗೆದುಕೊಳ್ಳಲಾಗಿದೆ. ಜೊತೆಗೆ ಎಲ್ಲಾ ಕತೆಗಳಂತೆ ಇಲ್ಲಿಯೂ ತಂದೆಯೇ ಅವರ ಪ್ರೀತಿಗೆ ಅಡ್ಡವಾಗಿರುತ್ತಾನೆ. ನಳಿನಿ-ಮೂರ್ತಿ ಪರಸ್ಪರ ಪ್ರೀತಿಸುತ್ತಿದ್ದು, ಮೂರ್ತಿಯ ತಂದೆ ಇದಕ್ಕೆ ಒಪ್ಪುವುದಿಲ್ಲ. ಕಾರಣ ಕೇಳಿದಾಗ ನಳಿನಿಯ ತಾಯಿ ನಡತೆಗೆಟ್ಟವಳೆಂದು ಕಾರಣ ಕೊಡುತ್ತಾನೆ. ವಾಸ್ತವವಾಗಿ ಇಲ್ಲಿ ನಳಿನಿಯ ತಾಯಿಗೆ ಅನ್ಯಾಯ ಮಾಡಿದ ವ್ಯಕ್ತಿ ಮೂರ್ತಿಯ ತಂದೆಯೇ ಆಗಿರುವುದು, ಜೊತೆಗೆ ನಳಿನಿಯ ತಾಯಿಯ ಆತ್ಮಹತ್ಯೆಗೆ ಕಾರಣ ಮೂರ್ತಿಯ ತಂದೆ ಎಂಬ ಸೂಚನೆ ಇದೆ. ಅದು ಲೈಂಗಿಕ ಸಂಬಂಧದ್ದಾಗಿರಬಹುದು. ಆದರೆ ಮೂರ್ತಿ 'ತಾಯಿ ಕೆಟ್ಟವಳಾದರೆ ಮಗಳ ಅಪರಾಧವೇನು?'ಎಂದು ಹೇಳಿ ತಂದೆಯ ವಿರೋಧವನ್ನು ಅಲಕ್ಷಿಸಿ ನಳಿನಿಯನ್ನು ಮದುವೆಯಾಗುತ್ತಾನೆ. ತಂದೆ ಒಬ್ಬಂಟಿಯಾಗಿ ತನ್ನ ಪಾಪಗಳಿಗೆ ಪ್ರಾಯಶ್ಚಿತ್ತ ಅನುಭವಿಸುತ್ತಾನೆ.

ಇಲ್ಲಿ ಹೆಣ್ಣನ್ನು ಕೇವಲ ಲೈಂಗಿಕ ಪಾವಿತ್ರ್ಯದಲ್ಲಿ ಗಮನಿಸುವ ಸಾಮಾಜಿಕ ಆಶಯವನ್ನು ತಿರಸ್ಕರಿಸಲಾಗಿದೆ.

"ಪ್ರಾಯಶ್ಚಿತ್ತ" ಕಥೆಯಲ್ಲಿ ತನ್ನ ಆದರ್ಶ, ಆಕಾಂಕ್ಷೆಗಳಿಗಾಗಿ ತನ್ನ ತಂದೆಯ ಪರಂಪರಾಗತ ಅಧಿಕಾರವನ್ನು ಧಿಕ್ಕರಿಸುವ ದಿಟ್ಟ ತರುಣನನ್ನು ಕಾಣುತ್ತೇನೆ. ಗೌರಮ್ಮನವರು ಹೆಣ್ಣಿನ ಸಂಕಷ್ಟಗಳ ಬಗ್ಗೆ ಬರೆಯುತ್ತ ಸರಳೀಕೃತವಾದ, ಏಕಮುಖವಾದ ಪುರುಷ ವಿರೋಧಿ ನೆಲೆಗಳನ್ನೇ ಮೆಟ್ಟಿಬಿಡುವುದಿಲ್ಲ. ಎಂಬುದು ಈ ಕಥೆಯಿಂದ ತಿಳಿದುಬರುತ್ತದೆ. ಸ್ವತಃ ಓರ್ವ ಹೆಣ್ಣಾಗಿ ಇವರು ಹೆಣ್ಣಿನ ಪಕ್ಷಪಾತಿ ಎಂದು ಕಂಡರೆ, ಹೆಣ್ಣಿನ ಸಮಸ್ಯೆಗಳ ಬಗ್ಗೆಯೇ ಬರೆಯುತ್ತಾರೆ, ಎನಿಸಿದರೆ ಅದೇನೂ ಅವರನ್ನು ದೂರುವ ಮಾತಾಗುವುದಿಲ್ಲ. ಆದರೆ ಈ ಸಂವೇದನಾ ಶೀಲ ಲೇಖಕಿ ಹೆಣ್ಣಿನ ಸಮಸ್ಯೆಯನ್ನು ಭಾವುಕಗೊಳಿಸದೆ ಲಿಂಗ, ಜಾತಿ, ವರ್ಗಗಳ ನೆಲೆಯಲ್ಲೇ ಅರ್ಥೈಸುವುದರಿಂದ ಒಂದು ಬಗೆಯ ಮಹತ್ವಾಕಾಂಕ್ಷೆ ಈ ಕಥೆಗಳಿಗೆ ತಾನಾಗಿ ಬಂದುಬಿಡುತ್ತದೆ.

ಹೀಗೆ ಗೌರಮ್ಮನವರು ಶುದ್ಧ ಪ್ರೀತಿಗೆ ಎಂದೂ ಸಾವಿಲ್ಲ. ಯಾರದೋ ತಪ್ಪಿಗೆ ಯಾರಿಗೊ ಶಿಕ್ಷೆ ಕೊಡುವುದು ಸರಿಯಲ್ಲ ಎಂದು ತೀರ್ಮಾನಿಸಿ ನಳಿನಿಯನ್ನು ಮದುವೆಯಾಗುವಂತಹ ಒಳ್ಳೆಯ ನಿರ್ಧಾರಕ್ಕೆ ಬರುವಂತೆ ಮಾಡಿದ್ದಾರೆ. ಸಮಾಜದಲ್ಲಿ ಪುರುಷರು ಮಾಡುವ ತಪ್ಪಿಗೆ ಮಹಿಳೆಯರು ಅನುಭವಿಸುವ ನೋವು-ತಲ್ಲಣಗಳ ಚಿತ್ರಣ ಬಹಳ ಚೆನ್ನಾಗಿ ಮೂಡಿಬಂದಿದೆ.

'ಮುನ್ನಾದಿನ'ಇದು ಲೇಖಕಿ ಹೆಸರಿಡದ ಒಂದು ಕಥೆಯ ಹೆಸರು. ಗೌರಮ್ಮನವರ ಸಾವಿನ ಮುನ್ನಾ ದಿನದಲ್ಲಿ ಬರೆದಿರುವುದರಿಂದ ಈ ಕಥೇ ಈ ಹೆಸರನ್ನು ಪಡೆದಿದೆ. ಈ

[illegible]

[illegible]

[illegible]

[illegible]

ಕತೆಯಲ್ಲಿ ಇನ್ನೊಂದು ಹೊಸ ಮಜಲು ಅಡಗಿದೆ. ಪ್ರೀತಿಗೆ ಜಾತಿ, ಭೇದ ಕಟ್ಟುಪಾಡುಗಳು ಇಲ್ಲ, ಅದು ನಿರ್ಮಲವಾದುದು ಎಂಬುದಕ್ಕೆ ಇದರಲ್ಲಿ ಬರುವ 'ಕಾಡ' ಉತ್ತಮ ಉದಾಹರಣೆಯಾಗುತ್ತಾನೆ. ತನ್ನ ಮಾಲೀಕರ ಮೆಚ್ಚಿಗೆಗಾಗಿ ಕ್ರಿಶ್ಚಿಯನ್ ಆದ ಕಾರ್ಮಿಕನೊಬ್ಬ ಮುಂದೆ ತಾನು ಪ್ರೀತಿಸಿದ ಹುಡುಗಿಯನ್ನು ಪಡೆಯಲು ಅಷ್ಟೇ ಸಹಜ ಮತ್ತು ಸರಳವಾಗಿ ಇಸ್ಲಾಂ ಧರ್ಮ ಸ್ವೀಕರಿಸುತ್ತಾನೆ. ಅವನ ಸರಳ ಮತ್ತು ನಿರ್ಮಲ ಮನಸ್ಸಿಗೆ ಮತ ಅಷ್ಟಾಗಿ ಮುಖ್ಯ ಅನಿಸುವುದೇ ಇಲ್ಲ. ದುಡಿವ ಜನರದು ಒಂದೇ ಧರ್ಮ. ಅವರಿಗೆ ಜಾತಿ ಮತ ಇಲ್ಲ ಎಂಬ ನಿಲುವನ್ನು ಈ ಕತೆ ಪ್ರತಿಪಾದಿಸುತ್ತದೆ ಎಂದು ಕೆಲವರಿಗಾದರೂ ಅನಿಸಿದರೆ ಆಶ್ಚರ್ಯವಿಲ್ಲ. ಇದರಿಂದ ಮಾರ್ಕ್ಸ್‌ವಾದಿಗಳಿಗೆ ಖುಷಿಯಾಗಬಹುದು.

ಮಹಾತ್ಮಾ ಗಾಂಧೀಜಿಯವರು ಹಿಂದು-ಮುಸ್ಲಿಂ ಐಕ್ಯತೆಯನ್ನು ಬೋಧಿಸಿದ್ದರೆ ಅದನ್ನು ಕಾರ್ಯಾಚರಣೆಗೆ ತಂದವನು ಕಾಡ ಮೇಸ್ತ್ರಿ, ಅವನದು ವಿಚಿತ್ರ ಕಥೆ ಎಂಬುದರೊಂದಿಗೆ ಈ ಕತೆ ಪ್ರಾರಂಭವಾಗಿ ಸಮಾಜದಲ್ಲಿ ಇರುವ ಜಾತಿ ಪದ್ಧತಿಯನ್ನು ವ್ಯಂಗ್ಯವಾಗಿ ವಿಡಂಬಿಸುತ್ತಾರೆ. ಚಿಕ್ಕ ವಯಸ್ಸಿನಲ್ಲೇ ತಂದೆಯನ್ನು ಕಳೆದುಕೊಂಡ ಕತೆಯ ನಾಯಕ, ತಾಯಿ ಪುನಃ ಮದುವೆಯಾದಳು. ಮನೆಯಲ್ಲಿ ಇರಲಾಗದೇ ಮನೆ ಬಿಟ್ಟು ಹೋಗುತ್ತಾನೆ. ಯಾರ ನೆರವಿನಿಂದಲೊ ಯೂರೋಪಿಯನ್ ಪ್ಲಾಂಟರ್‌ನ ಕಾಫಿ ತೋಟದಲ್ಲಿ ಕೆಲಸಕ್ಕೆ ಸೇರಿಕೊಂಡನು. ಅವರ ಆಸೆಯಂತೆ ಕ್ರಿಶ್ಚಿಯನ್ ಧರ್ಮಕ್ಕೆ ಸೇರಿ ಜೋಸೆಫ್ ಕಾಡ ಆಗುತ್ತಾನೆ. ಜಾತಿ-ನೀತಿಗಳ ವಿಷಯದ ತಿಳುವಳಿಕೆ ಇಲ್ಲದೆ, ಹುಟ್ಟುವುದು ಕೆಲಸ ಮಾಡಲು ಹಾಗೂ ಹೊಟ್ಟೆ ಹೊರೆಯಲು ಎಂಬ ಒಂದೇ ಒಂದು ಭಾವನೆಯಿಂದ ಬೆಳೆದವನು. ಇಂತಹ ಒಬ್ಬ ಮುಗ್ಧ ಜೀವಿಯ ಬಾಳಿನಲ್ಲಿ ಆಗುವ ಬದಲಾವಣೆಗಳು ಮತ್ತು ಜಾತಿ-ಮತಗಳ ಯಾವುದೇ ಕಟ್ಟುಪಾಡು ಪ್ರೀತಿಗೆ ಇರಬಾರದು ಎಂದು ಈ ಕಥೆ ಸೂಚಿಸುತ್ತದೆ. ಮುಗ್ಧ ಜೀವಿಗಳನ್ನು ಕ್ರೂರ ಸಮಾಜ ಹೇಗೆ

ಜಾತಿಯ ಬಂಧನಕ್ಕೆ ತಳ್ಳಿಬಿಡುತ್ತದೆ ಎಂಬುದು ಸಹ ತಿಳಿಯುತ್ತದೆ. ಗೌರಮ್ಮನವರು ತಮ್ಮ ಕಥೆಗಳಲ್ಲಿ ಕೇವಲ ಮಹಿಳೆಯರ ಸಮಸ್ಯೆಗಳನ್ನು ಮಾತ್ರ ಚಿತ್ರಿಸದೆ, ಸಮಾಜದಲ್ಲಿ ಇರುವ ಜಾತಿ ಪದ್ಧತಿ, ಲಿಂಗ ಅಸಮಾನತೆ, ದುಷ್ಟ ಪದ್ಧತಿಗಳ ವಿರುದ್ಧವೂ ಕಿಡಿಕಾರಿದ್ದಾರೆ.

ಹೀಗೆ ಕಾಡನು ಮನೆಯ ಸಾಹುಕಾರರು ಹೇಳಿದ ಕೆಲಸವನ್ನು ಮಾಡಿಕೊಂಡು ಜೀವನ ಸಾಗಿಸುತ್ತಿರುವ ಸಂದರ್ಭದಲ್ಲಿ ಅವನಿಗೆ ಬೀಡಿ ಸೇದುವ ಅಭ್ಯಾಸವಿದ್ದು, ಅಂಗಡಿಗೆ ಬೀಡಿ ಕೊಳ್ಳಲು ಹೋಗುವ ಸಂದರ್ಭದಲ್ಲಿ ಅಂಗಡಿಯ ಹುಡುಗಿಯ ರೂಪಕ್ಕೆ ಮರುಳಾಗುತ್ತಾನೆ. ಅವಳು ದಿನಾ ಬೀಡಿಯ ವ್ಯಾಪಾರಕ್ಕೆ ಬರುತ್ತಿದ್ದ ಕಾಡನಿಗೆ ಬೀಡಿಯನ್ನಲ್ಲದೆ ಹೃದಯವನ್ನು ಕೊಟ್ಟುಬಿಟ್ಟಳು. ಹುಡುಗಿಯ ಮನೆಯವರು ವಿಷಯ ತಿಳಿದು ಅವನು ನಮ್ಮ ಜಾತಿಗೆ ಬಂದರೆ ಮದುವೆಗೆ ಅಡ್ಡಿ ಇಲ್ಲ ಎಂದು ತಿಳಿಸಿದರು.

ಕಾಡನಿಗೇನು ? ಜಾತಿಗೆ ಅವನ ದೃಷ್ಟಿಯಲ್ಲಿ ಮೌಲ್ಯವಿಲ್ಲ. ಎಷ್ಟು ಸುಲಭವಾಗಿ ಕ್ರಿಶ್ಚಿಯನ್ ಆಗಿದ್ದನೋ ಅದಕ್ಕಿಂತಲೂ ಹೆಚ್ಚಿನ ಉತ್ಸಾಹದಿಂದ ಮುಸಲ್ಮಾನನಾಗಲೊಪ್ಪಿದ. ಹಿಂದೆ ಹಿಡಿ ಕೂಳಿಗಾಗಿ ಜಾತಿ ಬಿಟ್ಟಿದ್ದರೆ ಈಗ ಪ್ರೇಮ ಕಾರಣವಾಗಿತ್ತು. ಹುಸೇನು ಬೀಬಿಗಾಗಿ ಜೀವಬಿಡಲು ಸಿದ್ಧನಿದ್ದ. ಅವನಿಗೆ ಬೆಲೆಯಿಲ್ಲದ ಜಾತಿಯನ್ನು ಬಿಟ್ಟ ಮಾತ್ರಕ್ಕೆ ಅವಳು ಲಭಿಸುವಳೆಂದಾದ ಮೇಲೆ ಮುಸಲ್ಮಾನ ಧರ್ಮಕ್ಕೆ ಮತಾಂತರ ಹೊಂದಲು ಹೆಚ್ಚು ಸಮಯವಾಗಲಿಲ್ಲ. ಹೀಗೆ ಕೊನೆಗೆ ಜಾತಿಗೆ ಬೆಲೆಸಿಗದೇ ಮುಗ್ಧ ಪ್ರೀತಿಗೆ ಗೆಲುವು ಕೊಡುತ್ತಾರೆ.

ಕೌಸಲ್ಯಾನಂದನ

ಪ್ರೀತಿಗೆ ಜಾತಿ ಮತಗಳ ಜೊತೆಗೆ ರೂಪವು ಅಡ್ಡಿ ಬರುವುದಿಲ್ಲ ಎಂಬುದನ್ನು ಗೌರಮ್ಮ ಅವರ 'ಕೌಸಲ್ಯಾನಂದನ' ಕತೆ ಎತ್ತಿ ಹಿಡಿಯುತ್ತದೆ. ಇಬ್ಬರು ಸ್ನೇಹಿತರ ಆತ್ಮೀಯ

ಸ್ನೇಹದಿಂದ ಪ್ರಾರಂಭವಾಗುವ, ಬೆಳೆಯುತ್ತಾ ಅದು ಬೇರೆ-ಬೇರೆ ತಿರುವುಗಳನ್ನು ಪಡೆಯುತ್ತಾ ಹೋಗುತ್ತದೆ. ಸೀತೆ ಮತ್ತು ವಸಂತ ಆತ್ಮೀಯ ಸ್ನೇಹಿತರು. ವಸಂತಳ ಚಟುವಟಿಕೆ ಗಮನಿಸಿ ಅವಳಿಗೆ ಲಿನ್ನಿ ಎಂದು ಕರೆಯುತ್ತಿದ್ದರು. ಲಿನ್ನಿ ಬಲು ಚುರುಕು ಹುಡುಗಿಯಾಗಿದ್ದು ಎಲ್ಲರೂ ಅವಳಿಗೆ ಸ್ನೇಹಿತರು. ಅವಳ ಒಬ್ಬ ಸ್ನೇಹಿತೆ ಕತೆಯನ್ನು ಹೇಳಲು ಪ್ರಾರಂಭಿಸುತ್ತಾಳೆ.

ರಜಾದ ದಿನದಲ್ಲಿ ಸ್ನೇಹಿತೆಯು ಲಿನ್ನಿಯ ಮನೆಗೆ ಹೋದಾಗ ವಸಂತ ಮತ್ತು ರಾಮುವಿನ ನಡುವಿನ ಗಾಢ ಪ್ರೇಮ ಅರಿವಾಗುತ್ತದೆ. ಯಾವಾಗಲೂ ನಗು ತುಂಬಿ ತುಳುಕುತ್ತಿದ್ದ ಅವಳ ಕಣ್ಣುಗಳು ಕಣ್ಣೀರು ತುಂಬಿರುವುದನ್ನು ನೋಡುವಾಗ, ತುಂಟಾಟಿಕೆಯ ಲಿನ್ನಿಯ ಹೃದಯಾಂತರಾಳದಲ್ಲಿ ಇಷ್ಟೊಂದು ಪ್ರೇಮ, ಇಷ್ಟೊಂದು ಗಂಭೀರತೆ ಅಡಗಿರಲು ಸ್ಥಳವೆಲ್ಲಿ? ಎನ್ನುವುದರ ಮಟ್ಟಿಗೆ ಅವಳ ನಡದೆ ಇರುತ್ತದೆ.

ಲಿನ್ನಿ (ವಸಂತ) -ರಾಮು ನಡುವಿನ ಪ್ರೇಮಕ್ಕೆ ರಾಮುವಿನ ಅಂಗವಿಕಲತೆ ಅಡ್ಡಿಯಾದರೂ, ಅವರ ಪೋಷಕರು ಅಡ್ಡಿಯಾದರೂ ಕಥೆಯಲ್ಲಿ ಇವರಿಬ್ಬರ ಪ್ರೇಮ ಗೆಲ್ಲುವುದನ್ನು ಕಾಣಬಹುದು. ಅಂಗವಿಕಲತೆ, ಬಾಹ್ಯ ಸೌಂದರ್ಯ ಎಂಬುದು ನಿರ್ಮಲವಾದ ಪ್ರೀತಿಗೆ ಎಂದಿಗೂ ಮುಳ್ಳಾಗದು ಎಂಬುದನ್ನು ಗೌರಮ್ಮನವರು ಈ ಕಥೆಗಳಲ್ಲಿ ಹೇಳುವುದರ ಮೂಲಕ ಇಲ್ಲಿ ಪ್ರೀತಿಯನ್ನು ಗೆಲ್ಲಿಸಿದ್ದಾರೆ. ಅಂತ್ಯವನ್ನು ಸುಖಾಂತವಾಗಿ ಮಾಡುವುದರ ಮೂಲಕ ಪ್ರೀತಿಗೆ ಜಯ ನೀಡಿದ್ದಾರೆ.

ಸಮಾಜದಲ್ಲಿ ಮಹಿಳೆಯರು ಮಾನಸಿಕವಾಗಿ ಎದುರಿಸುತ್ತಿರುವ ಸಮಸ್ಯೆಗಳಲ್ಲಿ ಒಂದಾದ ವೇಶ್ಯೆ ಸಮಸ್ಯೆಯನ್ನು ಸಹ ತಮ್ಮ ಕತೆಯಲ್ಲಿ ಹೇಳುತ್ತಾರೆ. ಸ್ತ್ರೀ-ಪುರುಷ ಸಂಬಂಧಗಳ ಹಲವು ಮಗ್ಗುಲುಗಳನ್ನು ಪರಿಶೀಲಿಸುತ್ತಾ, ಅದರಲ್ಲಿ ಉದ್ಭವಿಸಿರುವ ಸಾಮಾಜಿಕ ಆಯಾಮ

ಪಡೆದ ಸಮಸ್ಯೆಯ ವಿವೇಚನೆಗೆ ಯತ್ನಿಸುತ್ತಾರೆ. ಈ ದಿಕ್ಕಿನ ಹಲವು ವಿಧವಾದ ಪ್ರಯೋಗಗಳಲ್ಲಿ 'ಮನುವಿನ ರಾಣಿ' ಗೌರಮ್ಮನವರ ಕಥನ ಕಲೆ ಪರಿಪಕ್ವತೆಗೇರಿದುದಕ್ಕೆ ಸಾಕ್ಷಿಯಾಗಿದೆ.

ವೇಶ್ಯೆಯೊಬ್ಬಳು ತನ್ನ ವೃತ್ತಿ ಧರ್ಮಕ್ಕೆ ವಿರುದ್ಧವಾಗಿ ಬಡವನೊಬ್ಬನನ್ನು ಅಪರಿಮಿತವಾಗಿ ಪ್ರೇಮಿಸಿ, ಅವನಿಗಾಗಿ ಪಟ್ಟ ಯಾತನೆ, ಮಾಡಿದ ಸೇವೆ ತ್ಯಾಗಗಳ ಮನ ಮಿಡಿಯುವ ಕಥೆ ಇದು. ಈ ಕಥೆಯನ್ನು ಇಂಥವರ ಬಗ್ಗೆ ಮಡಿವಂತ ಸಮಾಜ ತೋರುವ ಕ್ರೂರ ತಿರಸ್ಕಾರದ ಪ್ರತಿನಿಧಿಯಂತಿರುವ ವೈದ್ಯನ ಅಂತರಂಗದ ಮೂಲಕ ಲೇಖಕಿ ನಿರೂಪಿಸುತ್ತಾರೆ. ಇದರಿಂದ ಕಥೆ ಕೇವಲ ಭಾವಪರವಶವಾಗದೆ, ಭಾವ-ವಿಚಾರಗಳಲ್ಲಿ ಸಮತೋಲನವನ್ನು ಕಾಯ್ದುಕೊಳ್ಳುತ್ತದೆ. ಡಾಕ್ಟರ್ ಪಾತ್ರ ಮೊದಲು ಸಂಕುಚಿತ ಮನೋಭಾವ ಹೊಂದಿದ್ದು, ರಾಜಮ್ಮನ ವ್ಯಕ್ತಿತ್ವದ ಉದಾತ್ತತೆಯ ಅರಿವಿನೊಂದಿಗೆ ತಾನೂ ವಿಕಾಸ ಹೊಂದುತ್ತದೆ. ಕೊನೆಯಲ್ಲಿ ಮನಮಂಥನದ ಮೂಲಕವೇ ವೈದ್ಯನ ಅಂತಃಕರಣದಲ್ಲಿ ಮಾನವೀಯತೆಯ ಅವಿಷ್ಕಾರವಾಗುತ್ತದೆ.ಇಲ್ಲಿ ಸನ್ನಿವೇಶ, ಭಾವನೆ, ವಿಚಾರಗಳೆಲ್ಲ ವಿಶೇಷ ರೀತಿಯಲ್ಲಿ ಸಂಯೋಗ ಹೊಂದಿ ಕತೆಯನ್ನು ಒಳ್ಳೆಯ ಕಲಾಕೃತಿಯ ನೆಲೆಗೇರಿಸುವಲ್ಲಿ ನೆರವಾಗುತ್ತದೆ.

ಅದೆಷ್ಟೋ ಜನರು ಎದೆ ಬಡಿದುಕೊಂಡು ಅಳುವ ಕರುಣ ಆಕ್ರಂದನವನ್ನು ಕೇಳಿದ್ದೇನೆ. ಆದರೆ, ಅದಾವ ದೃಶ್ಯಗಳೂ ರಾಜಮ್ಮನ ಮೂಕರೋಧನದಷ್ಟು ವ್ಯಥೆಯನ್ನುಂಟು ಮಾಡಿರಲಿಲ್ಲ ಎಂದು ವೈದ್ಯರಿಂದ ಒಬ್ಬ ವೇಶ್ಯೆಯ ಬಗ್ಗೆ ಕರುಣೆ ತುಂಬಿದ ಮಾತುಗಳನ್ನು ಹೇಳಿಸಿದ್ದಾರೆ. ಸಮಾಜದಲ್ಲಿ ಅವಳು ಒಂದು ಜೀವ. ಅವಳಿಗೂ ಕರುಣೆ, ಪ್ರೀತಿ, ಪ್ರೇಮದ ಅಗತ್ಯ ಇದೆ ಎಂಬುದನ್ನು ಎತ್ತಿ ಹಿಡಿದಿದ್ದಾರೆ.

'ನಾಲ್ಕು ಘಟನೆಗಳು' ಕಾಗದಗಳ ಮಾದರಿಯಲ್ಲಿರುವ ಕಥೆಯಾಗಿದೆ. ಈ ಕಥೆಯಲ್ಲಿ ತೆರೆದ ಹೃದಯದಿಂದ ನೋಡಿದ ಸಮಾಜದ ಚಿತ್ರ ನೀಡುವ ನಾಲ್ಕು ಘಟನೆಗಳಿವೆ. ಮೊದಲನೆಯದು ಗಂಡು ಹೆಣ್ಣಿನ ನವಿರಾದ ಪ್ರೇಮವನ್ನು ವರ್ಣಿಸಿದರೆ, ಎರಡನೆಯದರಲ್ಲಿ ನೆನ್ನೆ ಹೊಡೆದಾಡಿದ ಗಂಡ ಹೆಂಡತಿಯರು ಇಂದು ಒಂದಾಗುವ ಸಹಿಷ್ಣುತೆಯನ್ನು ವಿವರಿಸುತ್ತದೆ. ಮೂರನೆಯ ಘಟನೆ ವಿಧವೆಯ ಬಗೆಗೆ ಸಮಾಜ ಹಾಗೂ ಗಂಡನ ಮನೆಯವರು ತೋರುವ ತಾತ್ಸಾರ ಅನಾದರಗಳನ್ನು ಕುರಿತು ವಿಷಾದಿಸಿದರೆ, ನಾಲ್ಕನೆಯ ಘಟನೆಯು ಸಂತಸದಿಂದ ತುಂಬಿ ತುಳುಕುತ್ತಿದ್ದ ಮನೆ ಕ್ಷಣಾರ್ಧದಲ್ಲಿ ದುಃಖದ ಬೀಡಾಗಿದ್ದನ್ನು ಕುರಿತು ಹೇಳುತ್ತಾ ಜೀವನದ ನಿಜವಾದ ಮೌಲ್ಯವನ್ನು ತಿಳಿಸುತ್ತದೆ.

ಹಾಸ್ಯದ ಹೊದಿಕೆಯೊಳಗೆ ವಿಡಂಬನೆಯ ಹೂರಣವನ್ನು ಅಡಗಿಸಿಟ್ಟು ಕಥೆ ಹೇಳುವ ಕಲೆ ಗೌರಮ್ಮನವರಿಗೆ ಕರಗತವಾಗಿತ್ತು, ಎಂಬ ಅಂಶ ಅವರ ಕಥೆಗಳ ಸೂಕ್ಷ್ಮ ಅವಲೋಕನದಿಂದ ತಿಳಿಯುತ್ತದೆ. ಅದರಲ್ಲೂ 'ಅವಳ ಭಾಗ್ಯ' ಕಥೆ ಈ ನಿಟ್ಟಿನಲ್ಲಿ ಸಾರ್ಥಕತೆ ಪಡೆದಿದೆ. ಈ ಲಿಂಗ ಅಸಮಾನತೆಗೆ ಇರುವ ವರ್ಗ ನೆಲೆಯನ್ನೂ ಗೌರಮ್ಮ ಗ್ರಹಿಸದೆ ಬಿಟ್ಟಿಲ್ಲ. ಈ ಕಥೆಯಲ್ಲಿ ಅಂದರೆ ಅವಳ ಭಾಗ್ಯ ಕಥೆಯಲ್ಲಿ ಗುಮಾಸ್ತರ ಕುರೂಪಿ ಮಗಳು ಪಾರೂಗೆ ಹೆಚ್ಚು ಖರ್ಚಿಲ್ಲದೇ ಕ್ಷಯರೋಗ ವರನೊಂದಿಗೆ ಮದುವೆಯಾಗುತ್ತದೆ. ಇದನ್ನು ದೊಡ್ಡ ವರವೆಂದೇ ಭಾವಿಸುವ ಜಮೀನ್ದಾರರ ಪುತ್ರಿಗೆ ನಿಜವಾಗಿಯೂ ಪಾರೂ ಭಾಗ್ಯಶಾಲಿನಿ ಎಂದೆನಿಸುತ್ತದೆ.

ಆದರೆ ಗೌರಮ್ಮ ಇಲ್ಲಿ ಚುಚ್ಚುವ ವ್ಯಂಗ್ಯದಿಂದ ಕಥೆಯನ್ನು ಅಂತ್ಯಗೊಳಿಸುತ್ತಾರೆ. ಜಮೀನ್ದಾರರ ಏಕಮಾತ್ರ ಪುತ್ರಿ, ಡಾಕ್ಟರರ ಹೆಂಡತಿಯೂ ಉಂಡುಡಲು ಬೇಕಾದಷ್ಟಿರುವಾತನನ್ನು

[illegible]

[illegible]

ಮದುವೆಯಾದುದ್ದನ್ನು ನೋಡಿ ಅದು ಅವಳ ಭಾಗ್ಯ ಎಂದು ತಿಳಿದುಕೊಂಡರೆ ತಪ್ಪೇನು ಹೇಳಿ? ಎಂದು ಹುಡುಗರನ್ನೇ ಪ್ರಶ್ನಿಸುತ್ತಾರೆ.

ಗಾಢವಾದ ಜೀವನಾನುಭವವನ್ನು ತುಂಬಿಕೊಂಡಿರುವ ಗೌರಮ್ಮನವರ ದುರಂತ ಕತೆಗಳು ತಮ್ಮ ಕಥಾ ಸರಣಿಯನ್ನು ತಾವೇ ರೂಪಿಸಿಕೊಳ್ಳುತ್ತಾ ಸಾಗುತ್ತವೆ. 'ಅದೃಷ್ಟದಾಟ', 'ಸುಳ್ಳುಸ್ವಪ್ನ' ಕಥೆಗಳನ್ನು ಈ ವಿಭಾಗದಲ್ಲಿ ಗಮನಿಸಬಹುದು.

'ಸುಳ್ಳುಸ್ವಪ್ನ' ಕಥೆ ಭಗ್ನ ಪ್ರೇಮಿಯೊಬ್ಬಳ ದಿನಚರಿ ಪುಸ್ತಕದಿಂದ ಆಯ್ದ ತುಣುಕುಗಳಿಂದ ಕೂಡಿದೆ. ಅಯೋಚಿತವಾಗಿ ಪ್ರಾರಂಭವಾಗಿ ಅದ್ಭುತವಾಗಿ ಬೆಳೆದ ಪ್ರೇಮ ಹಿರಿಯ ಅನಾದರನ ದೌರ್ಜನ್ಯಕ್ಕೆ ಸಿಲುಕಿ ನಲುಗಿ ಹೋದಾಗ ಹೆಣ್ಣಿನ ಮನದ ಮೇಲಾಗುವ ಘೋರ ಪರಿಣಾಮವನ್ನು ಮನದಾಳಕ್ಕೆ ಕೈಯಿಕ್ಕಿ ಹೆಕ್ಕಿ ತೆಗೆದು ಚಿತ್ರಿಸಿದ್ದಾರೆ. ಪ್ರೇಮದ ಆರಂಭಿಕ ಹಂತ, ಅದರ ನಿರಾಕರಣೆ ಕೊಡುವ ನೋವು, ಆ ಎರಡರ ಜೊತೆಗೆ ನಂತರದ ಮಾನಸಿಕ ಪರಿಣಾಮಗಳನ್ನು ಈ ಕಥೆ ವಿಶಿಷ್ಟ ರೀತಿಯಲ್ಲಿ ತೆರೆದಿಟ್ಟಿದೆ.

'ಅದೃಷ್ಟದ ಆಟ' ಕಥೆಯೂ ಕೂಡ ಪ್ರೀತಿ ವ್ಯರ್ಥವಾಗುವ ಮತ್ತೊಂದು ಬಗೆಯನ್ನು ಚಿತ್ರಿಸುತ್ತದೆ. ಮಣಿಯ ಪ್ರೀತಿಗೆ ಲತಾ ಮತ್ತು ಎರಡೂ ಕಡೆಯ ಹಿರಿಯರು ಒಪ್ಪಿದರೂ ಕೆಲಸದ ಕಾರಣದಿಂದ ವಿವಾಹವನ್ನು ಮುಂದೆ ಹಾಕಿದ ಅವನಿಂದ ಲತಾ ಎರವಲಾಗಿ ಬೇರೊಬ್ಬರ ಪತ್ನಿಯಾಗಬೇಕಾಗುತ್ತದೆ. ಹತಾಶನಾದ ಮಣಿ ಕೆಲವರುಷಗಳ ನಂತರ ಬೇರೆ ಮದುವೆಯಾದಾಗ ಆತನ ಪತ್ನಿ ಲಕ್ಷ್ಮಿಗೆ ಪಾರ್ಸೆಲ್‌ನಲ್ಲಿ ಬಂದ ವಜ್ರದ ಉಂಗುರ ತಾನು ಲತಾಗೆ ಪ್ರೀತಿಯ ಉಡುಗೊರೆಯಾಗಿ ಕೊಟ್ಟಿದ್ದುದು ಎಂದು ಅರಿಯುತ್ತಾನೆ. ಪತ್ನಿಯಿಂದ ಲತೆಯ ಗಂಡ ಸತ್ತು ಅವಳು ತವರು ಮನೆ ಸೇರಿದ್ದುದು ತಿಳಿದಾಗ ನೋವಿನ ನಿಟ್ಟುಸಿರು

[illegible]

[illegible]

[illegible]

[illegible]

ಬಿಡುತ್ತಾನೆ. ಹೀಗೆ ಈ ಕಥೆಗಳು ನೋವಿನಿಂದ ಭಾರವಾಗುತ್ತವೆ. ವ್ಯಸನದಿಂದ ಎದೆ ತುಂಬುತ್ತವೆ. ದುಃಖದಲ್ಲಿ ಕರಗಿಸಿಬಿಡುತ್ತದೆ.

'ಸನ್ಯಾಸಿರತ್ನ' 'ಮರದ ಗೊಂಬೆ', 'ಪಾಪನ ಮದುವೆ' ಈ ಕಥೆಗಳಲ್ಲಿ ಹದಿಹರೆಯದ ಪ್ರೇಮ, ಉತ್ಸಾಹ, ನಂಬಿಕೆ, ನಡವಳಿಕೆಗಳು ಮಡುಗಟ್ಟಿವೆ. ಈ ವರ್ಗದ ಕಥೆಗಳು ಅಲ್ಲಲ್ಲಿ ನೀರಸಯೆನಿಸುತ್ತದೆ. ಕಥಾ ಸರಣಿಯನ್ನು ಮೊದಲೇ ಊಹಿಸಬಹುದು ಎನಿಸುತ್ತದೆ. ನಿಜ, ಆದರೆ ಗೌರಮ್ಮನವರ ಸಹಜ ಶೈಲಿಯ ಓಟ ಹಾಗೂ ಹಾಸ್ಯದ ಚಿಂತನಗಳು ಕಥೆಗಳಿಗೆ ಒಂದು ಚೌಕಟ್ಟು ಕೊಡುವಲ್ಲಿ ಯಶಸ್ವಿಯಾಗುತ್ತದೆ.

'ಮರದ ಗೊಂಬೆ' ಕಥೆಯಲ್ಲಿ ಹಾಸ್ಟೆಲ್‌ನ ನಿಯಮಬದ್ಧ ವಾತಾವರಣದಲ್ಲೂ ತುಂಟತನದ ಅಲೆ ಎಬ್ಬಿಸಿ, ಚೇಷ್ಟೆಗಳ ಮೂಲಕವೇ ಮುದ ನೀಡಿ ಆ ಎಳೆತನದ ಹುಡುಗಾಟದಲ್ಲೇ ತನಗೆ ಸೂಕ್ತ ಗಂಡನನ್ನು ಆರಿಸಿಕೊಂಡು ಮರದ ಬೊಂಬೆಯಂತೆ ಮೌನಿಯಾಗಿದ್ದ ಅವನನ್ನು ವಾಚಾಳಿಯಾಗಿಸಿದ ಶೈಲಿಯ ವಿಶಿಷ್ಟತೆಯನ್ನು ಆಹ್ಲಾದಿಸಬಹುದು. ಗೌರಮ್ಮನವರ ಕಥೆಗಳಲ್ಲೇ ಮರದ ಬೊಂಬೆ ಹೆಚ್ಚು ಸಾಂಕೇತಿಕವಾದದ್ದು, ಮನಃಶಾಸ್ತ್ರಜ್ಞರ ಪ್ರಕಾರ 12-16ರವರೆಗಿನ ಘಟ್ಟ ಹುಡುಗಿಯರ ಬೆಳವಣಿಗೆಯಲ್ಲಿ ಅತ್ಯಂತ ನಾಜೂಕಾದ ಅವಧಿ. ಈ ಸಂಕೀರ್ಣ ಕಾಲದ ಚಿತ್ರಣವನ್ನು ಬಹಳ ಸಂಯಮದಿಂದ ನಿರೂಪಿಸಿದ್ದಾರೆ.

'ಸನ್ಯಾಸಿ ರತ್ನ' ಕಥೆಯಲ್ಲಿ ರಾಜ-ರತ್ನ ಎಂಬ ಇಬ್ಬರೂ ಸ್ನೇಹಿತರು ನಾಯಕರು. ಕಥೆಯಲ್ಲಿ ಹುಡುಗಿಯ ಪ್ರೀತಿಗೆ ಎಂದಿಗೂ ಸಿಲುಕುವುದಿಲ್ಲ, ಎಂಬ ರತ್ನನ ನಿಲುವನ್ನು ರಾಜ ನೀನು ಸಿಲುಕಿಯೇ ತೀರುತ್ತೀಯೆಂದು ವಜ್ರದುಂಗುರವನ್ನು ಪಣವಾಗಿಡುತ್ತಾನೆ. ಕೊನೆಗೆ ರತ್ನ ಸಂಗೀತ ಸರಸ್ವತಿಯ ವಾಣಿಯ ಗಾನದ ಮೋಡಿಗೆ ಮರುಳಾಗಿ ತನ್ನ ಪ್ರತಿಜ್ಞೆಗೆ ಎರವಲಾಗಿ,

ಗೆಳೆಯ ರಾಜನೊಡನೆ ಪಂಥ ಹೂಡಿದ್ದ ಹಾಗೆ ತನ್ನ ವಜ್ರದುಂಗುರವನ್ನು ಬಂಧು ಬಳಗದ ಕೇಕೆ, ಅಟ್ಟಹಾಸಗಳ ನಡುವೆ ತೆಗೆದುಕೊಡುವುದನ್ನು ನಾವು ಈ ಕಥೆಯಲ್ಲಿ ಕಾಣಬಹುದು. ಒಟ್ಟಿನಲ್ಲಿ ಇದೊಂದು ಹಾಸ್ಯ ಚಮತ್ಕಾರದಿಂದ ಕೂಡಿದ ಕಥೆಯಾಗಿದೆ.

'ಮದುವೆ' ಎನ್ನುವುದು ಹಿರಿಯರು ನಿರ್ಧರಿಸಿದ ಆಟವಾಗಿ ಎಳೆಯ ವಯಸ್ಸಿನಲ್ಲಿಯೇ ನಡೆದುಬಿಟ್ಟು ಪ್ರೀತಿ ಪ್ರೇಮದ ಸಂಬಂಧಗಳು ಏನಿದ್ದರೂ ಮದುವೆಯ ನಂತರವೇ ಹುಟ್ಟಬೇಕಾದ ಪರಿಸ್ಥಿತಿ ಇದ್ದ ಫ್ಯೂಡಲ್ ಭಾರತದಲ್ಲಿ ವಸಾಹತುಶಾಹಿಯ ಪರಿಣಾಮವನ್ನು ಕಾಣುತ್ತೇವೆ. ಇಂಗ್ಲೀಷ್ ಶಿಕ್ಷಣ ಮತ್ತು ನಗರೀಕರಣದ ಪ್ರಭಾವದಿಂದಾಗಿ ಗಂಡು-ಹೆಣ್ಣುಗಳ ನಡುವೆ ಪ್ರೀತಿ-ಪ್ರೇಮದ ನಿರೀಕ್ಷೆಗಳು ಆಕಾಂಕ್ಷೆಗಳು ಮನಸ್ಸಿನಲ್ಲಿ ಜನಿಸುವ ರೀತಿಯನ್ನು ಈ ಕಥೆಯಲ್ಲಿ ಕಾಣಬಹುದು. ಮದುವೆ ಚಪ್ಪರದಲ್ಲಿ ಒಬ್ಬರನೊಬ್ಬರು ನೋಡದೆ ಮಾಲೆ ಹಾಕಿ ವಿವಾಹವಾದವರು ತಾವು ವಿವಾಹವಾದುದ್ದನ್ನೇ ಮರೆತು, ಮತ್ತೆಲ್ಲೋ ಪರಸ್ಪರ ನೋಡಿ, ಪ್ರೀತಿಸಿ ಆ ಪ್ರೀತಿಗೆ ಅದು ಎರವಲಾಗಬೇಕಲ್ಲ ಎಂದು ನೊಂದು ಬಳಲಿ ಹಣ್ಣಾಗಿ ಕಡೆಗೆ ಮದುವೆಯಾಗಿರುವುದು ತಮ್ಮಿಬ್ಬರಿಗೇ ಎಂದು ಅರಿವಾಗಿ ನಕ್ಕು ಹಗುರಾಗುವ ಕಥೆಯನ್ನು ಒಂದು ಚಿತ್ರ ಕಥೆಯಲ್ಲಿ ಕಾಣಬಹುದು. ಆರಂಭದಿಂದಲೂ ಗಂಭೀರವಾಗಿ ಮೂಡಿ ಬರುವ ಕಥೆ ಆಶ್ಚರ್ಯಕರವಾದ ಹಾಸ್ಯದಲ್ಲಿ ಕಥೆ ಅಂತ್ಯಕಾಣುತ್ತದೆ.

'ಪಾಪನ ಮದುವೆ' ಕಥೆಯಲ್ಲಿ ತನ್ನನ್ನು ಮದುವೆಯಾಗಬೇಕಾದವಳು ಹಾಗಿರಬೇಕು, ಹೀಗಿರಬೇಕು, ತಾನು ಕೇಳುವ ಎಲ್ಲಾ ಪ್ರಶ್ನೆಗಳಿಗೂ ಉತ್ತರ ಕೊಡಬೇಕು, ಮುಂತಾಗಿ ಹಾರಾಡಿದ ವರ ಮಹಾಶಯ ವಧು ಪರೀಕ್ಷೆಯಲ್ಲಿ ವಧುವನ್ನು ನೋಡಿ, ಸೋತು, ಸುಸ್ತಾಗಿ ಅವಳಿಗಾಗಿ ಪರಿತಪಿಸುವ ಹಂತ ತಲುಪುವುದನ್ನು ಈ ಕಥೆಯಲ್ಲಿ ಕಾಣಬಹುದು.

[illegible]

[illegible]

[illegible]

[illegible]

ಹೀಗೆ ಈ ನಾಲ್ಕು ಕಥೆಗಳದ್ದು ನಿಶ್ಚಿತವಾದ ಪ್ರಾರಂಭ, ನಿರ್ಧರಿತವಾದ ಅಂತ್ಯ, ಎಲ್ಲಿಯೂ ಬದಲಾವಣೆಗಳಿಗೆ ಅವಕಾಶವಿಲ್ಲ. ಎಳೆಯ ಜೀವಿಗಳಲ್ಲಿ ಉತ್ಪತ್ತಿಯಾಗುವ ಪ್ರೀತಿ, ಅದು ಮಿಡಿಯುವ ಬಗೆ, ಮದುವೆಯಲ್ಲಿ ಅಂತ್ಯವಾಗುವ ಅದರ ಮಧುರತೆ ಇಷ್ಟಕ್ಕೆ ಮಾತ್ರ ಲೇಖಕಿ ಮನಸ್ಸು ಕೊಟ್ಟು ಅದೇ ಚೌಕಟ್ಟಿನಲ್ಲಿ ಕಥೆ ಹೆಣೆದಿದ್ದಾರೇನೋ ಎನಿಸುತ್ತದೆ.

ಗೌರಮ್ಮನ ಅಕಾಲಿಕ ನಿಧನದಿಂದ ಕನ್ನಡಕ್ಕಾದ ಹಾನಿ ಅಷ್ಟಿಷ್ಟಲ್ಲ ಎಂಬ ಬೇಂದ್ರೆಯವರ ಮಾತು (ಚಿಗುರು ಸಂಕಲನಕ್ಕೆ ಬರೆದ ಮುನ್ನುಡಿಯಲ್ಲಿ) ಉತ್ಪ್ರೇಕ್ಷೆ ಎನಿಸುವುದಿಲ್ಲ. ಸಮಾಜದ ಮೇಲ್ಪದರದ ಬದುಕು ಮಾತ್ರ ಗೌರಮ್ಮನ ಕತೆಗಳ ಮೂಲ ಸಾಮಗ್ರಿ ಆಗಿತ್ತು ಎಂಬುದನ್ನು ಮರೆಯಬಾರದು.

ಗೌರಮ್ಮನವರ ಪ್ರೀತಿ, ನೋವು ಎರಡನ್ನು ಹೃದಯಂಗಮವಾಗಿ ವರ್ಣಿಸುವ ರೀತಿ, ಸರಸ ಬರವಣಿಗೆಯ ಶೈಲಿ, ಕೆಲವೊಮ್ಮೆ ಕಾಗದಗಳ ಮೂಲಕ ಇಲ್ಲವೇ ದಿನಚರಿಯ ದಾಖಲೆಗಳ ಮೂಲಕವೇ ಕಥೆ ಕಟ್ಟುವ ಕುಶಲತೆ, ಸಮಾಜವನ್ನು ಸೂಕ್ಷ್ಮವಾಗಿ ವೀಕ್ಷಿಸಿ ಅದರ ಪ್ರತಿಯೊಂದು ಅಂಶವನ್ನೂ ಕಥೆಗಳಲ್ಲಿ ಅಳವಡಿಸಿಕೊಳ್ಳುವ ಜಾಣ್ಮೆ ಈ ಗುಣಗಳಿಂದ ಕೊಡಗಿನ ಗೌರಮ್ಮ ಇಂದಿಗೂ ಕನ್ನಡ 'ಕಥಾಲೋಕ'ದಲ್ಲಿ ಅಮರರಾಗಿದ್ದಾರೆ.

ಹೀಗೆ ಕನ್ನಡ ನಾಡಿನ ಪ್ರಸಿದ್ಧ ಮಹಿಳೆ ಕತೆಗಾರ್ತಿಯರಲ್ಲಿ ಒಬ್ಬರಾಗಿರುವ ಗೌರಮ್ಮನವರು ನಾಡಿನ ಶ್ರೇಷ್ಠ ಕತೆಗಾರ್ತಿಯಾಗಿದ್ದಾರೆ.

ಉಪಸಂಹಾರ

ನವೋದಯ ಕಾಲದಲ್ಲಿ ಬರೆಯಲು ಆರಂಭಿಸಿದ ಗೌರಮ್ಮ ಕನ್ನಡದ ಪ್ರಥಮ ಬಂಡಾಯ ಮತ್ತು ಸ್ತ್ರೀ ವಿಮೋಚನಾವಾದಿ ಮನೋಭಾವದ ಲೇಖಕಿ. ಮೂವತ್ತರ ದಶಕದಲ್ಲೇ ಮಹಿಳೆಯರ ಸಮಸ್ಯೆಗಳನ್ನು ಕುರಿತು ಬರೆಯಲು ಆರಂಭಿಸಿದ ಗೌರಮ್ಮ ತಮ್ಮ ಮೊದಲ ಕಥೆಯಾದ ಪುನರ್ವಿವಾಹದ ರಾಜಿಯಿಂದ ಹಿಡಿದು ಕೊನೆಯ ಕಥೆಯಾದ ಮುನ್ನಾದಿನದ ನಾಯಕಿ ಹುಸೇನ್ ಬೀ ಯಂಥ ನಾಯಕಿ ಪಾತ್ರಗಳು ಅವರ ಕಥೆಗಳಲ್ಲಿ ಸೊಗಸಾದ ಹೂವುಗಳ ಹಾಗೆ ಅರಳಿ ನಿಂತಿವೆ.

ಗೌರಮ್ಮನವರ ಕಥೆಗಳಲ್ಲಿನ ಪ್ರತಿಯೊಬ್ಬ ನಾಯಕಿಯರ ಜೀವನವು ಏರಿಳಿತಗಳಿಂದ ಕೂಡಿದ್ದು, ಕೆಲವು ನಾಯಕಿಯರ ಜೀವನ ಗುರಿಯನ್ನು ಮುಟ್ಟಿದರೆ ಇನ್ನು ಕೆಲವು ನಾಯಕಿಯರ ಜೀವನ ದುರಂತ ಅಂತ್ಯ ಕಾಣುತ್ತದೆ. ಒಟ್ಟಿನಲ್ಲಿ ಈ ನಾಯಕಿಯರ ವರ್ಣಮಯ ಬದುಕನ್ನು ಗೌರಮ್ಮನವರು ಈ ಕಥೆಗಳಲ್ಲಿ ಬಿಂಬಿಸಿದ್ದಾರೆ. ಕಣ್ಣ ಮುಂದೆಯೇ ಹೆಣ್ಣೊಬ್ಬಳು ರೋಧಿಸುತ್ತಿರುವಳೇನೋ ಎಂಬಂತೆ ನಾಯಕಿಯರು ಭಾವುಕರಾಗುತ್ತಾರೆ. ಕಣ್ಣಿಗೆ ಮುದ ಕೊಡುವ ಹಾಗೆ ನಗುತ್ತಾರೆ. ಪುನರ್ವಿವಾಹದ 'ರಾಜಿ' ತುಂಬಾ ಗಟ್ಟಿ ಪಾತ್ರವಾಗಿ ಮೂಡಿ ಬಂದರೆ, ವಾಣಿಯ ಸಮಸ್ಯೆಯ ಇಂದು, ಸುಳ್ಳು ಸ್ವಪ್ನದ 'ಸರಸಿ' ಒಂದು ಪುಟ್ಟ ಚಿತ್ರದ ಶಾಂತಿ ಅದೃಷ್ಟದ ಆಟದ 'ಲತಾ' ನಾಯಕಿ ಪಾತ್ರಗಳು ಮರೆಯಲಾಗದಂಥ ಪಾತ್ರಗಳಾಗಿ ಮನಸ್ಸಿನಲ್ಲಿ ಶಾಶ್ವತವಾಗಿ ನಿಲ್ಲುತ್ತವೆ. ಅದೇ ರೀತಿ ಕೌಸಲ್ಯ ನಂದನದ 'ಲಿನ್ನೀ', ಮರದ ಬೊಂಬೆಯ ಶೈಲಾ ಅತ್ಯಂತ ಲವಲವಿಕೆಯ ಪಾತ್ರಗಳಾಗಿ ಮನಸ್ಸಿಗೆ ಹರ್ಷವನ್ನುಂಟು ಮಾಡುತ್ತದೆ.

[illegible]

[illegible]

[illegible]

[illegible]

ಗೌರಮ್ಮನವರು ಆದಷ್ಟು ಮಟ್ಟಿಗೆ ಮಹಿಳಾ ಸಮಸ್ಯೆಯನ್ನು ಮತ ಅಥವಾ ಜಾತಿಯಿಂದ ಪ್ರತ್ಯೇಕಿಸಿ ನೋಡಲಾಗಿದೆ. ಜೊತೆಗೆ ಹೆಸರು ಕೊಡುವಾಗಲೂ ಎಚ್ಚರಿಕೆಯಿಂದ ಲಿನ್ನೀ, ವಾಣಿ, ಶಾಂತಿ, ಇಂದು ಇತ್ಯಾದಿ ಜಾತಿ ಸೂಚಕವಲ್ಲದ ನಾಮಪದಗಳನ್ನೇ ಬಳಸಿದ್ದಾರೆ.

ಗೌರಮ್ಮನವರ ಹೆಣ್ಣಿನ ಸೌಂದರ್ಯದ ಪರಿಕಲ್ಪನೆ ಕುತೂಹಲಕಾರಿಯಾದುದು. ಹಾಗೆಯೇ ವಿಶಿಷ್ಟವಾದುದೂ ಕೂಡ. ಇವರ ಕಥೆಗಳಲ್ಲಿ ಬರುವ ಬಹುಪಾಲು ಸ್ತ್ರೀ ಪಾತ್ರಗಳು ಸುಂದರಿಯರಲ್ಲ. ಆದರೆ ಸಂಪ್ರದಾಯಿಕವಾದ ಸ್ತ್ರೀಸೌಂದರ್ಯ ವರ್ಣನೆಗಳಿಂದ ಕಂಗೊಳಿಸುವುದಿಲ್ಲ. ದೈಹಿಕ ಸೌಂದರ್ಯಕ್ಕಿಂತ ಹೆಚ್ಚಾಗಿ ಆ ಪಾತ್ರಗಳ ಹೃದಯ ಸಂಪನ್ನತೆ, ಅನುಪಮವಾದ ನಡವಳಿಕೆ ಹಾಗೂ ಕಲೆಯ ಬಗೆಗಿನ ಸದಭಿರುಚಿಗಳು ಮೆಚ್ಚಿನ ಅಂಶಗಳಾಗಿ ಮೂಡಿ ಬರುತ್ತವೆ. ಮನುಷ್ಯನ ಅಂತರಾಳದಲ್ಲಿ ಹುದುಗಿರುವ ಇಂತಹ ಮಾನವೀಯ ಅಂಶಗಳ ಕಡೆಗೆ ಹೆಚ್ಚು ಗಮನ ಕೊಡುವುದು ಕಥೆಯ ವೈಚಾರಿಕ ನಿಲುವೂ ಆಗುತ್ತದೆ. ವಾಣಿಯ ಸಮಸ್ಯೆ ಅವಳ ಭಾಗ್ಯ, ಪ್ರಾಯಶ್ಚಿತ್ತ, ಹೋಗಿಯೇ ಬಿಟ್ಟಿದ್ದ, ಯಾರು ?, ಅದೃಷ್ಟದ ಆಟ- ಈ ಕಥೆಗಳ ಮುಖ್ಯ ಸ್ತ್ರೀ ಪಾತ್ರಗಳೆಲ್ಲಾ ಸಾಮಾನ್ಯ ಹೆಂಗಸರು. ಅವಳ ಭಾಗ್ಯ ಕಥೆಯಲ್ಲಿ ಪಾತ್ರವೊಂದು ಹೇಳುವ ಮಾತುಗಳು ಒಟ್ಟು ಕತೆಗಾರ್ತಿಯ ಜೀವನ ದೃಷ್ಟಿಯನ್ನೇ ಬಿಚ್ಚಿಡುತ್ತದೆ.

ಬಿಳಿಚರ್ಮ, ಉದ್ದವಾದ ಕೇಶರಾಶಿ, ಎಸಳುಮೂಗು, ಚೆಂದುಟಿಗಳು -ಇವೆಲ್ಲ ಇದ್ದರೇನೇ ಸೌಂದರ್ಯವೆಂದಿದ್ದ ನನ್ನ ಭಾವನೆ ಕ್ಷಣ ಮಾತ್ರದಲ್ಲಿ ಬದಲಾಯಿತು. ಸುಂದರವಲ್ಲದ ರೂಪದ ಒಳಗೂ ಅತ್ಯಂತ ಸುಂದರವಾದ ಹೃದಯಗಳಿರುವುವು ಎಂಬುದನ್ನು ಪಾರುವಿನ ಕಣ್ಣುಗಳು ನನಗೆ ತೋರಿಸಿಕೊಟ್ಟವು. ಮತ್ತೆ ಆ ಸುಂದರವಾದ ಹೃದಯ, ರೂಪ ಸೌಂದರ್ಯದಂತೆ

ಬಹುಬೇಗನೆ ಮಾಸದೆ ಸುಂದರವಾಗಿಯೇ ಇರುವುದು ಎಂಬುದು ಅರಿವನ್ನು ನನಗೆ ಮಾಡಿಕೊಟ್ಟವು ಆ ಪಾರುವಿನ ಕಣ್ಣುಗಳೇ.

ಒಟ್ಟಿನಲ್ಲಿ ಗೌರಮ್ಮನವರ ಕಲ್ಪನೆಯ ಕೂಸುಗಳಂತೆ ಮೂಡಿ ಬಂದಿರುವ ಈ ನಾಯಕಿಯರು ಈ ಕಥೆಗಳಲ್ಲಿ ಪ್ರಮುಖ ಪಾತ್ರ ವಹಿಸುತ್ತಾರೆ ಎಂದು ಹೇಳಬಹುದು.

ಲೇಖಕಿ ರಾಜವಾಡೆಯವರ ಬರಹದಲ್ಲಿ ವಾಚ್ಯವಾಗಿ, ಚರ್ಚೆ, ಘೋಷಣೆಯಾಗಿ ಪ್ರಕಟವಾಗುವ ವಿಚಾರಗಳು ಕೊಡಗಿನ ಗೌರಮ್ಮನವರಲ್ಲಿ ವ್ಯಂಗ್ಯವಾಗಿ ಧ್ವನಿಸುತ್ತವೆ. ಸ್ತ್ರೀಯರ ಬಗ್ಗೆ ಈ ಸಾಮಾಜಿಕ ವ್ಯವಸ್ಥೆ ರೂಪಿಸುವ ಮೌಲ್ಯಗಳು ಆಚರಣೆಯ ಹಂತದಲ್ಲಿ ಆಕೆಯ ಮಾನವೀಯ ಸ್ಥಿತಿಯನ್ನು ಅವಮಾನಿಸುವ, ಹತ್ತಿಕ್ಕುವ ರೀತಿಯಲ್ಲಿವೆ ಎಂಬ ಆಂತರಿಕ ತಳಮಳದ ಮೂಲವಾದ ಅರಿವಾಗಿ ಇಲ್ಲಿ ಪ್ರತಿಪಾದಿತವಾಗುತ್ತದೆ. ಈ ಅರಿವು ಮೂಡಿದಾಗ ಇಲ್ಲಿನ ನಾಯಕಿಯರೂ ಪ್ರತಿಕ್ರಿಯೆ ತೋರುತ್ತಾರೆ. ಆದರೆ ಅದು ಆತ್ಮಹತ್ಯೆ ಇಲ್ಲವೆ ಪಲಾಯನ, ಮತಾಂತರ ಅಥವಾ ತ್ಯಾಗದ ರೀತಿಯದು "ನಾಯಕಿಯರು ಸಮಸ್ಯೆಗೆ ಕಂಡುಕೊಂಡ ಪರಿಹಾರವಿದಾದರೂ ಲೇಖಕಿ ಕಥೆಯ ಮೂಲಕ ಅದನ್ನು ಬೆಂಬಲಿಸದೆ ಆ ಸ್ಥಿತಿಯ ಬಗ್ಗೆ ಜನರಲ್ಲಿ ವಿಚಾರ ಪ್ರಚೋದನೆಯಾಗುವ ರೀತಿಯಲ್ಲಿ ತಮ್ಮ ಕಥಾ ತಂತ್ರವನ್ನು ರೂಪಿಸಿಕೊಳ್ಳುತ್ತಾರೆ. ಸಮಸ್ಯೆಯನ್ನು ಚಿತ್ರಿಸಿದರೂ ಸುಲಭ ಪರಿಹಾರ ನೀಡಲಾಗದ ಕಲೆಯ ಬಿಕ್ಕಟ್ಟು ಮೊದಲ ಬಾರಿಗೆ ಇಲ್ಲಿ ಕಾಣಿಸಿ ಕೊಳ್ಳುತ್ತದೆ."[14]

ನವೋದಯ ಸಾಹಿತ್ಯ ಸಂದರ್ಭದಲ್ಲಿ ಕ್ರಿಯಾಶೀಲ ಲೇಖಕ ಲೇಖಕಿಯರೆಲ್ಲರೂ ಕುಟುಂಬ ಕೇಂದ್ರಿತವಾದ ನಿಲುವನ್ನು ತಳೆದವರು. ಆ ಕಾಲದ ಬರವಣಿಗೆಯು ಮಾನವೀಯ ಮೌಲ್ಯಗಳನ್ನು ಕುಟುಂಬದ ಚೌಕಟ್ಟಿನಲ್ಲಿಯೇ ಇಟ್ಟು ನೋಡಲು ಯತ್ನಿಸಿತು. ಮಹಿಳೆಯರ

[illegible]
[illegible]
[illegible]
[illegible]
[illegible]
[illegible]
[illegible]
[illegible]
[illegible]
[illegible]
[illegible]
[illegible]
[illegible]
[illegible]
[illegible]
[illegible]

ಬರಹಗಳು ವಿಶೇಷವಾಗಿ ಹೆಣ್ಣಿನ ನೋವನ್ನೂ ಗಮನಿಸಿದವು. ಆ ನೋವಿನ ಬೇರುಗಳನ್ನು ಕೀಳುವುದರಲ್ಲಿ ಸಂಘರ್ಷಕ್ಕಿಂತ ಹೊಂದಾಣಿಕೆಯ ಸುಧಾರಣೆಯ ಸೂತ್ರವನ್ನೆ ಬಹುವಾಗಿ ಒತ್ತಿ ಹೇಳಿದವು. ಪುರುಷ ಬರವಣಿಗೆಗಳಲ್ಲಿ ವ್ಯಕ್ತಿತ್ವದ ಬೆಳವಣಿಗೆಗೆ ಒತ್ತುಬಿದ್ದರೂ ಮಹಿಳೆಯರ ಬರವಣಿಗೆಗಳಲ್ಲಿ ಸಾಮಾಜಿಕ ಸ್ವರೂಪಕ್ಕೆ ಹೆಚ್ಚು ಗಮನ ಹರಿದಿವೆ.[15]

ಲೇಖಕರ ಕೃತಿಗಳಲ್ಲಿ ಸಮರ್ಥವಾದ ಸ್ತ್ರೀಪಾತ್ರಗಳು ಆ ಪಾತ್ರಗಳ ಮಾನಸಿಕ ಒಳತೋಟಿಗಳ ಸೂಕ್ಷ್ಮ ಚಿತ್ರಣ ಕಂಡುಬರುತ್ತದೆ. ಶ್ಯಾಮಲಾ ದೇವಿಯವರ ಕಥೆಗಳಲ್ಲಿ ಕಂಡುಬರುವ ಕಂತಿ, ದ್ಯಾವಕ್ಕ, ಗೌರಮ್ಮನವರ ಕಥೆಗಳಲ್ಲಿ ಬರುವ ರಾಜಿ, ಶಾಂತಿ ಪಾತ್ರಗಳನ್ನು ಬಿಟ್ಟರೆ ಗಟ್ಟಿಯಾದ ಸ್ತ್ರೀಪಾತ್ರಗಳ ಕೊರತೆಯನ್ನು ಈ ಲೇಖಕಿಯರ ಬರಹಗಳಲ್ಲಿ ಕಾಣಬಹುದಾಗಿದೆ. ಸ್ತ್ರೀ-ಪುರುಷರ ನಡುವಿನ ಸಾಮಾಜಿಕ ಬದಲಾವಣೆಯನ್ನು ಶ್ಯಾಮಲಾ ದೇವಿ ಮತ್ತು ಗೌರಮ್ಮನವರ ಕಥೆಗಳಲ್ಲಿ ಕಾಣುವಷ್ಟು ಗಾಢವಾಗಿ ಲೇಖಕರ ಕೃತಿಗಳಲ್ಲಿ ಕಂಡುಬರುವುದಿಲ್ಲ.

ಸ್ತ್ರೀಯ ಸಾಮಾಜಿಕ ಆಯಾಮದ ಬಗ್ಗೆ ಒತ್ತು, ಮಹಿಳೆಯರ ಕೃತಿಗಳಲ್ಲಿ ಪುರುಷರ ಕೃತಿಗಳಿಗಿಂತ ಹೆಚ್ಚು ಸ್ಪಷ್ಟವಾಗಿ ಒಡಮೂಡಿವೆ. ಸ್ತ್ರೀ ಶಿಕ್ಷಣವು ಸಂಸ್ಕೃತಿಯ ವಿಕಾಸಕ್ಕೆ ಹಾದಿ ಎನ್ನುವ ವ್ಯಾಖ್ಯಾನವು ಮೊದಲ ಬಾರಿಗೆ ನವೋದಯದ ಸಂದರ್ಭದಲ್ಲಿ ಮೂಡಿ ಬಂದಿತ್ತು. ಈ ಕಾರಣದಿಂದಾಗಿ ಸ್ತ್ರೀಯರನ್ನು ಕುರಿತು ಚಿಂತಿಸುವ ದೃಷ್ಟಿಯೇ ಬದಲಾಗಿತ್ತು. ಸ್ತ್ರೀಗೆ ಆರ್ಥಿಕ ಸ್ವಾತಂತ್ರ್ಯದ ಅಧಿಕಾರದ ಪರಿಕಲ್ಪನೆಗಳು ಮೂಡಿದವು. ಗೌರಮ್ಮ ಹಾಗೂ ಶ್ಯಾಮಲಾ ದೇವಿಯವರ ಕಥೆಗಳಲ್ಲಿ ಹೊಸ ಮಹಿಳೆಯರ ಅವಿರ್ಭಾವವಾಯಿತು. ವಿದ್ಯಾವಂತ, ಉದ್ಯೋಗಸ್ಥ, ಸ್ವತಂತ್ರ, ಸ್ವಾಭಿಮಾನೀ ಮಹಿಳೆಯರ ಮಾದರಿಗಳು ಇವರ ಕಥೆಗಳಲ್ಲಿ ಗೋಚರಿಸಿದವು.[16]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

ಪ್ರತ್ಯೇಕವಾದ ಮಹಿಳಾ ಚಳುವಳಿಯ ಆಶಯಗಳು ಈ ಸಂದರ್ಭದಲ್ಲಿ ಮೂಡಲಿಲ್ಲವಾದರೂ, ರಾಷ್ಟ್ರೀಯ ಚಳುವಳಿಯ ಆಶಯದೊಂದಿಗೆ ಸ್ತ್ರೀ ಚಳುವಳಿಯ ಆಶಯಗಳು ಸೇರಿಕೊಂಡವು.

ಹೀಗೆ ಕೊಡಗಿನ ಗೌರಮ್ಮನವರ ಎಲ್ಲ ಕತೆಗಳಲ್ಲೂ ಮಹಿಳಾ ಸಂವೇದನೆ ಪ್ರತಿಬಿಂಬಿತವಾಗುತ್ತದೆ. ಸಮಾಜದ ಬದಲಾವಣೆಯ ಹಾದಿಯಲ್ಲಿ ಇವರ ಪ್ರಾಮಾಣಿಕ ಪ್ರಯತ್ನವೂ ಇದೆ ಎಂಬುದನ್ನು ನಿಸ್ಸಂಕೋಚವಾಗಿ ಒಪ್ಪಬಹುದು. ಹೀಗೆ ಗೌರಮ್ಮನವರು ನವೋದಯ ಸಾಹಿತ್ಯ ಸಂದರ್ಭದಲ್ಲಿ ಕಂಡು ಬಂದ ಅಪರೂಪದ ಬರಹಗಾರ್ತಿಯಾಗಿದ್ದಾರೆ.

O

[illegible]

[illegible]

[illegible]

[illegible]

[illegible]

[illegible]

[illegible]

ಅಡಿ ಟಿಪ್ಪಣಿಗಳು

1. ಡಾ. ಜಿ.ಎಸ್. ಅಮೂರ್ - ಲೇ. ಅವಳ ಕಥೆಗಳು, ಪು. ಸಂ. 44.
2. ಟಿ.ಪಿ. ಅಶೋಕ್ - ಲೇ. ಕೊಡಗಿನ ಗೌರಮ್ಮನ ಕಥೆಗಳು, ಪು.ಸಂ. 109, (1991)
3. ಕಾಳೇಗೌಡ ನಾಗವಾರ - ಲೇ. ಜೀವನ ಪ್ರೀತಿ, ಪು.ಸಂ. 5.
4. ಕೆ.ಟಿ. ಕುರ್ತಕೋಟಿ - ಲೇ. ಯುಗಧರ್ಮ ಹಾಗೂ ಸಾಹಿತ್ಯ ದರ್ಶನ, ಪು. ಸಂ. 145.
5. ಕಾಳೇಗೌಡ ನಾಗವಾರ - ಲೇ. ಜೀವನ ಪ್ರೀತಿ, ಪು.ಸಂ. 54.
6. ಎನ್. ಗಾಯಿತ್ರಿ - ಲೇ. ನವೋದಯ ಸಾಹಿತ್ಯದಲ್ಲಿ ಸಂಸ್ಕೃತಿಯ ವಿಕಾಸ ಮತ್ತು ಸ್ತ್ರೀ, ಪು. ಸಂ. 114.
7. ಅದೇ, ಪು.ಸಂ. 118
8. ಬಿ.ಎನ್. ಸುಮಿತ್ರಾಬಾಯಿ-ಲೇ. ಕನ್ನಡದ ಮಹಿಳಾ ಸಾಹಿತ್ಯ ಮತ್ತು ಸ್ತ್ರೀತ್ವದ ಶೋಧ, ಪು.ಸಂ. 189.
9. ಡಾ.ವಿ.ಕೆ. ಮಣಿಮಾಲಿನಿ - ಲೇ. ಮಹಿಳಾ ಸಂವೇದನೆ(ಸಾಹಿತ್ಯ ವಿಮರ್ಶೆ), ಪು.ಸಂ. 163.
10. ಅದೇ, ಪು.ಸಂ. 193, (1998)
11. ಡಾ. ವಿಜಯಶ್ರೀ ಸಬರದ - ಲೇ. ಮಹಿಳಾ ಸಾಹಿತ್ಯದ ಇತ್ತೀಚಿ ಒಲವುಗಳು, ಪು.ಸಂ. 48.

12. ಕಾಳೇಗೌಡ ನಾಗವಾರ - ಪ್ರೀತಿ ಮತ್ತು ನಿರ್ಭೀತಿ, ಪು.ಸಂ. 47.

13. ಎಲ್.ಜಿ. ಮೀರಾ-ಲೇ. ಸ್ತ್ರೀವಾದಿ ತಾತ್ವಿಕತೆಯ ಸ್ವರೂಪ(ಸ್ತ್ರೀಸಂವೇದನೆಯಲ್ಲಿ ಕನ್ನಡ ಕಥನ-ಭಾಗ-1)

14. ತೇಜಸ್ವಿನಿ ನಿರಂಜನ-ಸೀಮಂತಿನಿ ನಿರಂಜನ- ಸ್ತ್ರೀವಾದಿ ಸಾಹಿತ್ಯ ವಿಮರ್ಶೆ.

15. ವಿಜಯಾದಬ್ಬೆ - ಶ್ಯಾಮಲಾ ಸಂಚಯ, ಪು.ಸಂ. 244.

16. ಕೆ. ಭೈರವಮೂರ್ತಿ - ಕೊಡಗಿನ ಗೌರಮ್ಮ(ಲೇಖನ ಸಂಗ್ರಾಮ) ಶಿವಮಯ, ಪು.ಸಂ. 743.

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

ಪರಾಮರ್ಶನ ಸಾಹಿತ್ಯ

1. ಶ್ಯಾಮಲಾ ಸಂಚಯ - ಸಂ. ವಿಜಯಾದಬ್ಬೆ

2. ಜೀವನಪ್ರೀತಿ - ಸಂ. ಡಾ. ಕಾಳೇಗೌಡ ನಾಗವಾರ

3. ವಿಜಯ - ಬಿ.ಎನ್. ಸುಮಿತ್ರಾಬಾಯಿ

4. ಶಿವಮಯ - ಕೆ. ಭೈರವ ಮೂರ್ತಿ ಅಭಿನಂದನಾ ಗ್ರಂಥ, ಪ್ರಧಾನ ಸಂ. ಹಾ.ಮಾ. ನಾ

5. ಯುಗಧರ್ಮ ಮತ್ತು ಸಾಹಿತ್ಯ ದರ್ಶನ -ಕೀರ್ತಿನಾಥ ಕುರ್ತಕೋಟಿ

6. ಕನ್ನಡ ಸಾಹಿತ್ಯ ಕೋಶ - ಸಂ. ರಾಜಪ್ಪ ದಳವಾಯಿ

7. ಸಾಹಿತ್ಯದಲ್ಲಿ ಪ್ರಗತಿ - ವಿ.ಕೃ. ಗೋಕಾಕ್

8. ಸಾಹಿತ್ಯ ಪ್ರಕಾರಗಳು - ಪಿ.ವಿ. ಶಾಸ್ತ್ರಿ

9. ಅವಳ ಕಥೆಗಳು - ಜಿ.ಎಸ್. ಅಮೂರ್

10. ಕನ್ನಡ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆಯ ಸ್ವರೂಪ - ಸಂ. ಬರಗೂರು ರಾಮಚಂದ್ರಪ್ಪ

11. ಸಾಹಿತ್ಯ ಸಂದರ್ಭ - ಟಿ.ಪಿ. ಅಶೋಕ್ (1991)

12. ಸ್ತ್ರೀವಾದಿ ಸಾಹಿತ್ಯ ವಿಮರ್ಶೆ - ಸಂ. ತೇಜಸ್ವಿನಿ ನಿರಂಜನ

13. ಸ್ತ್ರೀ ಸಂವೇದನೆಯಲ್ಲಿ ಕನ್ನಡ ಕಥನ - ಎಲ್.ಜಿ. ಮೀರಾ (2004)

14. ಸಾಹಿತ್ಯ ವಿಮರ್ಶೆ - (ಮಹಿಳಾ ಸಂವೇದನೆ) ಮಣಿಮಾಲಿನಿ. ವಿ.ಕೆ.

15. ಪ್ರೀತಿ -ನಿರ್ಭೀತಿ -ಲೇ. ಕಾಳೇಗೌಡ ನಾಗವಾರ

16. ಸಾಲು ದೀಪಗಳು -ಸಂ. ಡಾ. ಸಿದ್ಧಲಿಂಗಯ್ಯ

17. ಕನ್ನಡ ಸಾಹಿತ್ಯ ಚರಿತ್ರೆ -ರಂ.ಶ್ರೀ ಮುಗಳಿ

18. ಕನ್ನಡ ಸಾಹಿತ್ಯ ಚರಿತ್ರೆ - ತ.ಸು. ಶಾಮರಾಯರು

****